
ಲಂಕೇಶ ಬೋಧನೆ ಪ್ರಬೋದನೆ

ಗೌರಿ ಲಂಕೇಶ್


ಮಾರ್ಚ್ 19, 2014 ಪುಟ 20 ರೂ. 15/-



ಪಾಪದ ಕೊಡ ಭರ್ತಿ!

ಅಂಡರ್ ರಜನಿ ಕೇರ್!






ಹೈದರಾಬಾದ್ ಕರ್ನಾಟಕ ವಿಶೇಷಾಂಕ

ಕುಂ. ವೀರಭದ್ರಪ್ಪ
ರಂಜಾನ್ ದರ್ಗಾ
ಅಲ್ಲಮಪ್ರಭು ಬೆಟ್ಟದೂರು
ಎಚ್.ಎಸ್.ಪಾಟೀಲ
ಅರುಣ್ ಜೋಳದಕೂಡ್ಲಿಗಿ
ಕಲಿಗಣನಾಥ ಗುಡದೂರು
ಡಾ.ರಝಾಕ್ ಉಸ್ತಾದ್
ರಮೇಶ್ ಅರೋಲಿ
ಟಿ.ಆರ್.ಚಂದ್ರಶೇಖರ

ಲಂಕೇಶ್ ಮತ್ತು ಪಬ್ಲಿಕ್ ಸ್ಪಿಯರ್



ದೂರ ಸರಿಯುವಂತೆಯೂ ಆಗುತ್ತಿದೆ.

ಇಂದು ಒಂದೊಂದು ಜಾತಿಯ ಜನರೂ ತಮ್ಮ ತಮ್ಮ ಸಮ್ಮೇಳನಗಳನ್ನು ಮಾಡುವಾಗ, ಸಮ್ಮೇಳನದ ವೇದಿಕೆ, ಬ್ಯಾನರ್, ಪೋಸ್ಟರ್‌ಗಳಲ್ಲೆಲ್ಲಾ 'ತಮ್ಮ ಕುಲ ಪುರುಷನ' ಪೇಂಟಿಂಗ್ ಒಂದು ರಾರಾಜಿಸುವಂತೆ ಮಾಡುತ್ತಾರೆ. ಇಂತಹುದೇ ದಿನದಂದು ಆತ ಅಥವಾ ಆಕೆ ಹುಟ್ಟಿದ್ದೆಂದೂ ಪತ್ತೆ ಹಚ್ಚಿ ಬಿಡುತ್ತಾರೆ. ಆ ದಿನ ಸರ್ಕಾರ ರಜೆ ಘೋಷಿಸಬೇಕು; ಆ ವ್ಯಕ್ತಿಯ ಜಯಂತಿಯನ್ನು ಸರ್ಕಾರೀ ಕಾರ್ಯಕ್ರಮವನ್ನಾಗಿ ಮಾಡಬೇಕು; ಆ ವ್ಯಕ್ತಿಯ ಹೆಸರಲ್ಲಿ ಪೀಠಗಳನ್ನು ತೆರೆಯಬೇಕು; ಅದೇ ಹೆಸರಿನ ಮಠಕ್ಕೆ ಇಂತಿಷ್ಟು

ಭಾರೀ ಬೃಹತ್ ಸಮ್ಮೇಳನವೂ ಅದೇ ಸಂದರ್ಭದಲ್ಲಿ ನಡೆಯಿತು. ಅದಕ್ಕೆ ಪರ್ಯಾಯವೆಂಬಂತೆ ಆ ನಂತರ ಬಿಜೆಪಿಯೊಳಗಿನ ಒಕ್ಕಲಿಗ ನಾಯಕರನ್ನು ಮಿಂಚಿಸಲೆಂದು ಬಾಲಗಂಗಾಧರರಿಗೆ ಗುರುವಂದನೆ ಎಂಬ ಹೆಸರಿನಲ್ಲಿ ಒಕ್ಕಲಿಗರ ಸಮ್ಮೇಳನವೂ ನಡೆದುಹೋಯಿತು.

ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ನಂತರ ಅದು ಇನ್ನೊಂದು ರೂಪದಲ್ಲಿ ಮುಂದುವರೆಯುತ್ತಿದೆ. ಈ ಕುರಿತು ಇರುವ ಒಂದು ಚರ್ಚೆ, ಯಡಿಯೂರಪ್ಪನವರು ನಡೆಸಿದ ಜಾತಿ ಸಮ್ಮೇಳನಗಳಿಗೂ, ಸಿದ್ದರಾಮಯ್ಯನವರ ಬೆಂಬಲಕ್ಕೆಂದು

ಇದನ್ನು ದಲಿತ ಮತ್ತು ಹಿಂದುಳಿದ ಜಾತಿಗ
ಚಳವಳಿಗೆ ಹೋಲಿಸಿ ನೋಡೋಣ. ಅಲ್ಲೂ ಮಧ್ಯ
ಮತ್ತು ಮೇಲಿನ ವರ್ಗಗಳು ಒಂದಷ್ಟು ಲಾಭವನ್ನು ಪಡೆದು
ನಿಜವೇ ಆದರೂ, ಇಡೀ ಸಮುದಾಯ ಸ್ವಾಭಿಮಾನವ
ಮತ್ತು ಅವಕಾಶಗಳನ್ನು ಗಳಿಸಿಕೊಳ್ಳಲು ಸಾಧ್ಯವಾಯಿತ
ಮೇಲಾಗಿ ದಲಿತ ಎಂದಾಗ ಅದು ನಿರ್ದಿಷ್ಟ ಜಾತಿಯನ
ಮಾತ್ರ ಎಂದಿಗೂ ಸೂಚಿಸಿರಲಿಲ್ಲ. ಈಗಲೂ ಇ
ಹೆಚ್ಚೆಂದರೆ ಅದು ಅಸ್ಪೃಶ್ಯ ಸಮುದಾಯಕ್ಕೆ ಮಾ
ಸೀಮಿತವಾಯಿತು ಎಂದು ಹೇಳಬಹುದು ಅಷ್ಟೆ
ದಲಿತರೆಂದರೆ ಎಲ್ಲಾ ಜಾತಿಯ ಬಡವರು ಎನ್ನುವ ಘೋಷ

ಜಾತಿ ಸಮ್ಮೇಳನಗಳು ಮತ್ತು ಜಾತಿ ವಿನಾಶದ ಕಾರ್ಯಕ್ರಮಕ್ಕೆ ತಿಲಾಂಜಲಿ

ಹಿರಿಯರಾದ ಸಿದ್ದನಗೌಡ ಪಾಟೀಲರು ಹೇಳಿದ ಒಂದು ಸ್ವಾರಸ್ಯಕರ (?) ಪ್ರಕರಣವಿದು. ರಾಯಚೂರು ಜಿಲ್ಲೆಯಲ್ಲಿ ಒಮ್ಮೆ ಕನಕ ಯಾತ್ರೆಯ ಕಾರ್ಯಕ್ರಮ ನಡೆಯುತ್ತಿತ್ತು, ಅದರ ಪ್ರಚಾರಕ್ಕೆಂದು ಆಟೋವೊಂದಕ್ಕೆ ಮೈಕ್ ಕಟ್ಟಿ ಊರೆಲ್ಲಾ ಸುತ್ತುತ್ತಿದ್ದರು. ಮೈಕ್‌ನಲ್ಲಿ ಮಾತನಾಡುತ್ತಿದ್ದ ವ್ಯಕ್ತಿ ಬಹಳ ಉತ್ಸಾಹದಿಂದ ಪ್ರಚಾರವನ್ನು ಮಾಡುತ್ತಿದ್ದ ಆತನ ಮಾತಿನ ಪರಿಯನ್ನು ನೋಡಿ ಕೇಳುಗರು ದಿಗ್ಭ್ರಾಂತರಾಗಿದ್ದರು. 'ಮಹನೀಯರೇ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮರೆಯದಿರಿ. ಕುಲಕುಲವೆಂದು ಹೊಡೆದಾಡದಿರಿ ಎಂದು ಲೋಕಕ್ಕೆಲ್ಲಾ ಸಾರಿದ ಕನಕದಾಸರ ರಥಯಾತ್ರೆ ಬರುತ್ತಿದೆ;. ಕುರುಬ ಬಾಂಧವರೆಲ್ಲಾ ಜಾಗೃತಗೊಳ್ಳಿ' ಹೀಗೇ ಆತನ ವಾಕ್‌ಝರಿ ಸಾಗಿತ್ತು.


ಹಾಗೆಯೇ ಸಂಗೊಳ್ಳಿ ರಾಯಣ್ಣನನ್ನು ಕುರುಬನನ್ನಾಗಿಸಲಾಗಿದೆ. ಕಿತ್ತೂರು ಚೆನ್ನಮ್ಮ ಲಿಂಗಾಯತಳೂ ಅಲ್ಲ; ಪಂಚಮಸಾಲಿ ಲಿಂಗಾಯತಳಾಗಿದ್ದಾಳೆ. ಕಳೆದ ವಾರ ನಡೆದ ಛಲವಾದಿ ಸಮ್ಮೇಳನದಲ್ಲಿ ಒನಕೆ ಓಬವ್ವಳ ಜಾತಿಯನ್ನು ಜಗಜ್ಜಾಹೀರುಮಾಡಲಾಗಿದೆ. ಇನ್ನೂ ಮುಂದಿನ ದಿನಗಳಲ್ಲಿ ಐತಿಹಾಸಿಕವಾಗಿ ಮಹತ್ವ ಪಡೆದ ಯಾವ್ಯಾವ ವ್ಯಕ್ತಿಗಳಿಗೆ ಏನೇನು ಕಾದಿದೆಯೋ ಗೊತ್ತಿಲ್ಲ. ಎಲ್ಲಕ್ಕಿಂತ ಹೆಚ್ಚು ಗಾಬರಿಯಾಗಿದ್ದು ಈಚೆಗೆ ನಡೆದ ಒಕ್ಕಲಿಗರ ಸಂಘದ ಚುನಾವಣೆಯ ಸಂದರ್ಭದಲ್ಲಿ, ಬಹುತೇಕ ಎಲ್ಲಾ ಅಭ್ಯರ್ಥಿಗಳು ಮೃತ ಆದಿಚುಂಚನಗಿರಿ ಸ್ವಾಮೀಜಿ ಬಾಲಗಂಗಾಧರರದ್ದು, ಅದೇ ಮಠದ ಹಾಲಿ ಸ್ವಾಮಿಯದ್ದು, ದೇವೇಗೌಡರ ಮಠದ ಚಂದ್ರಶೇಖರನಾಥರದ್ದು, ಹೊಸದಾಗಿ ಪ್ರವರ್ಧಮಾನಕ್ಕೆ ಬಂದಿರುವ ಶಿರಾ ಕಡೆಯ ಇನ್ನೊಬ್ಬ ಸ್ವಾಮಿಯದ್ದು ಫೋಟೋಗಳನ್ನು ಹಾಕಿಕೊಂಡಿದ್ದರು. ಅದರಲ್ಲಿ ಆಶ್ಚರ್ಯವಾಗಲೀ, ಆಘಾತವಾಗಲೀ ಆಗಲು ಏನೂ ಇಲ್ಲ, ಆದರೆ ಅದರ ಜೊತೆಗೆ ಕುವೆಂಪುರವರ ಫೋಟೋವನ್ನೂ ಬಹಳಷ್ಟು ಜನ ಹಾಕಿಕೊಂಡಿದ್ದರು!

ಪ್ರತಿಯೊಂದು ಸಮುದಾಯವೂ ತನ್ನನ್ನು ಒಂದು ಸಮುದಾಯವಾಗಿ ಸಂಘಟಿಸುವಾಗ, ಅದರ ಹೆಸರು ಮಾತ್ರ ಸಾಕಾಗುವುದಿಲ್ಲ. ಅದು ತನ್ನ ಹಿರಿಮೆಯನ್ನು ಹೇಳಿಕೊಳ್ಳಲು ಪುರಾಣ, ಇತಿಹಾಸಗಳಿಂದ ಕಥನಗಳನ್ನು ಹೆಕ್ಕಿ, ಅದರ ಜೊತೆ ಸಮೀಕರಿಸಿಕೊಳ್ಳುತ್ತದೆ. ಐತಿಹಾಸಿಕವಾಗಿ ಪ್ರಸಿದ್ಧರಾದ ವ್ಯಕ್ತಿಗಳನ್ನೂ ತನ್ನ ಸಮುದಾಯದ ಜೊತೆಗೆ ತಳಕು ಹಾಕುತ್ತದೆ. ಕೆಲವು ಸಾರಿ ಅದು ಎಷ್ಟು ಅಸಂಗತವಾಗಿರುತ್ತದೆಂದರೆ, ಅಂತಹ ವ್ಯಕ್ತಿಗಳು ತಮ್ಮ ಜೀವನದುದ್ದಕ್ಕೂ ಆ ಚೌಕಟ್ಟನ್ನು ಮುರಿಯಲೆಂದೇ ಪಾಡುಪಟ್ಟಿದ್ದರೂ, ಅವರ ನಂತರದ ನೂರು, ಸಾವಿರ ವರ್ಷಗಳ ನಂತರ ಅವರನ್ನು ಭದ್ರವಾಗಿ ಆಯಾ ಜಾತಿ ಯಾ ಉಪಜಾತಿಗಳಿಗೆ ಕಟ್ಟಿ ಹಾಕಲಾಗುತ್ತದೆ. ಇನ್ನೂ ಕೆಲವು ಬಾರಿ ಆ ಐತಿಹಾಸಿಕ ವ್ಯಕ್ತಿಯು ಬದುಕಿರಬಹುದಾದ ಕಾಲದಲ್ಲಿ, ಈಗಿನ ಜಾತಿ ವ್ಯವಸ್ಥೆಯೇ ಹುಟ್ಟಿರುವುದಿಲ್ಲ, ಆದರೂ ಯಾವುದೋ ಒಂದು ರೀತಿ ಆ ವ್ಯಕ್ತಿಯ ಕಸುಬಿನ ಬಗ್ಗೆ ಇರುವ ಐತಿಹ್ಯದ ಮೂಲಕ ಜಾತಿಯ ಲೇಬಲ್ಲನ್ನು ಅಂಟಿಸಲಾಗುತ್ತದೆ. ನಿಧಾನಕ್ಕೆ ಆ ಜಾತಿಯವರು ಬಿಟ್ಟು, ಮಿಕ್ಕವರು ಅಂತಹ ಪ್ರಸಿದ್ಧ ವ್ಯಕ್ತಿಗಳಿಂದ ಮಾನಸಿಕವಾಗಿ

ಕೋಟಿಗಳನ್ನು ನೀಡಬೇಕು ಎಂಬ ಬೇಡಿಕೆಗಳನ್ನು ಮಂಡಿಸಲಾಗುತ್ತದೆ. ಅವುಗಳಲ್ಲಿ ಕೆಲವಾದರೂ ಈಡೇರಲೆಂದೇ ಬಜೆಟ್ ಭಾಷಣದ ಒಂದಷ್ಟು ಭಾಗ ಮೀಸಲಾಗುತ್ತದೆ.

ಇದರ ಒಟ್ಟಾರೆ ದೀರ್ಘಕಾಲೀನ ಪರಿಣಾಮ ಏನಾಗಬಹುದು? ಅಂಬೇಡ್ಕರ್, ನಾರಾಯಣಗುರು, ಬಸವಣ್ಣರು ಸೇರಿದಂತೆ ನೂರಾರು ವಚನಕಾರರು, ಕುವೆಂಪು, ಕನಕದಾಸರೇ ಮುಂತಾದ ಹಲವಾರು ದಾರ್ಶನಿಕರು ಜಾತಿಯ ಚೌಕಟ್ಟನ್ನು ನಿರಾಕರಿಸದವರಲ್ಲವೇ? ಅಂಬೇಡ್ಕರ್‌ರ 'ಜಾತಿವಿನಾಶದ ಕುರಿತು' ಪುಸ್ತಕದ ಮಹತ್ವದ ಕುರಿತು ಈ ವಾರವಷ್ಟೇ ಅರುಂಧತಿ ರಾಯ್‌ರ ಕ್ಯಾರವಾನ್ ಲೇಖನದಲ್ಲಿ (The doctor and the saint) ಬಹಳ ಸೊಗಸಾಗಿ ಚಿತ್ರಿಸಲಾಗಿದೆ. ಅದೇ ಲೇಖನದಲ್ಲಿ ಜಾತಿ ವಿನಾಶವೆನ್ನುವುದು ಕೇವಲ ಒಂದು ಯುಟೋಪಿಯಾ (ಅಸಾಧ್ಯಾದರ್ಶ)ವಷ್ಟೇನಾ ಎಂಬುದನ್ನೂ ಚರ್ಚಿಸಲಾಗಿದೆ.

ನಡೆಯುತ್ತಿರುವ ಜಾತಿ ಸಮ್ಮೇಳನಗಳಿಗೂ ವ್ಯತ್ಯಾಸವಿದೆಯೇ ಇಲ್ಲವೇ ಎಂಬುದು. ಯಡಿಯೂರಪ್ಪನವರು ತಮ್ಮ ಹಾಗೂ ಬಿಜೆಪಿಯ ಅನುಕೂಲಕ್ಕೆಂದು, ಮೇಲ್ಜಾತಿಗಳ ಯಾಜಮಾನ್ಯದಡಿ ಉಳಿದವರನ್ನು ತರುವ ರೀತಿಯಲ್ಲಿ ಸಮ್ಮೇಳನಗಳನ್ನು ನಡೆಸಿದರು, ಆದರೆ ಸಿದ್ದರಾಮಯ್ಯನವರು ತಳಜಾತಿಗಳ ಸ್ವಾಭಿಮಾನದ ಸಮರ್ಥನೆಗಾಗಿ ಹಾಗೂ ಹಕ್ಕುಮಂಡನೆಗಾಗಿ ನಡೆದ ಸಮ್ಮೇಳನಗಳಲ್ಲಿ ಭಾಗವಹಿಸಿದರು ಎಂಬುದು ಒಂದು ವಾದ. ಇದರ ಜೊತೆಗೇ ಗಮನಿಸಬೇಕಾದ ಮತ್ತೂ ಒಂದು ಸಂಗತಿ ಇದೆ. ಅದೇನೆಂದರೆ, ಜಾತಿ ವ್ಯವಸ್ಥೆಯನ್ನು ಬದಲಿಸುವುದು ಎಂದರೆ, ಇದ್ದಕ್ಕಿದ್ದಂತೆ ಜಾತಿ ಐಡೆಂಟಿಟಿಗಳನ್ನು ಕಳೆದುಕೊಂಡುಬಿಡುವುದು ಎಂದಲ್ಲ (ಅದು ಆ ರೀತಿ ಸಾಧ್ಯವೂ ಇಲ್ಲ), ಬದಲಿಗೆ ಪ್ರತಿಯೊಂದು ಜಾತಿಯನ್ನೂ ಸಬಲೀಕರಣಗೊಳಿಸುವುದರ ಮೂಲಕ ಸಮಾನತೆಯನ್ನು ತರಲು ಯತ್ನಿಸುವುದು! ಈ ವಾದವು ಸಾಕಷ್ಟು ಕಾಲದಿಂದ



ಅಂತಹ ಯುಟೋಪಿಯಾಗಳ ಕನಸುಗಳನ್ನು ಹೊತ್ತವರೇ ನಮ್ಮ ನಾಡನ್ನು ಈಗಿರುವಷ್ಟಾದರೂ ಸಹ್ಯವನ್ನಾಗಿಸಿದ್ದಾರೆ. ಆದರೆ ಇಂದು ಅವರುಗಳದ್ದೇ ಫೋಟೋಗಳನ್ನು ಹಾಕಿಕೊಂಡು, ಜಾತಿಗಳದ್ದು ಮಾತ್ರವಲ್ಲ ಒಳಜಾತಿಗಳದ್ದೂ ಸಂಘಟನೆಗಳನ್ನು ಮಾಡಹೊರಟಿರುವುದರ ಪರಿಣಾಮಗಳನ್ನು ಗಂಭೀರವಾಗಿ ಚರ್ಚಿಸುವ ಅಗತ್ಯವಿದೆ.

ಕಳೆದ ಮೂರು ತಿಂಗಳಲ್ಲಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭಾಗವಹಿಸಿದ ಕನಿಷ್ಠ 8 ಜಾತಿ ಸಮ್ಮೇಳನಗಳು ನಡೆದಿವೆ. ಬಹುತೇಕ ಎಲ್ಲವೂ ಹಿಂದುಳಿದ ಜಾತಿಗಳಿಗೆ ಸೇರಿದಂಥವು. ಅದಕ್ಕೆ ಪರ್ಯಾಯವೇನೋ ಎಂಬಂತೆ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್‌ರನ್ನು ಬಿಂಬಿಸಿ ಛಲವಾದಿ ಮಹಾಸಭಾದ ಸಮ್ಮೇಳನವೂ ನಡೆದಿದೆ. ಇವೆಲ್ಲವೂ ಹೊಸದೇನಲ್ಲ, ಆದರೆ ಪ್ರತೀ ಜಾತಿಯದ್ದೂ ರಾಜ್ಯ ಮಟ್ಟದ ಸಮ್ಮೇಳನಗಳು ಸರಣಿಯಲ್ಲಿ ನಡೆದದ್ದು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ. ಚಿಕ್ಕದಾಗಿರುವ ಅಥವಾ ಭಾರೀ ಸಂಖ್ಯೆಯಲ್ಲಿರುವ ಜಾತಿಗಳ ಸಮ್ಮೇಳನಗಳೆಲ್ಲದರಲ್ಲೂ ಯಡಿಯೂರಪ್ಪನವರು ವಿರಾಜಿಸಿದರು. ಶಿವಮೊಗ್ಗದಲ್ಲೇ ತ್ರಿಮತಸ್ಥ ಬ್ರಾಹ್ಮಣರ ಸಮಾವೇಶದ ಹೆಸರಿನಲ್ಲಿ ನಡೆದ ಕಾರ್ಯಕ್ರಮಕ್ಕೂ ಯಡಿಯೂರಪ್ಪನವರ ಕೃಪಾಕಟಾಕ್ಷವಿತ್ತು. ವೀರಶೈವ ಮಹಾಸಭಾದ ಶತಮಾನೋತ್ಸವದ ಹೆಸರಿನಲ್ಲಿ ಲಿಂಗಾಯತರ

ಚಾಲ್ತಿಯಲ್ಲಿದೆ ಮತ್ತು ಇದರಲ್ಲಿ ಏನೂ ಹುರುಳಿಲ್ಲ ಎಂದು ಹೇಳಲಾಗುವುದಿಲ್ಲ.

ಏಕೆಂದರೆ ಸಂಪತ್ತಿನಲ್ಲಿ, ರಾಜಕೀಯ ಅಧಿಕಾರದಲ್ಲಿ, ವಿವಿಧ ಬಗೆಯ ಅವಕಾಶಗಳ ವಿಚಾರದಲ್ಲಿ ಸರಿಯಾದ ಪಾಲನ್ನು ಪಡೆಯದ ಎಲ್ಲಾ ಸಮುದಾಯಗಳನ್ನೂ ಈಗಿಂದೀಗಲೇ ನೀವು ನಿಮ್ಮ ಗುರುತುಗಳನ್ನು ತೊರೆಯಿರಿ, ಇನ್ನು ಎಲ್ಲರೂ ಸಮಾನ ಎಂದು ಘೋಷಿಸುವುದು ವಂಚಿತ ಸಮುದಾಯಗಳ ಪಾಲಿಗೆ ಘಾತುಕವಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಆದರೆ ಈ ಮೇಲೆ ಹೇಳಲಾದ ಜಾತಿ ಸಮ್ಮೇಳನಗಳಿಂದ ಪ್ರಧಾನವಾಗಿ ಅನುಕೂಲವಾಗುತ್ತಿರುವುದು ಆಯಾ ಸಮುದಾಯಗಳಲ್ಲೇ ಹೆಚ್ಚು ವಂಚಿತರಾದ ಕೆಳವರ್ಗ ಮತ್ತು ಮಧ್ಯಮ ವರ್ಗಕ್ಕೋ, ಅಥವಾ ಆಯಾ ಸಮುದಾಯಗಳ ಮೇಲ್ಮಧ್ಯಮ ವರ್ಗವನ್ನು ಬಳಸಿಕೊಂಡು ಅವರಲ್ಲೇ ಅಧಿಕಾರವನ್ನೋ, ಮಹತ್ತರವಾದ ಅವಕಾಶಗಳನ್ನೋ ಪಡೆಯಲು ಯತ್ನಿಸುತ್ತಿರುವ ಮೇಲ್ವರ್ಗಕ್ಕೋ. ಉತ್ತರ ಸ್ಪಷ್ಟವಾಗಿದೆ. ಇಂತಹ ಸಮ್ಮೇಳನಗಳಲ್ಲಿ ಮಹತ್ತರ ಪಾತ್ರವನ್ನು ವಹಿಸುವುದು, ಕಾಂಚಾಣ ಬಲವುಳ್ಳ ಆಯಾ ಸಮುದಾಯಗಳ ಅತ್ಯಂತ ಮೇಲಿನ ಸ್ತರವೇ ಆಗಿರುತ್ತದೆ. ಅದರ ಹೆಚ್ಚಿನ ಲಾಭವನ್ನು ಪಡೆಯುವುದೂ ಅವರೇ ಆಗಿರುತ್ತಾರೆ.

ಒಂದು ಕೋನದಲ್ಲಿ ಚೆನ್ನಾಗಿ ಕೇಳಿಸಿದರೂ, ಸಾಮಾಜಿ
ತಾರತಮ್ಯದ ಅಂಶವನ್ನು ಅದು ಒಂದು ಮಟ್ಟಿ
ಗೌಣಗೊಳಿಸುತ್ತಿತ್ತು, ಆದರೆ ಇಡೀ ಅಸ್ಪೃಶ್ಯ ಸಮುದಾಯ
ಮಾತ್ರ ಮೀಸಲಾದ ಚಳವಳಿಯನ್ನು ಕಟ್ಟಬೇಕಾದ ತುರ್ತು
ಅಂದೂ ಇತ್ತು, ಇಂದೂ ಇದೆ. ನೋವುಂಡ ಎ
ಸಮುದಾಯಗಳಿಗೂ ತನ್ನದೇ ಗುರುತಿನಡಿ ಸಂ
ಕಟ್ಟಿಕೊಳ್ಳುವ ಹಕ್ಕು ಇದ್ದೇ ಇರುತ್ತದೆ. ಆದರೆ ಇ
ಎಲ್ಲಾ ಶೋಷಿತ ಸಮುದಾಯಗಳನ್ನು ಒಳಗೊಳ್ಳುವ ವಿಶಾ
ವೇದಿಕೆಯಡಿ ಒಗ್ಗೂಡದೇ ಇದ್ದರೆ, ಅದರಿಂದ ಆಗು
ಅಪಾಯಗಳೂ ಗಂಭೀರವಾಗಿಯೇ ಇರುತ್ತವೆ.
ದೃಷ್ಟಿಯಿಂದ ಅಹಿಂದ ಒಂದು ಸಕಾರಾತ್ಮ
ಪ್ರಯೋಗವಾಗಿತ್ತು.

ಆದರೆ ಒಂದೊಂದು ಜಾತಿಯೊಳಗೂ ಜಾತಿ
ಸಂಖ್ಯಾಬಲವನ್ನೂ ಮೆಟ್ಟಿಲಾಗಿಸಿಕೊಂಡು ಮೇಲೇರ
ಬಯಸುವ ಮೇಲಿನವರಿಗೆ ಜಾತಿ/ಉಪಜಾತಿಗಳೂ ಅಸ್ತ್ರ
ಕೆಲಸಕ್ಕೆ ಬರುತ್ತವೆ. ಅದು ಹಿಂದುಳಿದ ಜಾತಿಗ
ವಿಚಾರದಲ್ಲೂ ನಿಜ, ದಲಿತ ಸಮುದಾಯದ ಒಳಗಿ
ಜಾತಿಗಳ ವಿಚಾರದಲ್ಲೂ ನಿಜ. ಇವನ್ನು ಪ್ರೋತ್ಸಾಹಿಸಿದ
ಜಾತಿವಿನಾಶವೆನ್ನುವುದು ಘೋಷಣೆಯಲ್ಲೂ ಉಳಿಯದ
ಹೋಗಿಬಿಡುವ ಅಪಾಯ ಉಂಟಾಗುತ್ತದೆ.

ಜಾತಿ ವ್ಯವಸ್ಥೆಯ ಅಪಾಯವಿರುವುದು ಪ್ರತ್ಯೇಕ
ದಮನ, ತಾರತಮ್ಯ, ಶ್ರೇಣೀಕರಣ ಮತ್ತು ಶೋಷಣೆ
ಅದು ಕಾರಣವಾಗಿದೆ ಎನ್ನುವುದರಲ್ಲಿ, ಈ ಐದು ಅಂಶಗಳ
ಒಂದಕ್ಕೊಂದು ಸಂಬಂಧವಿದೆ. ಎಲ್ಲವನ್ನೂ ಕೊನೆಗಾಣಿಸು
ಹೋರಾಟ ಮತ್ತು ಕಾರ್ಯಕ್ರಮಗಳನ್ನು ರೂಪಿಸಬೇಕಾ
ನಮ್ಮೆಲ್ಲರ ಕರ್ತವ್ಯವಾಗಿದೆ. ಶೋಷಿತ ಸಮುದಾಯಗ
ಸಬಲೀಕರಣಕ್ಕೆ ಹೆಚ್ಚಿನ ಪ್ರಾತಿನಿಧ್ಯ ಕೊಡುತ್ತಾ, ನಿಧಾನ
ಜಾತಿವಿನಾಶವೇ ಆಗಬೇಕೆನ್ನುವುದು ಅಂಬೇಡ್ಕರ
ಲೋಹಿಯಾ, ಕುವೆಂಪು ಥರದ ಎಲ್ಲಾ ದಾರ್ಶನಿಕ
ಕಂಡ ಕನಸಾಗಿತ್ತು. ಆದರೆ ಒಂದುಗೂಡಿಸ
ಕಾರ್ಯಕ್ರಮಗಳಾಗದೇ ಇದ್ದಲ್ಲಿ, ಜಾತಿ ಸಮ್ಮೇಳನಗ
ಜಾತಿ ವ್ಯವಸ್ಥೆಯನ್ನು ಮತ್ತಷ್ಟು ಸದೃಢೀಕರಿಸ
ಸಹಾಯಕವಾಗುವ ಸಾಧ್ಯತೆಯೇ ಹೆಚ
ಯಡಿಯೂರಪ್ಪನವರಿಗಿಂತ ಭಿನ್ನವಾಗಬೇಕೆಂ
ಸಿದ್ದರಾಮಯ್ಯನವರು ಬಯಸುವುದಾದರೆ ಅವರು ಇದ
ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಅದನ್ನು ಅಷ್ಟು ಸೂಕ್ಷ್ಮವಾಗಿ ಮತ್ತು ಗಂಭೀರವ
ತೆಗೆದುಕೊಳ್ಳುವ ಸ್ಥಿತಿಯಲ್ಲಿ ಅವರಿದ್ದಾರೋ ಇಲ್ಲವೋ
ಗೊತ್ತಿಲ್ಲ, ಇವತ್ತಿನ ರಾಜಕಾರಣದಲ್ಲಿ ಅಧಿಕಾರದ ಸ್ಥಾನಗ
ಏರಬೇಕೆಂದರೆ ಮತ್ತು ಅಲ್ಲಿ ಉಳಿಯಬೇಕೆಂ
ಮಾಡಲೇಬೇಕಾದ ಕಾರ್ಯಕ್ರಮಗಳನ್ನ
ಸಿದ್ದರಾಮಯ್ಯನವರೂ ಮಾಡುತ್ತಿದ್ದಾರೆ. ಹಾಗಾಗಿ ಎ
ಜಾತಿಗಳಲ್ಲಿ ಹುಟ್ಟಿರುವ ಪ್ರಜ್ಞಾವಂತರು ಜಾತಿ ವ್ಯವಸ್ಥೆ
ಎಲ್ಲಾ ಆಯಾಮಗಳನ್ನೂ ದುರ್ಬಲಗೊಳಿಸ
ಕಾರ್ಯಕ್ರಮಗಳನ್ನು ರೂಪಿಸುವ ಕೆಲಸಕ್ಕೆ ಕೈಹಾಕ
ಅಗತ್ಯವಂತೂ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಮುಖವಾಡಗಳು

ಯಾರದೊ ಹಾಡಿನ
ಮೋಡಿಗೆ ಮರುಳಾಗಿ
ಗೆಜ್ಜೆ ಕಟ್ಟಿ ಕುಣಿದಿದ್ದೇವೆ.
ಬಳಿದ ಬಣ್ಣ
ಅಳಿಸಿ ಹೋದಂತೆಲ್ಲ
ಮತ್ತೆ-ಮತ್ತೆ ಮೆತ್ತಿಕೊಂಡಿದ್ದೇವೆ

ಬಿಸಿಲು-ನೆಳಲು-ಬೆಳದಿಂಗಳು
ಹೊಟ್ಟೆಯಲ್ಲಿ ನಿಗಿ-ನಿಗಿ ಕೆಂಡ
ಹೊತ್ತೊತ್ತಿಗೆ ಬಣ್ಣ ಬದಲಿಸುವ




ಅಂಗಿ ತೊಟ್ಟಿದ್ದೇವೆ
ಲುಂಗಿ ಸುತ್ತಿದ್ದೇವೆ
ಸುಳ್ಳಿನ ಹೊದಿಕೆಯಲಿ
ಕೇಸರಿ-ಹಸಿರು-ಬಿಳಿ
ಸುತ್ತಿದ್ದೇವೆ
ರಾಮ-ಸೀತೆ ಆಗಿದ್ದೇವೆ
ದ್ರೌಪದಿ-ಪಾಂಡವರಾಗಿದ್ದೇವೆ

ಧೈರ್ಯ ಮಾಡಿ ಚಕ್ರವ್ಯೂಹ
ಹೊಕ್ಕಿದ್ದೇವೆ
ಮತ್ತದೇ ಅಭಿಮನ್ಯುವಿನ
ನೆನಪಾಗಿ ಸಮಸ್ತ
ಶಸ್ತ್ರಾಸ್ತ್ರ ಚೆಲ್ಲಿ

ರಾಜಿಯಾಗಿದ್ದೇವೆ
ತಲೆ ಉಳಿಸಿಕೊಂಡಿದ್ದಕ್ಕೆ
ಮೀಸೆ ತಿರುವುತ್ತ
ತರ-ತರದ ಮಾತಾಡಿದ್ದೇವೆ

ಧರ್ಮ-ಕರ್ಮ;
ಮಡಿ-ಮುಟ್ಟು ಎನ್ನುತ್ತ
ಎದೆ ತಟ್ಟಿದ್ದೇವೆ
ದೇಶಭಕ್ತರಾಗಿದ್ದೇವೆ
ವೇಷಗಳಲ್ಲೇ ಕಳೆದು ಹೋಗಿದ್ದೇವೆ.

ವಿವೇಕಾನಂದ ತಾಂಡೇಲ



ಭಾರತಕ್ಕೆ ನಿಜವಾಗಲೂ ಗಂಡಾಂತರ ಕಾದಿದೆ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಬಳಿದುಕೊಂಡಿರುವ ಕಾಂಗ್ರೆಸ್ ಈಗಲಾದರೂ ಎಚ್ಚೆತ್ತುಕೊಳ್ಳಲಿ. ಈ ಚುನಾವಣೆಯಲ್ಲಿ ಸೋತರೂ ಮುಂದಿನ ಬಾರಿ ಗಲ್ಲಲು ಏನೇನು ರಿಪೇರಿ ಮಾಡಿಕೊಳ್ಳಬೇಕೋ ಅಷ್ಟನ್ನಾದರೂ ಮಾಡಿಕೊಳ್ಳಲಿ. ವಿಪರ್ಯಾಸ ಎಂತಹದ್ದು ನೋಡಿ... ಈ ದೇಶದ ಹಲವಾರು ಅನಿಷ್ಟಗಳಿಗೆ ಕಾಂಗ್ರೆಸ್ ಪಕ್ಷವೇ ಕಾರಣವಾಗಿದ್ದರೂ ಮೋದಿ ಎಂಬ ಆರೆಸ್ಸೆಸ್ ದೆವ್ವವನ್ನು ತಡೆಯಲು ಕಾಂಗ್ರೆಸ್‌ನತ್ತ ನೋಡುವುದು ಅನಿವಾರ್ಯವಾಗಿದೆ...

ಈ ಬಾರಿ ಬೇರೆ ವಿಷಯದ ಬಗ್ಗೆ ಬರೆಯಬೇಕೆಂದಿದ್ದೆ. ಆದರೆ ನಿನ್ನೆ ಲೋಕಸಭಾ ಚುನಾವಣೆಗಳು ಪ್ರಕಟಗೊಂಡಿದ್ದರಿಂದ ಅದರ ಬಗ್ಗೆ ಒಂದೆರಡು ಮಾತುಗಳನ್ನು ಬರೆಯುವೆ. ಈ ಬಾರಿಯ ಚುನಾವಣೆಯ ಫಲಿತಾಂಶದ ಬಗ್ಗೆ ಜಾತ್ಯತೀತರಲ್ಲಿ, ಪ್ರಗತಿಪರರಲ್ಲಿ, ಮಾನವಹಕ್ಕು ಹೋರಾಟಗಾರರಲ್ಲಿ ಒಂದು ರೀತಿಯ ಆತಂಕ ಇದೆ. ದೇಶದಾದ್ಯಂತ ಸೈದ್ಧಾಂತಿಕ ಸ್ಪಷ್ಟತೆ ಇಲ್ಲದ, ರಾಜಕೀಯ ಅರಿವು ಹೆಚ್ಚಿಲ್ಲದ, ಆದರೂ ಹೊಸದಾಗಿ ಮತ ಹಾಕುವ ಹಕ್ಕನ್ನು ಪಡೆದಿರುವ ಯುವಕರಲ್ಲಿ ತುಂಬಾ ಜನ ಮೋದಿ ಎಂಬ ನರಹಂತಕನ ಅಸಲಿಯತ್ತು ತಿಳಿಯದೆ ಆತನನ್ನು ಬೆಂಬಲಿಸುತ್ತಿದ್ದಾರೆ.

ನೂರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಬೆಳೆದಿರುವ ಬಹುಸಂಸ್ಕೃತಿಯ ಬಗ್ಗೆ ಇವರಿಗೆ ಅರಿವಿಲ್ಲ. ಇಲ್ಲಿನ ಜಾತಿ ವ್ಯವಸ್ಥೆಯ ಧಾರುಣತೆ ಇವರನ್ನು ತಾಕುವುದಿಲ್ಲ. ಅನ್ಯಧರ್ಮೀಯರು ಎನ್ನುತ್ತಿದ್ದಂತೆ ಈ ಯುವಕರಿಗೆ ಮುಸಲ್ಮಾನರು ಪಾಕಿಸ್ತಾನಿಗಳಂತೆ ಕಾಣುತ್ತಾರೆಯೇ ಹೊರತು ಅವರೂ ಈ ನಾಡಿನವರು ಎಂದು ಅರ್ಥವಾಗುವುದಿಲ್ಲ. ಇವರ ತಲೆಯಲ್ಲಿ ತುಂಬಿರುವ ಕಲ್ಪಿತ 'ಹಿಂದೂ ಧರ್ಮ'ವು ನಿಜವಾಗಲೂ ಅಷ್ಟು ಶ್ರೇಷ್ಠವಾಗಿದ್ದರೆ ನಮ್ಮ ದೇಶದ ವಿವಿಧ ಭಾಗಗಳಲ್ಲಿ, ಕಾಲಗಳಲ್ಲಿ ಯಾಕೆ ಹತ್ತಾರು ಧರ್ಮಗಳು ಜನ್ಮವೆತ್ತುತ್ತಿದ್ದವು ಎಂಬ ಪ್ರಶ್ನೆ ಈ ಯುವಕರಲ್ಲಿ ಮೂಡುವುದಿಲ್ಲ.

ದೇಶದ ವಿಭಜನೆಗೆ ಕಾರಣ ಯಾರು, ಮಹಾತ್ಮ ಗಾಂಧಿಯನ್ನು ಕೊಂದದ್ದು ಯಾಕೆ, ಕಾಶ್ಮೀರದ ಜನರಿಗೆ ಭಾರತದ ಸರ್ಕಾರಗಳು ದಶಕಗಳಿಂದ ಮಾಡಿರುವ ಮೋಸ, ಆದಿವಾಸಿಗಳ ದಮನ, ದಲಿತರ ಮಾರಣಹೋಮ, ಮಹಿಳೆಯರಿಗೆ ಮಾಡಿರುವ ಅನ್ಯಾಯ...... ಇವುಗಳನ್ನು ಕುರಿತು ಪ್ರಶ್ನೆಗಳನ್ನು ಕೇಳುವಷ್ಟು ಎಚ್ಚರಿಕೆಯೂ ಯುವ ಪೀಳಿಗೆಯಲ್ಲಿ ಇಲ್ಲ.



ಇವರ ಪ್ರಕಾರ ಪ್ರಜಾಪ್ರಭುತ್ವವೆಂದರೆ ಬಹುಸಂಖ್ಯಾತರ ಆಳ್ವಿಕೆ ಆಗಿದೆಯೇ ಹೊರತು ಅದು ನಿಜವಾಗಲೂ ನಮ್ಮ ದೇಶದ ಅತಿ ಬಡವರ, ದಮನಿತರ, ಅಸಹಾಯಕ ಅಲ್ಪಸಂಖ್ಯಾತರ ಹಿತದೃಷ್ಟಿಯನ್ನು ಕಾಪಾಡುವ ವ್ಯವಸ್ಥೆಯಾಗಿರಬೇಕು ಎಂಬ ತಿಳಿವಳಿಕೆ ಇಲ್ಲ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಸದ್ಯದ ಚುನಾವಣೆಯ ಫಲಿತಾಂಶದ ಬಗ್ಗೆ ನನ್ನಂತವರಲ್ಲಿ ಆತಂಕ ಇರುವುದು ಸಹಜವೇ.

ಕೆಲವು ವಾರಗಳ ಹಿಂದೆ ಹೇಳಿದಂತೆ ಹಲವು ಸಮೀಕ್ಷೆಗಳ ಪ್ರಕಾರ ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಗುಂಪು ಇತರೆ ಗುಂಪುಗಳಿಗಿಂತ ಹೆಚ್ಚು ಸೀಟುಗಳನ್ನು ಗೆಲ್ಲುವ ಸಾಧ್ಯತೆ ಇದೆ. ಆದರೆ ಎನ್‌ಡಿಎ ಯಾವ ನಿಟ್ಟಿನಲ್ಲೂ 272 ಸೀಟುಗಳನ್ನು ಗೆದ್ದು ಸ್ಪಷ್ಟ ಬಹುಮತ ಪಡೆಯುವ ನಿರೀಕ್ಷೆಗಳಿಲ್ಲ. ಹಾಗೆಯೇ ಕಾಂಗ್ರೆಸ್ ನೇತೃತ್ವದ ಯುಪಿಎ ಮೂರನೆ ಬಾರಿಗೆ ಗೆಲುವು ಸಾಧಿಸುವುದೂ ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗಿದೆ. ಇನ್ನು ತೃತೀಯ ರಂಗವೂ ಅತಂತ್ರ ಸ್ಥಿತಿಯಲ್ಲಿದೆ. ಹಾಗಾದರೆ ಫಲಿತಾಂಶ ಹೊರಬಿದ್ದ ನಂತರ ಏನಾಗಬಹುದು?

ಹಲವರ ಅಂದಾಜಿನ ಪ್ರಕಾರ ಯಾರಿಗೂ ಸ್ಪಷ್ಟ ಬಹುಮತ ಸಿಗದಿರುವುದರಿಂದ ಯಾವ ಗುಂಪು ಸರ್ಕಾರ ಸ್ಥಾಪಿಸಿದರೂ ಅದು ಬಹಳ ಕಾಲ ಅಧಿಕಾರದಲ್ಲಿರುವುದಿಲ್ಲ. ಜೊತೆಗೆ ಜಾಗತಿಕ ಆರ್ಥಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ ಬರಲಿರುವ ಎರಡು ವರ್ಷಗಳು ಯಾವುದೇ ಸರ್ಕಾರದ ಮೇಲೆ ಹೆಚ್ಚು ಒತ್ತಡವನ್ನು ತರಲಿದೆ. ಪರಿಣಾಮವಾಗಿ ಇನ್ನೆರಡು ವರ್ಷಗಳಲ್ಲಿ ಮತ್ತೆ ಚುನಾವಣೆ ನಡೆಯುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ.

ಆಗ ಏನಾಗಬಹುದು?


'ಮೋದಿಗೆ ಬಹುಮತ ನೀಡಿ ನೋಡಿ. ನಾವು ಭಾರತವನ್ನು ವಿಕಾಸಗೊಳಿಸುತ್ತೇವೆ' ಎಂದು ಚೆಡ್ಡಿಗಳು ಬಾಯಿ ಬಡಿದುಕೊಳ್ಳಲಾರಂಭಿಸುತ್ತಾರೆ. ಅತಂತ್ರ ಸರ್ಕಾರದಿಂದ ಅಷ್ಟು ಹೊತ್ತಿಗೆ ಜನರೂ ರೋಸುತ್ತಿರುವುದರಿಂದ ಅವರೂ ಮೋದಿಗೆ ಸ್ಪಷ್ಟ ಜಯ ಕೊಟ್ಟರೂ ಕೊಡಬಹುದು.

ಆಗ ಭಾರತಕ್ಕೆ ನಿಜವಾಗಲೂ ಗಂಡಾಂತರ ಕಾದಿರುತ್ತದೆ.

ಕಾಂಗ್ರೆಸ್ ಈ ಬಾರಿ ಸೋಲುವುದು ನಿಶ್ಚಿತ. ಹತ್ತಾರು ಹಗರಣಗಳಿಂದ ಮೈತುಂಬ ಮಸಿ

ಕಪ್ಪು 'ಸುಂದರಿ'ಯೊಬ್ಬಳ ಅರ್ಥಗರ್ಭಿತ ಮಾತು

ಇತ್ತೀಚೆಗೆ 'ಟ್ವೆಲ್ವ್ ಈಯರ್ಸ್ ಎ ಸ್ಲೇವ್' ಎಂಬ ಸಿನಿಮಾದಲ್ಲಿನ ಪೋಷಕ ನಟಿ ಪಾತ್ರಕ್ಕೆ ಲುಪಿಟಾ ನ್ಯೊಂಗೋ ಎಂಬ ಆಫ್ರಿಕಾದ ಯುವತಿ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಪಡೆದಳು. ಆಕೆ ನಟಿಸಿದ ಚೊಚ್ಚಲ ಸಿನಿಮಾ ಇದು. ತನ್ನ ನಟನಾ ಸಾಮರ್ಥ್ಯದಿಂದಾಗಿ ಎಲ್ಲರ ಗಮನ ಸೆಳೆದಿರುವ ಲುಪಿಟಾ ಹೋದ ವಾರ ಒಂದು ಸಭೆಯಲ್ಲಿ ಸೌಂದರ್ಯ ಕುರಿತು ಒಂದು ಚಿಕ್ಕ ಭಾಷಣ ಮಾಡಿದಳು. ಬಿಳಿ ಮೈಬಣ್ಣವಿದ್ದರೆ ಸಾಕು, ಬೇರೆ ಯಾವುದೂ ಮುಖ್ಯವಲ್ಲ ಎಂದು ನಮ್ಮ ಸಮಾಜದ ಬಹಳಷ್ಟು ಜನ ಭಾವಿಸಿರುವುದರಿಂದ ಲುಪಿಟಾ ಎಂಬ ಕೃಷ್ಣ ವರ್ಣದ ಯುವತಿಯ ಭಾಷಣವನ್ನು ಇಲ್ಲಿ ಅನುವಾದಿಸಿ ಕೊಟ್ಟಿದ್ದೇವೆ:




ಸೌಂದರ್ಯದ ಬಗ್ಗೆ ಮಾತನಾಡಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ. ಕಪ್ಪು ಸೌಂದರ್ಯದ ಬಗ್ಗೆ, ಗಾಢ ಸೌಂದರ್ಯದ ಬಗ್ಗೆ ಮಾತನಾಡುತ್ತೇನೆ. ಇತ್ತೀಚೆಗೆ ಯುವತಿಯೊಬ್ಬಳು ನನಗೆ ಬರೆದ ಪತ್ರದ ಹಲವು ಸಾಲುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಆಕೆ ಹೀಗೆ ಬರೆದಿದ್ದಾಳೆ: "ಪ್ರೀತಿಯ ಲುಪಿಟಾ. ಇಷ್ಟು ಕಪ್ಪಗಿದ್ದರೂ ರಾತ್ರಿಬೆಳಗಾಗುವುದರೊಳಗೆ ಹಾಲಿವುಡ್‌ನಲ್ಲಿ ಯಶಸ್ಸು ಸಾಧಿಸಿರುವ ನೀನು ನಿಜವಾಗಲೂ ಅದೃಷ್ಟವಂತೆ. ನಾನು ಇನ್ನೇನು ನನ್ನ ಕಪ್ಪು ಮೈಬಣ್ಣವನ್ನು ಕೊಂಚ ಕಡಿಮೆ ಮಾಡುವ ಕ್ರೀಮ್ ಅನ್ನು ಖರೀದಿಸಬೇಕೆಂದಿದ್ದೆ. ಆದರೆ ನೀನು ವಿಶ್ವದ ನಕಾಶೆಯಲ್ಲಿ ಪ್ರತ್ಯಕ್ಷಳಾಗಿ ನನ್ನನ್ನು ಬಚಾವು ಮಾಡಿದೆ."

ಆ ಪದಗಳನ್ನು ಓದಿದಾಗ ನನ್ನ ಹೃದಯ ರಕ್ತ ಸುರಿಸಿತು. 'ದಿ ಕಲರ್ ಪರ್ಪಲ್' ಕಾದಂಬರಿಯ ಕಪ್ಪು ಮಹಿಳೆಯರು ನನ್ನ ಮೇಲೆ ಬೀರಿದ್ದ ಪ್ರಭಾವದಂತೆ ನಾನೂ ಕೂಡ ನನ್ನ ಓದು ಮುಗಿಸಿದ ನಂತರ ಮಾಡಿದ ಮೊದಲನೆ ಕೆಲಸವೇ ಇತರರ ಮೇಲೆ ಇಂತಹ ಪ್ರಭಾವ ಬೀರುತ್ತದೆಂದು ನಾನೆಂದೂ ಊಹಿಸಿರಲಿಲ್ಲ.

ನಾನು ಸುಂದರಿಯಲ್ಲ ಅಂದುಕೊಂಡಿದ್ದ ಸಮಯ ನನಗಿನ್ನೂ ನೆನಪಿದೆ. ನಾನು ಟಿವಿ ಆನ್ ಮಾಡಿದಾಗಲೆಲ್ಲ ನನಗೆ ಕಾಣಿಸುತ್ತಿದ್ದದ್ದು ಬಿಳಿಚಿಕೊಂಡಿದ್ದ ಮೈಬಣ್ಣದವರೇ. ಅವರೆಲ್ಲ ರಾತ್ರಿಯ ನನ್ನ ಮೈಬಣ್ಣವನ್ನು ಚುಡಾಯಿಸುತ್ತಿದ್ದರು, ಮೂದಲಿಸುತ್ತಿದ್ದರು. ನಾನು ಆ ಪವಾಡ ಪುರುಷ ದೇವರಲ್ಲಿ 'ನನಗೂ ಅವರಂತೆ ಬಿಳಿಯ ಬಣ್ಣವನ್ನು ಕೊಡು' ಎಂದು ಪ್ರತಿ ರಾತ್ರಿ ಪ್ರಾರ್ಥಿಸುತ್ತಿದ್ದೆ. ದೇವರ ನೆರವಿನಿಂದ ಬೆಳಗ್ಗೆಯಾದಾಗ ನನ್ನ ಮೈಬಣ್ಣ ಬದಲಾಗಿರುತ್ತದೆ ಎಂದು ಆಶಿಸುತ್ತಿದ್ದ ನಾನು ಎದ್ದೇಳುತ್ತಿದ್ದಂತೆ ಕನ್ನಡಿಯಲ್ಲಿ ನನ್ನ ಬಿಳಿ ಮುಖವನ್ನು ನೋಡಲು ಖಾತರಿಸುತ್ತಿದ್ದೆ. ಆದರೆ ಪ್ರತಿ ದಿನ ನಿರಾಶೆಗೊಳ್ಳುತ್ತಿದ್ದೆ. ಯಾಕೆಂದರೆ ನನ್ನ ಮೈಬಣ್ಣ ಹಿಂದಿನ ದಿನ ಇದ್ದಷ್ಟೇ ಕಪ್ಪಗಿರುತ್ತಿತ್ತು. ಆಗ ದೇವರೊಂದಿಗೆ ಚೌಕಾಸಿ ಮಾಡಲು ಯತ್ನಿಸಿದೆ. ನಾನು ಅವನಿಗಂದೆ: ನೀನು ನನಗೆ ಬೇಕಿರುವುದನ್ನು ಕೊಟ್ಟರೆ ನಾನು ಸಕ್ಕರೆ ಕದ್ದು ತಿನ್ನುವುದನ್ನು ನಿಲ್ಲಿಸುತ್ತೇನೆ; ಅಮ್ಮ ಹೇಳಿದ್ದನ್ನೆಲ್ಲ ಮಾಡುತ್ತೇನೆ; ಶಾಲೆಯಲ್ಲಿ ನನ್ನ ಸ್ವೆಟರ್ ಮರೆತು ಬರುವುದಿಲ್ಲ ಎಂದೆಲ್ಲ ಆಶ್ವಾಸನೆ ಕೊಟ್ಟೆ. ನಾನೊಡ್ಡಿದ ಆಮಿಷಗಳು ದೇವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ, ಆತ ನನ್ನ ಅಹವಾಲನ್ನೇ ಕೇಳಿಸಿಕೊಳ್ಳಲಿಲ್ಲ.

ನಾನು ಹದಿಹರೆಯದವಳಾದಾಗ, ಆ ವಯಸ್ಸಿಗೆ ಸಹಜವಾದಂತೆ, ನನ್ನ ಬಗೆಗಿನ ದ್ವೇಷ ಹೆಚ್ಚಾಯಿತು. ನನ್ನ ಅಮ್ಮ 'ನೀನು ಸುಂದರವಾಗಿದ್ದಿ' ಎಂದು ಹಲವಾರು ಬಾರಿ ನನಗೆ ಹೇಳುತ್ತಿದ್ದರು. ಆದರೆ ಅದರಿಂದ ನನಗೆ ಕಿಂಚಿತ್ತೂ ಸಮಾಧಾನವಾಗುತ್ತಿರಲಿಲ್ಲ. ಆಕೆ ನನ್ನ ಅಮ್ಮ, ಸಹಜವಾಗಿಯೇ ಆಕೆಯ ಕಣ್ಣಲ್ಲಿ ನಾನು ಸುಂದರಿ. ಆಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಲೆಕ್ ವೆಕ್

⏭ 06



ರಾಮದಾಸ್-ಪಾಪದ ಕೊಡ ಭರ್ತಿ!

ಸಾಂಸ್ಕೃತಿಕ ನಗರಿ ಮೈಸೂರಿನ ಬಿಜೆಪಿ ಧುರೀಣ, ಮಾಜಿ ಮಂತ್ರಿ ಗಿಲೀಟು ರಾಮದಾಸ್‌ನ ಪಾಪದ ಕೊಡ ತುಂಬಿಹೋಗಿರುವ ಎಲ್ಲಾ ಲಕ್ಷಣಗಳೂ ನಿಚ್ಚಳವಾಗಿ ಗೋಚರಿಸುತ್ತಿವೆ. ಮೊನ್ನೆ ಮೊನ್ನೆ ತಾನೇ ಈ 'ಅಖಂಡ ಬ್ರಹ್ಮಚಾರಿ'ಯ ವಿರುದ್ಧ ಆರೋಪಗಳು ಕೇಳಿ ಬಂದಾಗ ರಾಮದಾಸ ನಡೆಸಿದ 'ಆತ್ಮಹತ್ಯೆ' ಪ್ರಹಸನ ಇನ್ನೂ ಜನರ ಮನಸ್ಸಿನಲ್ಲಿ ಹಸಿಹಸಿಯಾಗಿರುವಾಗಲೇ ಈಗ ಮತ್ತೊಂದು ಪ್ರಕರಣ ಬರಸಿಡಿಲಿನಂತೆ ಅಪ್ಪಳಿಸಿದೆ.

ರಾಮದಾಸ ಆತ್ಮಹತ್ಯೆ ಪ್ರಸಂಗವೊಂದನ್ನು ಸೃಷ್ಟಿಸಿಕೊಂಡು ಜನರಿಗೆ ಮುಖ ತೋರಿಸಲಾಗದೆ ಮರೆಯಲ್ಲಿರಲು ಯತ್ನಿಸುತ್ತಿರುವಷ್ಟರಲ್ಲಿ ಭಾರೀ ಭೂತದಂಥಾ ಸಮಸ್ಯೆಯೊಂದು ರಾಮದಾಸನನ್ನು ಅಮರಿಕೊಂಡಿದೆ. ಕಪ್ಪುಹಣದ ಬಳಕೆಯ ಗುಮಾನಿ/ ಅಕ್ರಮ ಭೂಕಬಳಿಕೆ/ ಅಮಾಯಕರಿಗೆ ಸೈಟು ವಂಚನೆ/ ಕಾನೂನು ದುರ್ಬಳಕೆ/ ತೆರಿಗೆ ವಂಚನೆ - ಹೀಗೆ ನಾನಾ ಆಯಾಮವಿರುವ ಈ ಐನಾತಿ ಹಗರಣ ಬರೀ ರಾಮದಾಸ್ ಮಾತ್ರವಲ್ಲದೆ, ಆತನ ಜೊತೆಗೆ ರಾಜ್ಯದ ಬಿಜೆಪಿಗೆ ಮರ್ಮಾಂಗ ಪೆಟ್ಟುಕೊಡುವ ಸಕಲ ಅವಲಕ್ಷಣಗಳೂ ಕಾಣುತ್ತಿವೆ.

ಈ ಬಾರಿಯ ಈ ಆಘಾತಕ್ಕೆ ತಕ್ಷಣದ ಕಾರಣ ಮೈಸೂರು ನಗರಪಾಲಿಕೆ ಸದಸ್ಯೆ ಶ್ರೀಮತಿ ಉಮಾಮಣಿ ಕೊಟ್ಟ ದೂರು. ರಾಮದಾಸನ ಸೋದರ ಶ್ರೀಕಾಂತದಾಸ್ ಹೆಸರಿನಲ್ಲಿರುವ ಎಸ್ ಅಂಡ್ ಎಸ್ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯು ಮೈಸೂರು ನಗರದ ಸುತ್ತಮುತ್ತಲೂ ಹಲವಾರು ಬಡಾವಣೆಗಳನ್ನು ನಿರ್ಮಿಸಿ, ನಾನಾ ಅಕ್ರಮಗಳನ್ನು ಎಸಗಿರುವುದರಿಂದ ಈ ಬಗ್ಗೆ ತನಿಖೆ ಮಾಡುವಂತೆ ಇವರು ಡಿವಿಷನಲ್ ಕಮಿಷನರ್ ಶ್ರೀಮತಿ ಜಯಂತಿ ಅವರನ್ನು ಕೋರಿದ್ದಾರೆ.

ಹೇಳಿಕೇಳಿ ಈ ಕಂಪನಿ ಶುರುವಾಗಿ ಈಗಿನ್ನೂ 7 ವರ್ಷಗಳಷ್ಟೆ. ಆದರೆ ಅದರ ವಹಿವಾಟು, ವ್ಯವಹಾರಗಳನ್ನು ನೋಡಿದರೆ ಸ್ವತಃ ಯಡಿಯೂರಪ್ಪ ಪಟಾಲಂ, ರೆಡ್ಡಿ ಪಟಾಲಂಗಳು ಎಲ್ಲರೂ ಮೂಗಿನ ಮೇಲೆ ಬೆರಳಿಡಬೇಕು. ಈ ಕಂಪನಿಯ ವೆಬ್‌ಸೈಟ್‌ನಲ್ಲಿ ಘೋಷಿಸಿಕೊಂಡಂತೆ ಇದುವರೆಗೆ ಎಸ್ & ಎಸ್ 2600 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಒಟ್ಟು ಸುಮಾರು 25,000 ನಿವೇಶನಗಳನ್ನು ಅಭಿವೃದ್ಧಿಪಡಿಸಿರುವುದಾಗಿ/ಹಂಚಿರುವುದಾಗಿ ಹೇಳಿಕೊಂಡಿದೆ.

ಈಗ ಮೂಲಭೂತ ಪ್ರಶ್ನೆ ಇರುವುದು ಇಲ್ಲೇ. ಬರಿಗೈಯಲ್ಲಿ ಬಂದ ರಾಮದಾಸ್ ಸೋದರರು ಕೆಲವೇ ವರ್ಷಗಳಲ್ಲಿ ಇಷ್ಟೊಂದು ಭಾರೀ ಪ್ರಮಾಣದ - ಸಾವಿರಾರು ಕೋಟಿ ಮೊತ್ತದ ವಹಿವಾಟು ನಡೆಸಿದ್ದಾರೆಂದರೆ ಅಷ್ಟೊಂದು ಭಾರೀ ಮೊತ್ತದ ಮೂಲವೇನು? ಕೆಲವು ಊಹಾಪೋಹಗಳ ಪ್ರಕಾರ ಬಿಜೆಪಿ ಪಕ್ಷದಲ್ಲಿ ಬಲಿಷ್ಠ ಬಣದ ನಾಯಕನಾಗಿರುವ, ರಾಮದಾಸ್‌ನ ಕುಲಬಂಧುವೂ ಆಗಿರುವ ಕೇಂದ್ರದಲ್ಲಿ ಮಂತ್ರಿಯೂ ಆಗಿದ್ದ ಪ್ರಭಾವಿ ರಾಜಕಾರಣಿಯ ಕಪ್ಪುಹಣವೂ ಇದರಲ್ಲಿ ಸೇರಿದೆ ಎಂಬುದು. ಇದರ ಸತ್ಯಾಸತ್ಯತೆ ಬಗ್ಗೆ ಕಠಿಣ ತನಿಖೆಯ ಅಗತ್ಯವಂತೂ ಇದೆ.


ವಿಪರ್ಯಾಸ ನೋಡಿ. ವಿದೇಶದಿಂದ ಕಪ್ಪುಹಣ ವಾಪಸ್ ತರಿಸಬೇಕೆಂದು ಬಿಜೆಪಿಗಳು ಕಳೆದ ಐದಾರು ವರ್ಷಗಳಿಂದಲೂ ದೇಶದಾದ್ಯಂತ ಹಗಲು ವೇಷ ತೊಟ್ಟು ಕುಣಿಯುತ್ತಿದ್ದರೆ ಮೈಸೂರಿನ ರಾಮಭಕ್ತ ರಾಮದಾಸನ ಸೋದರನ ಕಂಪನಿ ತಾನೇ ಕಪ್ಪುಹಣದ ರೂವಾರಿಯಾಗಿರುವ ಬಗ್ಗೆ ಇಲಾಖೆಗಳಿಗೆ ಗುಮಾನಿ ಮೂಡಿ ತನಿಖೆ ಅಮರಿಕೊಂಡಿದೆ!

ಇಎಸ್ಎಸ್ ಮತ್ತು ಇಎಸ್ಎಸ್ ಸಂಸ್ಥೆಯ ಸದರಿ ಹಗರಣದಲ್ಲಿ ವ್ಯಾಪಕ ಕಪ್ಪು ಹಣ ಬಳಕೆಯಾಗಿದೆ; ಜಿಪಿಎ ಮೂಲಕ ರೈತರ ಕೃಷಿ ಜಮೀನುಗಳನ್ನು ಪಡೆದು ಬಡಾವಣೆಗಳನ್ನಾಗಿ ಪರಿವರ್ತಿಸಿ ನಿವೇಶನಗಳನ್ನು ರಚಿಸಲಾಗಿದೆ. ಈ ಹಂತದಲ್ಲಿ ಹಲವಾರು ರೈತರಿಗೆ ವಂಚಿಸಿದ ಬಗ್ಗೆಯೂ ದೂರುಗಳಿವೆ.

ಇದು ಒಂದು ಕಥೆಯಾದರೆ ಮತ್ತೊಂದು ಕಥೆ ನಿವೇಶನ ಬಯಸಿ ಅರ್ಜಿ ಸಲ್ಲಿಸುವವರಿಂದ ಸಾವಿರದಿಂದ ಹಿಡಿದು ಲಕ್ಷಾಂತರ ರೂಪಾಯಿವರೆಗೆ ಮುಂಗಡ ಹಣ/ ಅರ್ಜಿ ಶುಲ್ಕ ಪಡೆದು ಕೊನೆಗೆ ಸೈಟು ಕೊಡದೆ ವಂಚಿಸಿರುವ ಬಗ್ಗೆ ಬಂದಿರುವ ದೂರುಗಳಿಗೆ ಲೆಕ್ಕವೇ ಇಲ್ಲ. ಹೇಗೂ ಅಧಿಕಾರ ತಮ್ಮ ಕೈಯಲ್ಲೇ ಇದ್ದುದರಿಂದ ಮತ್ತು ಅಧಿಕಾರಿಗಳು ರಾಮದಾಸ್‌ನ ಪಾಕೆಟ್‌ನಲ್ಲೆ ಇದ್ದುದರಿಂದ ಯಾವುದೇ ದೂರು ಮುಂದಿನ ಹಂತಕ್ಕೆ ಹೋಗದಂತೆ ಯಶಸ್ವಿಯಾಗಿ ನೋಡಿಕೊಳ್ಳಲಾಗಿತ್ತು, ತೀರಾ ಪಟ್ಟುಹಿಡಿದು ತಿರುಗಿ ಬಿದ್ದ ಅರ್ಜಿದಾರರಿಗೆ ಮುಂದಿನ ಬಡಾವಣೆಗಳಲ್ಲಿ ನಿವೇಶನ ನೀಡುವುದಾಗಿ ಸಮಜಾಯಿಷಿ ಹೇಳಿ ಸಮಾಧಾನಪಡಿಸಲಾಗುತ್ತಿತ್ತು ಎಂದು ನಿವೇಶನಕ್ಕಾಗಿ ಹಣ ತೆತ್ತು ನೊಂದವರೇ ಹೇಳುತ್ತಿದ್ದಾರೆ.

ಎಸ್ & ಎಸ್ ವ್ಯವಹಾರಕ್ಕೆ ಮತ್ತೊಂದು ಆಯಾಮವೂ ಇದೆ. ಮೈಸೂರನ್ನು ಬೃಹತ್ ಮೈಸೂರು ನಗರವನ್ನಾಗಿ ಅಭಿವೃದ್ಧಿ ಮಾಡುವ ಯೋಜನೆ ಹೊರಬೀಳುತ್ತಿದ್ದಂತೆ ಈ ಕೂಟ ತಮ್ಮ ಅಧಿಕಾರ ಮತ್ತು ಹಣದ ಪ್ರಭಾವದಿಂದ ಈ ನೂತನ ಯೋಜನಾ ವ್ಯಾಪ್ತಿಯಲ್ಲಿ ಬರುವ ಸುಮಾರು 40 ಹಳ್ಳಿಗಳಲ್ಲಿ ಎಲ್ಲೆಲ್ಲಿ ಆಯಕಟ್ಟಿನ ಜಮೀನಿತ್ತೋ ಆ ರೈತರಿಂದ ಜಮೀನನ್ನು ಕಬಳಿಸಲು ನಾನಾ ಕುತಂತ್ರ ಮಾಡಿದ್ದಾರೆ. ಸದರಿ ಜಮೀನುಗಳು ಸರ್ಕಾರದಿಂದ ಸದ್ಯದಲ್ಲೇ ಭೂಸ್ವಾಧೀನವಾಗಲಿವೆಯೆಂದೂ, ಹಾಗಾದರೆ ರೈತರಿಗೆ ಹೆಚ್ಚಿನ ಪರಿಹಾರ ಸಿಗುವುದಿಲ್ಲವೆಂದೂ ರೈತರಲ್ಲಿ ಆತಂಕ ಹುಟ್ಟಿಸಿ, ನಂತರ ಈ ಕೂಡಲೇ ಜಮೀನು ಮಾರುವುದಾದರೆ ಹೆಚ್ಚಿನ ಬೆಲೆ ಕೊಡಿಸುತ್ತೇವೆಂದು ಆಮಿಷ ಒಡ್ಡಿ ಸಾವಿರಾರು ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದಾರೆಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ರೈತರ ಆಕ್ರೋಶಕ್ಕೆ ಮತ್ತೊಂದು ಕಾರಣವೇನೆಂದರೆ ಸದರಿ ಭೂಮಿಯ ಬೆಲೆ ಸುಮಾರು ಹತ್ತು ಪಟ್ಟು ಹೆಚ್ಚಿದ್ದು ತಮಗೆ ಆತಂಕ ಹುಟ್ಟಿಸಿ ಕಡಿಮೆ ಬೆಲೆಗೆ ಭೂಮಿ ಕಸಿದಿರುವುದು. ಈ ಬಗ್ಗೆ ಮತ್ತೊಂದು ಸ್ವತಂತ್ರ ತನಿಖೆಯೇ ಆದರೆ ಬಹುಶಃ ನೊಂದ ರೈತರಿಗೆ ನ್ಯಾಯ ಸಿಗಬಹುದು.

ಈ ಎಲ್ಲಾ ಸಂದರ್ಭಗಳಲ್ಲೂ ಈ ದಾಸ್ ಸೋದರರ ಕಂಪನಿ ಕರ್ನಾಟಕ ಭೂ ಕಂದಾಯ ಹಾಗೂ ಭೂ ಸುಧಾರಣಾ ಅಧಿನಿಯಮಗಳನ್ನು ಉಲ್ಲಂಘಿಸಿದೆ. ಇದಕ್ಕಾಗಿ ರಾಜಕೀಯ, ಹಣ ಮುಂತಾದ ಒತ್ತಡಗಳಿಗೆ ಗ್ರಾಮಲೆಕ್ಕಿಗರಿಂದ ಜಿಲ್ಲಾಧಿಕಾರಿ ತನಕ ಎಲ್ಲಾ ಕಂದಾಯ ಅಧಿಕಾರಿಗಳು ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸಹಕರಿಸುವ ಮೂಲಕ ಎಲ್ಲಾ ರೀತಿಯ ಅಕ್ರಮ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ತಿಳಿದುಬಂದಿದೆ ಎಂದು ಪ್ರಾದೇಶಿಕ ಆಯುಕ್ತರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



ಎಸ್ ಅಂಡ್ ಎಸ್ ಸಂಸ್ಥೆ ಅಭಿವೃದ್ಧಿಪಡಿಸಿದ ಒಂದು ಬಡಾವಣೆ

ಇದೇ ರಾಮದಾಸನನ್ನು ಬಿಜೆಪಿಗಳು ಹಾಡಿ ಹೊಗಳಿ ಅಟ್ಟಕ್ಕೇರಿಸಿ ತಮ್ಮ ಇಮೇಜು ಜಾಸ್ತಿ ಮಾಡಿಕೊಳ್ಳಲು ಬಳಸಿಕೊಳ್ಳುತ್ತಿದ್ದ ಕಾಲವೊಂದಿತ್ತು, ರಾಮದಾಸ್ ಅಖಂಡ ಬ್ರಹ್ಮಚಾರಿ, ಶುದ್ಧಹಸ್ತದ ರಾಜಕಾರಣಿ, ದೇಶಸೇವೆಯೊಂದನ್ನು ಬಿಟ್ಟರೆ ಈತನಿಗೆ ಬೇರೆ ಬದುಕೇ ಇಲ್ಲವೆನ್ನುವಂತಾ ಪ್ರಚಾರಗಳು ಸಾಕಷ್ಟು ಕೇಳಿಬರುತ್ತಿದ್ದವು. ಆದರೆ ಅಧಿಕಾರ ಕೈಗೆ ಸಿಕ್ಕ ಕೆಲವೇ ವರ್ಷಗಳಲ್ಲಿ ರಾಮದಾಸ್‌ನ ಹಗರಣಗಳು ಒಂದೊಂದಾಗಿ ಹೊರಬೀಳುತ್ತಿದ್ದಂತೆ ಕೇಸರಿ ಕೂಟ ಈ ಹಿಂದೂ ಶಿರೋಮಣಿಯ ಬಗ್ಗೆ ಬಾಯೇ ಬಿಚ್ಚುತ್ತಿಲ್ಲ. ಯಾಕೆಂದರೆ ಈತ ಎಂಥಾ ಭ್ರಷ್ಟ ರಾಜಕಾರಣಿಯೆಂಬುದು ಮೈಸೂರಿಗೆ ಮಾತ್ರವಲ್ಲ; ಇಡೀ ರಾಜ್ಯದ ಜನತೆಯ ಮುಂದೆ ಬಟಾಬಯಲಾಗಿ ನಿಂತಿದೆ.

ವಿಷಯ ಹೀಗಿದ್ದರೂ ಈತ ಎಂಥಾ ಐನಾತಿ ಎಂದರೆ ಆಗಾಗ್ಗೆ ಸಾಧ್ವಿ ಶಿರೋಮಣಿಯ ಪೋಸು ಕೊಡೋದನ್ನು ಎಂದಿಗೂ ಕೈಬಿಡಲಿಲ್ಲ, ಮರಳು ಲಾರಿಗಳಿಗೆ ಅವಕಾಶ ಮಾಡಿಕೊಟ್ಟರೆಂದು ನಸುಕಿನಲ್ಲೇ ಮಾಧ್ಯಮದವರನ್ನು ಕರೆದುಕೊಂಡು ಹೋಗಿ ದಾಳಿ ನಾಟಕ ನಡೆಸಿ, ಪೊಲೀಸ್ ಪೇದೆಯನ್ನೋ, ಎಸ್ಸೈ ಅನ್ನೋ ಸಸ್ಪೆಂಡ್ ಮಾಡಿ ಸುದ್ದಿ ಮಾಡಿಬಿಡುತ್ತಿದ್ದ, ಇಲ್ಲವೇ ಮೈಸೂರು ವಿವಿಯಲ್ಲಿ ಅಕ್ರಮ ನಡೆದಿದೆಯೆಂದೋ, ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲವೆಂದೋ ಪತ್ರಿಕಾಗೋಷ್ಠಿಯಲ್ಲಿ ಅರಚಿ ಸುದ್ದಿ ಮಾಡಿಬಿಡುತ್ತಿದ್ದ, ಇಲ್ಲವೇ ಸೀರೆ ಪಂಚೆ ಹಂಚುವಂಥಾ ಚೀಪ್‌ರೇಟ್ ಗಿಮಿಕ್ ನಡೆಸಿ ಪೋಸು ಕೊಡುತ್ತಿದ್ದ.

ರಾಮದಾಸನನ್ನು ಕೇಳಿದರೆ ಆತ ಹೇಳುವುದೇ ಬೇರೆ! ತನಗೆ ಸಂಸಾರ ಹೆಂಡತಿ ಮಕ್ಕಳು ಅಂತಾ ಯಾವುದೂ ಇಲ್ಲ, ಹಾಗೆಯೇ ತನ್ನನ್ನು ಅವಲಂಬಿಸಿರುವವರೂ ಯಾರೂ ಇಲ್ಲ, ಹಾಗಂತ ಈತ ಚುನಾವಣಾ ಆಯೋಗದೆದುರು ಘೋಷಿಸಿಕೊಂಡಿದ್ದಾನೆ.

ಆದರೆ ಜನಸಾಮಾನ್ಯರ ಜನರಲ್ ನಾಲೆಡ್ಜ್ ಪ್ರಕಾರ ರಾಮದಾಸ್ ಸದ್ಯ ಕರ್ನಾಟಕದ ಅತಿ ಶ್ರೀಮಂತ ರಾಜಕಾರಣಿಗಳಲ್ಲೊಬ್ಬ. ಈಗ ಈತನ ಎಲ್ಲ ಗಿಲೀಟು ಗಿಮಿಕ್‌ಗಳು ಹೋಲ್‌ಸೇಲ್ ಆಗಿ ಬಟಾಬಯಲಾಗಿ ಈ ಪಾಖಂಡಿ ರಾಜ್ಯದ ಜನತೆಯೆದುರು ಬೆತ್ತಲಾಗುತ್ತಿದ್ದಾನೆ.

ಈ ಎಲ್ಲ ತನಿಖೆಗಳು ಸರಿದಾರಿಯಲ್ಲಿ ನಡೆದರೆ ರಾಮದಾಸ್ ಸುತ್ತ ಹೆಣೆದುಕೊಂಡಿರುವ ಮತ್ತಷ್ಟು ಕಪ್ಪುಹಣದ ಕುಳಗಳು ಬಯಲಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ಅಂಥಾ ತನಿಖೆ ನಡೆಯುತ್ತದೆ ಎಂದು ಯಾರೂ ನಂಬುವ ಸ್ಥಿತಿಯಲ್ಲಿಲ್ಲ, ಆ ನಂಬಿಕೆಯನ್ನು ಪುನರ್‌ಸ್ಥಾಪಿಸಬೇಕಾದ ಹೊಣೆಗಾರಿಕೆ ಸಿದ್ದರಾಮಯ್ಯ ಸರ್ಕಾರದ ಮೇಲಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಲೇಔಟ್ ಹೆಸರಿನಲ್ಲೂ ಮಂಕುಬೂದಿ

ರಾಮದಾಸ್ ತನ್ನ ಸಹೋದರನ ಹೆಸರಿನಲ್ಲಿ ನಡೆಸಿರುವ ರಿಯಲ್ ಎಸ್ಟೇಟ್ ದಂಧೆಯಲ್ಲೂ ಧರ್ಮದ ಘಾಟು, ಗಿಲೀಟು ಗಿಮ್ಮಿಕ್ಕುಗಳನ್ನು ಹೇಗೆ ಬಳಸಿದ್ದಾನೆಂದು ನೋಡಿ.

ಈ ಬಡಾವಣೆಗಳ ಹೆಸರುಗಳನ್ನು ಗಮನಿಸಿ. ರಾಮದಾಸ್‌ನ ಆಷಾಢಭೂತಿ ಗಿಲೀಟು ತಂತ್ರ ಎಂಥದೆಂದು ಅರ್ಥವಾಗುತ್ತದೆ.

ಮೈಸೂರಿನ ಮೂಡಾ ಪರಿಧಿಯಲ್ಲಿ 131.17 ಎಕರೆ ವಿಸ್ತೀರ್ಣದಲ್ಲಿ 1410 ನಿವೇಶನಗಳ ಒಂದು ಬಡಾವಣೆ ನಿರ್ಮಿಸಲಾಗಿದೆ. ಇದರ ಹೆಸರು 'ಆನಂದ ಸಾಗರ ಲೇಔಟ್'! ಅದರ ಅಜುಬಾಜಿನಲ್ಲೇ 140.30 ಎಕರೆ ಪ್ರದೇಶದಲ್ಲಿ 1654 ನಿವೇಶನಗಳ ಒಂದು ಬಡಾವಣೆಯಿದೆ. ಅದರ ಹೆಸರು 'ನಿತ್ಯಾನಂದ ಸಾಗರ ಲೇಔಟ್'! ಹಾಗೇ ಮುಂದುವರೆದರೆ ಸುಮಾರು 61.5 ಎಕರೆ 815 ನಿವೇಶನಗಳ ಮತ್ತೊಂದು ಬಡಾವಣೆ ಸಿಗುತ್ತದೆ. ಅದು ಸುಖಾನಂದ ಸಾಗರ ಲೇಔಟ್! 90.28 ಎಕರೆ ವಿಸ್ತೀರ್ಣದಲ್ಲಿ 1040 ನಿವೇಶನಗಳುಳ್ಳ ಮತ್ತೊಂದು ಬಡಾವಣೆಯ ಹೆಸರು ಪರಮಾನಂದ ಸಾಗರ ಲೇಔಟ್! 155.1.21 ಎಕರೆಯಲ್ಲಿ 1826 ನಿವೇಶನಗಳ ಇನ್ನೊಂದು ಬಡಾವಣೆಗೆ ಅಮೃತಾನಂದ ಸಾಗರ ಲೇಔಟ್! ಈ ಮೇಲಿನ ಎಲ್ಲ ಬಡಾವಣೆಗಳೂ ಹುಣಸೂರು ರಸ್ತೆಯಲ್ಲೇ ಕೇಂದ್ರೀಕೃತವಾಗಿವೆ ಎಂಬುದು ಗಮನಿಸಬೇಕಾದ ಅಂಶ.

ಹೀಗೆ ಬಗೆಬಗೆಯ 'ಆನಂದ ಸಾಗರ'ಗಳಲ್ಲಿ ತೇಲಾಡಿದ ರಾಮದಾಸ್ ಸಹೋದರರು ಕುಬೇರಾನಂದ ಸಾಗರದಲ್ಲಿ ತೇಲುವುದು ಸಹಜ ತಾನೆ? ಅದರಂತೆ ಇಲವಾಲ-ಕೆ.ಆರ್.ನಗರ ರಸ್ತೆಯಲ್ಲಿ 177.33 ಎಕರೆ ವಿಸ್ತೀರ್ಣದಲ್ಲಿ 2062 ನಿವೇಶನಗಳ ಹುಗದೊಂದು ಬಡಾವಣೆ ನಿರ್ಮಿಸಿ ಅದಕ್ಕೆ ಕುಬೇರಾನಂದ ಸಾಗರ ಲೇಔಟ್ ಎಂದು ನಾಮಕರಣ ಮಾಡಿ ಕೃತಾರ್ಥರಾಗಿದ್ದಾರೆ!

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ 148.2.5 ಎಕರೆಯಲ್ಲಿ 1993 ನಿವೇಶನಗಳ ಲೇಔಟ್ ಮಾಡಿದ್ದಾರೆ. ಅದಕ್ಕೆ ಒಬ್ಬಳೇ ಚಾಮುಂಡಿ ಮಾತೆ ಯಾಕೆ ಅಂತ ಸಪ್ತಮಾತೃಕಾ ಲೇಔಟ್ ಅಂತ ಹೆಸರಿಟ್ಟಿದ್ದಾರೆ. ಇದಲ್ಲದೆ ವೈಷ್ಣವಿ ಭೂಮಿ, ಭುವನೇಶ್ವರಿ ಲೇಔಟ್, ತೃಪ್ತಿ ಲೇಔಟ್, ಸಫ್ವಾರಿ ಲೇಔಟ್, ಸ್ವಪ್ನ ಲೇಔಟ್, ಸೌರಿಷ್ ಲೇಔಟ್ - ಹೀಗೇ ಇವರ ಪಟ್ಟಿ ಮುಂದುವರೆಯುತ್ತದೆ.

ಇವುಗಳಲ್ಲದೆ ರಿಸರ್ವ್ ಬ್ಯಾಂಕ್ ನೌಕರರಿಂದ ಹಣ ಬಾಚಿ ಅವರಿಗಾಗಿ ನಿರ್ಮಿಸಿದ ಲೇಔಟ್‌ನ ಹೆಸರು ಇಂಟರೆಸ್ಟಿಂಗ್ ಆಗಿದೆ. ಅದು ಕರೆನ್ಸಿ ಲೇಔಟ್! ನಯವಂಚಕ ರಾಮದಾಸನ ಗಿಲೀಟು ನಾಮಕರಣ ತಂತ್ರವನ್ನು ಯಾರಾದರೂ ಮೆಚ್ಚಲೇಬೇಕು ಬಿಡಿ.

ಇಷ್ಟೇ ಅಲ್ಲದೆ, ದೂರದ ಹುಬ್ಬಳ್ಳಿ ಹತ್ತಿರ ಕೂಡ ಎಸ್ ಅಂಡ್ ಎಸ್ ಎಕೋ ವ್ಯಾಲಿ ಎಂಬ ಬಡಾವಣೆ ಕೂಡ ಈ ಸಂಸ್ಥೆಯ ಯೋಜನೆಗಳಲ್ಲಿ ಒಂದು. ಇನ್ನು ಯಾವ ಯಾವ ಊರಿನಲ್ಲಿ ಎಂತೆಂಥಾ ಗಿಮ್ಮಿಕ್ಕು ಮಾಡಿದ್ದಾರೆಂಬ ಬಗ್ಗೆ ಹೆಚ್ಚಿನ ತನಿಖೆ ಆಗಬೇಕಾಗಿದೆಯಷ್ಟೆ.

22 ವರ್ಷದ ಸ್ಕೂಟರೂ... 24 ಸಾವಿರ ಕೋಟಿಯೂ...

ಈ 420 ರಾಮದಾಸ ಕಳೆದ ಚುನಾವಣೆಯ ವೇಳೆಯಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಆಸ್ತಿ-ಪಾಸ್ತಿ ಘೋಷಣೆಯ ಪ್ರಕಾರ ಈತನಿಗೆ ವಾಸ ಮಾಡಲಿಕ್ಕೆ ಒಂದು ಸ್ವಂತ ಮನೆಯೂ ಇಲ್ಲ! ಹೋಗಲಿ, ರಾಜ್ಯಾದ್ಯಂತ ಸುತ್ತಾಡಿ 'ಜನಸೇವೆ' ಮಾಡಲಿಕ್ಕಾದರೂ ಒಂದು ಕಾರನ್ನಾದರೂ ಇಟ್ಟುಕೊಳ್ಳಬೇಕಿತ್ತಲ್ಲವೆ? ಅಂದರೆ ಪಾಪ, ಅದೂ ಇಲ್ಲ, ಇರೋದೊಂದೇ!

1992ನೇ ಇಸವಿಯ ಮಾಡೆಲ್‌ನ ಹೀರೋ ಹೊಂಡಾ ಮೋಟಾರ್ ಸೈಕಲ್! ಅಂದರೆ ಅದು ಈಗ 22 ವರ್ಷ ಹಳೆಯದು. ಪಾಪ ರಾಮದಾಸ್! ಇಂಥಾ ಸ್ಕೂಟರ್‌ನಲ್ಲಿ ಹೇಗೆ ಓಡಾಡುತ್ತಾನೋ ಆ ಕಷ್ಟವನ್ನು ದೇವರೇ ಬಲ್ಲ! ಇದೆಲ್ಲಾ ಪಕ್ಕಕ್ಕಿಡೋಣ. ಮೈಸೂರಿನ ಯಾವುದೇ ಮೂಲೆಗೆ ಹೋಗಿ, ನಿಮಗೆದುರಾಗುವ ಯಾವುದೇ ವ್ಯಕ್ತಿಯನ್ನು, ಇಲ್ಲಿ ರಾಮದಾಸ್ ಅವರ ಲೇಔಟ್ ಯಾವುದು? ಅಂತಲೋ ಅಥವಾ ರಾಮದಾಸ್‌ನ ಆಸ್ತಿ ಯಾವುದು ಅಂತಲೋ ಕೇಳಿದರೆ ಅಲ್ಲೇ ಅಕ್ಕಪಕ್ಕದಲ್ಲಿ ಒಂದು ಭವ್ಯ ಬಡಾವಣೆಯ ವಿಳಾಸವನ್ನೋ ಅಥವಾ ಕಟ್ಟಡವನ್ನೋ ತೋರಿಸುತ್ತಾರೆ. ಎಲ್ಲ ರಾಮದಾಸನ ಗ್ರಹಚಾರ! ಈ ಮೈಸೂರಿನ ಜನ ಇದ್ದುದ್ದನ್ನು ಇದ್ದಂಗೆ ಹೇಳೋದನ್ನು ಬಿಟ್ಟು, ರಾಮದಾಸ್‌ನ ಚುನಾವಣಾ ಘೋಷಣೆಯನ್ನು ನಂಬುವುದನ್ನು ಯಾವಾಗ ಅಭ್ಯಾಸ ಮಾಡಿಕೊಳ್ತಾರೋ ಗೊತ್ತಿಲ್ಲ. ಅಲ್ಲಿಯವರೆಗೆ ರಾಮದಾಸ್‌ಗಂತೂ ನೆಮ್ಮದಿಯಿಲ್ಲ.


ಜಿಲ್ಲಾಧಿಕಾರಿ ಶ್ರೀಮತಿ ಶಿಖಾ


ಆಯುಕ್ತೆ ಜಯಂತಿ


ಅದಿರಲಿ! ಈಗ ತನಿಖೆಗೆ ಆದೇಶಿಸಿರುವ ವಿಭಾಗೀಯ ಆಯುಕ್ತರಾದ ಜಯಂತಿಯವರು ಜಿಲ್ಲಾಧಿಕಾರಿ ಶ್ರೀಮತಿ ಶಿಖಾ ಅವರಿಗೆ ಬರೆದಿರುವ ಪತ್ರದ ಸಾರಾಂಶವನ್ನೇ ನೋಡಿ.


'ಎಸ್ ಅಂಡ್ ಎಸ್ ಸಂಸ್ಥೆಯು ತನ್ನ ವೆಬ್‌ಸೈಟ್ ಮಾಹಿತಿ ಪ್ರಕಾರವೇ ಅದು ಅಭಿವೃದ್ಧಿಪಡಿಸಿರುವ ಹಾಗೂ ಮಾರಾಟ ಮಾಡಿರುವ ನಿವೇಶನ, ಭೂಮಿಯ ಲೆಕ್ಕದ ಆಧಾರದ ಮೇಲೆ ಅಂದಾಜಿಸುವುದಾದರೆ ಸುಮಾರು 24 ಸಾವಿರ ಕೋಟಿ ರೂ. ವ್ಯವಹಾರ ನಡೆಸಿದೆ. ಕೇವಲ 7 ವರ್ಷಗಳ ಹಿಂದೆ ಆರಂಭವಾದ ಸಂಸ್ಥೆ ಈ ಬೃಹತ್ ಪ್ರಮಾಣದಲ್ಲಿ ಆರ್ಥಿಕ ವ್ಯವಹಾರ ನಡೆಸಲು ಹೇಗೆ ಸಾಧ್ಯ? ಈ ಹಿನ್ನೆಲೆಯಲ್ಲಿ ದೂರುದಾರರು ಕೇಂದ್ರ ಹಣಕಾಸು ಸಚಿವಾಲಯದ ಜಾರಿ ನಿರ್ದೇಶನಾಲಯಕ್ಕೆ ಎಸ್ ಅಂಡ್ ಎಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯ ಅಕ್ರಮ ಹಣದ ಬಗ್ಗೆ ತನಿಖೆ ನಡೆಸುವಂತೆ ಕೋರಿರುವುದರಿಂದ ಈ ಕಂಪನಿಯ ವಹಿವಾಟಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಒದಗಿಸಬೇಕು' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ.


ಅಕಟಕಟಾ! ಇದೇನು ಅನ್ಯಾಯ!! 22 ವರ್ಷ ಹಳೆಯದಾದ ಒಂದು ಕಿತ್ತುಹೋಗಿರುವ ಸ್ಕೂಟರ್‌ನ ಬಡಪಾಯಿ ಮಾಲಿಕನ ಮೇಲೆ 24 ಸಾವಿರ ಕೋಟಿ ವಹಿವಾಟಿನ ಆರೋಪ ಹೊರೆಸಿದರೆ ದೇವರು ಮೆಚ್ಚುತ್ತಾನೆಯೇ? ಶ್ರೀರಾಮಚಂದ್ರ ... ನೀನೇ ಕಾಪಾಡು!!

ಕರಾವಳಿ: ಅನಂತ್ಮಾಣಿ ಸಮಸ್ಯೆಗೆ ಸಂಘ ಪರಿವಾರ ಸುಸ್ತು!!

ಬಹುದಿನಗಳಿಂದ ಸಂಸದನಾಗುವ ಕನಸು ಕಾಣುತ್ತಿದ್ದ ಸಚ್ಚಿದಾನಂದ ಹೆಗಡೆ ಎಂಬ ಅಸಲೀ ಚೆಡ್ಡಿಯ ಬೆಂಬಲ ಕಾಗೇರಿಗೆ ಸಿಕ್ಕಿತ್ತು. ಒಂದು ಕಾಲದಲ್ಲಿ ವೈರಿಗಳಾಗಿದ್ದ ಈ ಮನುವಾದಿ ಪತ್ರಕರ್ತ ಸಚ್ಚಿ ಮತ್ತು ಎಬಿವಿಪಿ ಕ್ಯಾಡರಿನ ಕಾಗೇರಿ ರಾಜಿಯಾಗಿದ್ದರು ಅನಂತ್ಮಾಣಿಯ ಮಟ್ಟ ಹಾಕಲು. ಈ ಸಚ್ಚಿ ಸಾಮಾನ್ಯ ಹಿಂದೂವಾದಿಯಲ್ಲ. ಆರೆಸ್ಸೆಸ್‌ನ ಆಯಕಟ್ಟಿನ ಸ್ಥಾನದಲ್ಲಿರುವ ಭಾಗ್ವತ್-ಭಟ್-ಜೋಶಿಗಳ ನಿಕಟ ಒಡನಾಡಿ ಈತ. 'ವಿಶ್ವವಿಖ್ಯಾತ' ಪತ್ರಕರ್ತ ವಿಶ್ವೇಶ್ವರ ಭಟ್ಟರ ಸೋದರ ಮಾವ ಬೇರೆ. ಹೀಗಾಗಿ ದಶದಿಕ್ಕುಗಳಿಂದ ಈ ಬಾರಿ ಅನಂತ್ಮಾಣಿ ಮೇಲೆ ದಾಳಿ ಆಗಿದೆ. ಕೆಲವು ಚೆಡ್ಡಿ ಒಲವಿನ ಪತ್ರಿಕೆಗಳಲ್ಲಿ ಆತನ ಕರ್ಮಕಾಂಡಗಳೆಲ್ಲಾ ಧಾರಾವಾಹಿಯಾಗಿ ಬಂದಿದೆ. ಅನಂತನ ಈ ಅವಾಂತರವೆಲ್ಲ ತುಂಬ ಹಿಂದೆಯೇ 'ಪತ್ರಿಕೆ' ಯಲ್ಲಿ ಬಂದಿವೆ. ಆದರೆ ಬ್ರಾಹ್ಮಣರೇ ಒಟ್ಟಾಗಿ ಆತನ ಮೇಲೆರಗಿರುವುದರಿಂದ ಈ ಬಾರಿ ಆತ ಹೈರಾಣಾಗಿದ್ದಾನೆ.


ಸಚ್ಚಿದಾನಂದ


ಕಾಗೇರಿ



ಕರಾವಳಿ ಎಂದರೆ ತಮ್ಮ ಕೇಸರಿ ಕೋಟೆಯೆಂದು ಧರ್ಮೋನ್ಮಾದದ ಸೊಕ್ಕಿನಿಂದ ಸಂಭ್ರಮಿಸುತ್ತಿದ್ದ ಸಂಘ ಪರಿವಾರಕ್ಕೆ ಲೋಕಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ನಡುಕ ಜೋರಾಗುತ್ತಿದೆ! ಬಿಜೆಪಿ-ಆರೆಸ್ಸೆಸ್ ಪಡೆ ಕರಾವಳಿಯಲ್ಲಿ ಅದೆಷ್ಟು ಕಳೆಗುಂದಿದೆ ಎಂದರೆ, ಗೆಲ್ಲೋದಿರಲಿ, ಸರಿಯಾದ ಹುರಿಯಾಳುಗಳೇ ಇಲ್ಲದಂತೆ ಸಿಗದಾಗಿದೆ. ದಕ್ಷಿಣ ಕನ್ನಡದಲ್ಲಿ ಒಲ್ಲದ ಮನಸ್ಸಿನಿಂದಲೇ ನಾಲಾಯಕ್ ಎಂಪಿ ನಳಿನ್‌ಕುಮಾರ್ ಕಟೀಲ್‌ಗೆ ಸ್ಥಳೀಯ ಆರೆಸ್ಸೆಸ್ ಡಾನ್ ಕಲ್ಲಡ್ಕ ಭಟ್ ಬಳಗ ಟಿಕೆಟ್ ಆಖೈರುಗೊಳಿಸಿದೆ. ಆದರೆ ಪಕ್ಕದ ಉಡುಪಿ-ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಕ್ಷೇತ್ರಗಳಲ್ಲಿ ಚೆಡ್ಡಿ ಬದ್ಧತೆಯ ಭೂಪರ ತಲಾಶ್ ಮಾಡಲಾಗದೆ ಬಿಜೆಪಿ ಬೈಠಕ್ ಬಾಸ್‌ಗಳು ಚಡಪಡಿಸುತ್ತಿದ್ದಾರೆ!

ಉಡುಪಿ-ಚಿಕ್ಕಮಗಳೂರು ಟಿಕೆಟ್ ಗೋಲ್‌ಮಾಲ್‌ಗಿರಾಕಿ ಸಿ.ಟಿ. ರವಿ ಮತ್ತು ಯಡ್ಡೀಜಿಯ ಅಧಿದೇವತೆ ಶೋಭಾ ಕರಂದ್ಲಾಜೆ ನಡುವೆ ಇಟ್ಟು ಬಿಜೆಪಿ ನಾಯಕಮಣಿಗಳು ಕಣಿ ಕೇಳುತ್ತಿದ್ದಾರೆ. ರವಿ ತನಗೆ ಟಿಕೆಟ್ ಬೇಕೆಂದರೂ ಆತ ಅದಕ್ಕೊಂದು ಷರತ್ತೂ ಹಾಕಿದ್ದಾನೆ. ಅಕಸ್ಮಾತ್ ತನ್ನಿಂದ ಚಿಕ್ಕಮಗಳೂರು ಅಸೆಂಬ್ಲಿ ಕ್ಷೇತ್ರ ತೆರವಾದರೆ ಅಲ್ಲಿ ತನ್ನ ಪತ್ನಿಯನ್ನೇ ಬಿಜೆಪಿ ಕ್ಯಾಂಡಿಡೇಟ್ ಮಾಡಬೇಕೆಂದು ರವಿ ರಗಳೆ ಮಾಡುತ್ತಿದ್ದಾನೆ. ಅತ್ತ ಶೋಭಕ್ಕನ ಶೋಭಾನೆ ಮತ್ತೂ ಮಜಾ ಆಗಿದೆ. ಉಡುಪಿ-ಚಿಕ್ಕಮಗಳೂರಲ್ಲಿ ಗೆಲ್ಲುವ ಧೈರ್ಯ ಇಲ್ಲದ ಈ ಅರೆಭಾಷೆ ಗೌಡತಿ ಬೆಂಗಳೂರು ಉತ್ತರದ ಮೇಲೆ ಕಣ್ಣು ಹಾಕಿದ್ದಾರೆ. ತನಗೆ ಆ ಛಾನ್ಸ್ ಕೊಡಿಸುವಂತೆ ಯಜಮಾನ ಯಡ್ಡಿಗೆ ದುಂಬಾಲು ಬಿದ್ದಿದ್ದಾರೆ. ಯಡ್ಡಿಯೋ ಬಿಜೆಪಿಯಲ್ಲಿ ತನಗಿರುವ ಏಕೈಕ ಗುರಿಯೆಂದರೆ, ಶೋಭಕ್ಕನಿಗೆ ಬೆಂ(ಉ) ಸೀಟು ಕೊಡಿಸೋದು ಎಂಬಂತೆ ಊಟ-ನಿದ್ದೆ ಬಿಟ್ಟು ಕಟಿಪಿಟಿ ಮಾಡುತ್ತಿದ್ದಾರೆ.

ಇದಕ್ಕಿಂತಲೂ ಕುತೂಹಲಕರ ಕಚ್ಚಾಟ ಉತ್ತರ ಕನ್ನಡ ಟಿಕೆಟ್‌ಗಾಗಿ ಬಿಜೆಪಿಯಲ್ಲಿ ಬಿರುಸಾಗಿ ನಡೆದಿದೆ. ಉತ್ತರ ಕನ್ನಡದ ಬಿಜೆಪಿಯ ಒಂದೇ ಒಂದು ಸರಪಳಿಗೂ ಹಾಲಿ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿ ಮತ್ತೆ ಅಭ್ಯರ್ಥಿಯಾಗುವುದು ಬೇಡವಾಗಿದೆ. ಯಡ್ಡಿಯಂಥ ಘಟಾನುಘಟಿಗಳೂ ಅನಂತ್ಮಾಣಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ಬೆಂಗಳೂರು ಮಟ್ಟದ ಲೀಡರ್‌ಗಳು ಒಂದು ಹಂತದಲ್ಲಿ ಅನಂತ್ಮಾಣಿ ಹೆಸರಿಗೆ ಹಸಿರು ನಿಶಾನೆಯೇನೋ ತೋರಿಸಿದ್ದರು. ಆದರೆ ಆತನ ಲೋಕಲ್ ವೈರಿ ಕಾಗೇರಿ ಮಾಣಿಯ ದೇವಪಿತೃ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್ ದಿಲ್ಲಿಯಲ್ಲಿ ಅದಕ್ಕೆ ಕೆಂಪು ಬಾವುಟ ತೋರಿಸುವಂತೆ ಮಾಡಿದ್ದಾರೆ. ಕಟ್ಟರ್ ಸಂಘ ಪರಿವಾರದ ಸೂತ್ರದಾರನಿಗೆ ಈ ಕಿಲುಬುಗಟ್ಟಿದ ನಕಲಿ ಚೆಡ್ಡಿ ಬೇಡವಾಗಿದ್ದಾನೆ.

ಉತ್ತರ ಕನ್ನಡದ ಬಿಜೆಪಿ ಎಂದರೆ ಬ್ರಾಹ್ಮಣರ ಜನತಾ ಪಕ್ಷ! ಈ ಬ್ರಾಹ್ಮಣರು ಅನಂತ್ಮಾಣಿ ಶೂದ್ರ ಸಂಸ್ಕೃತಿಯ ಒರಟನೆಂದು ಮೂಗು ಮುರಿಯುತ್ತಾರೆ. ಹಾಗಾಗಿ ಉತ್ತರ ಕನ್ನಡ ಬಿಜೆಪಿಯಲ್ಲಿ ಹೊಸ ಹಿಂದೂತ್ವ-ಬ್ರಾಹ್ಮಣಿಕೆ ಹರಿಕಾರನಿಗಾಗಿ ಹಾಹಾಕಾರ ಶುರುವಾಗಿದೆ. ಪಾರ್ಟಿ ಕಾರ್ಯಕರ್ತರು-ಲೀಡರ್‌ಗಳ ಎದುರು ಹಾಕಿಕೊಂಡಷ್ಟೇ ಕ್ಷೇತ್ರದ ಜನರಿಂದಲೂ ಅನಂತ್ಮಾಣಿ ಉಗುಳಿಸಿಕೊಳ್ಳುತ್ತಿದ್ದಾನೆ. ಹಿಂದೂ ಉದ್ಧಾರದ ಬೊಗಳೆ ಬಿಡುತ್ತಲೇ ಸ್ವ-ಜೇಬೋದ್ಧಾರ ಜಬರ್ದಸ್ತಾಗಿ ಅನಂತ್ಮಾಣಿ ಮಾಡಿಕೊಂಡಿದ್ದು ವಟು ವರ್ಗದ ಕಣ್ಣು ಕೆಂಪಾಗಿಸಿದೆ; ಕ್ಷೇತ್ರದ ಸಮಸ್ಯೆ-ಸಂಕಷ್ಟ ಒಂದಕ್ಕೂ ತಲೆ ಕೆಡಿಸಿಕೊಳ್ಳದೇ ಬಿಜೆಪಿಯೊಳಗಿನ ಗುದುಮುರಿಗೆ ಮತ್ತು ಅವ್ಯವಹಾರಕ್ಕೆ ಎಂಪಿ ಸಾಹೇಬ ಸೀಮಿತನಾಗಿದ್ದು ಜನರನ್ನು ಕೆರಳಿಸಿದೆ.

ಅನಂತ್ಮಾಣಿ ಹೆಸರೆತ್ತಿದರೆ ಸಾಕು; ಇಡೀ ಜಿಲ್ಲಾ ಬಿಜೆಪಿ ಜೀವಭಯದಿಂದ ತತ್ತರಿಸುತ್ತದೆ! ಆತ ಹೋದದ್ದೇ ದಾರಿ. ಈ ಒಂಟಿ ಮದ್ದಾನೆಯ ಆರ್ಭಟಕ್ಕೆ ಉತ್ತರ ಕನ್ನಡ ಬಿಜೆಪಿ ಮುರಿದುಬಿದ್ದಿದೆ. ವಿಪರ್ಯಾಸವೆಂದರೆ; ಆರೆಸ್ಸೆಸ್-ಎಚ್‌ಜೆವಿಯಲ್ಲಿ ಕಲಿತ ಖತರ್‌ನಾಕ್ ವರಸೆಗಳನ್ನೆಲ್ಲ ಮಾಣಿ ಬಿಜೆಪಿಯಲ್ಲಿ ಪ್ರಯೋಗಿಸಿದ್ದಾನೆ. ಸಾಬರು-ಕ್ರಿಶ್ಚಿಯನ್ನರ ಚಚ್ಚಿದಂತೆ ಜಿಲ್ಲಾ ಬಿಜೆಪಿಯ ಹಿರಿ-ಕಿರಿ ಮುಖಂಡರಿಗೂ ಬಾರಿಸಿ ಮೋಕಳಿಕ್ ಆಗಿದ್ದಾನೆ! ಎಂಪಿ ಮಾಣಿ ತೋಳೇರಿಸಿ ಹೋದನೆಂದರೆ, ಕಾಗೇರಿ-ಕರ್ಕಿ-ಶಿವಾನಂದ ನಾಯ್ಕ್-ಕೊಲ್ಲೆ-ಸಚ್ಚಿದಾನಂದ ಹೆಗಡೆ-ಶಶಿಭೂಷಣ ಹೆಗಡೆ.... ವಗೈರೆ ಬ್ರಾಹ್ಮಣ-ಶೂದ್ರ ಲೀಡರ್‌ಗಳೆಲ್ಲ ಬದಿಗೆ ಸರಿದು ನಿಲ್ಲಲೇಬೇಕು! ಈ ದಾದಾಗಿರಿ ತಡೆಯಲಾಗದೆ ಕೆಲವರು ಬಿಜೆಪಿ ಬಿಟ್ಟೇ ಹೋಗಿದ್ದಾರೆ.

ಎಂಪಿ ಹೋಗಲಿ, ಗ್ರಾಮ ಪಂಚಾಯ್ತಿ ಮೆಂಬರಿಕೆಗೂ ಲಾಯಕ್ಕಲ್ಲದ ಈ ಅನಂತ್ಮಾಣಿ ಭಟ್ಕಳದ ಗಲಭೆಯಲ್ಲಿ ರೂಪುಗೊಂಡ 'ಜನ ನಾಯಕ'! ಹಿಂದೂ ಜಾಗರಣಾ ವೇದಿಕೆಯ ಈ ಬೀದಿ ಬಡಿದಾಟಗಾರನಿಗೆ ಜುಬ್ಬಾ-ಪಾಯಿಜಾಮ ತೊಡಿಸಿ ರಾಜಕಾರಣದ ದೀಕ್ಷೆ ಕೊಟ್ಟ ಪ್ರಮಾದಕ್ಕೆ ಹಿಂದೂವಾದಿ ಡಾ. ಚಿತ್ತರಂಜನ್ ಜೀವವೇ ಕೊಡಬೇಕಾಗಿ ಬಂತು! ಚಿತ್ತರಂಜನ್‌ರ ರಕ್ತದಲ್ಲಿ ಸಂಸದನಾಗಿ ಅರಳಿದ ಅನಂತ್ಮಾಣಿ ಪ್ರಜಾತಂತ್ರದ ಧರ್ಮಾಧಾರಿತ ದೌರ್ಬಲ್ಯದಿಂದ ಮತ್ತೆ-ಮತ್ತೆ ನಾಲ್ಕು ಬಾರಿ ಗೆಲ್ಲುತ್ತಲೇ ಹೋದ. ಆದರೆ ಆತನ ಕಡಿ-ಬಡಿ-ಹೊಡಿ ಸಂಸ್ಕೃತಿ ಮಾತ್ರ ಬದಲಾಗಲೇ ಇಲ್ಲ; ಪೂರ್ವಾಶ್ರಮದ ಕಸರತ್ತುಗಳು ನಿಲ್ಲಲಿಲ್ಲ! ನಾಯಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿದರೆ, ಅದು ಹೇಸಿಗೆ ಕಂಡಾಗ 'ಟಣ್' ಎಂದು ತಿಪ್ಪೆಗೆ ನೆಗೆದಿತ್ತಂತೆ. ಹಾಗಾಯ್ತು ಅನಂತ್ಮಾಣಿಯನ್ನು ಪ್ರತಿ ಬಾರಿ ಗೆಲ್ಲಿಸಿದಾಗಲೂ ಉತ್ತರ ಕನ್ನಡಿಗರ ಪರಿಸ್ಥಿತಿ!

ಕನಸು-ಮನಸಲ್ಲೂ ಎಣಿಸಿದ ಸಂಸದಗಿರಿ ಪ್ರಾಪ್ತವಾಗುತ್ತಿದ್ದಂತೆಯೇ 'ಹಂಚು ಕಾಣದವ ಕಂಚು ಕಂಡಂತಾಯ್ತು' ದರಿದ್ರ ಅನಂತ್ಮಾಣಿಗೆ! ಹಣದ ಹಪಾಹಪಿ-ರಂಗೀಲಾ ಚಟಗಳಿಗೆಲ್ಲ ಹಿಂದೂತ್ವದ ಕಾವಿ ಹೊದಿಕೆ ಸುತ್ತಿಕೊಂಡ ಮಾಣಿ 'ಎಂಪಿ ಅಂಗಡಿ' ತೆರೆದುಬಿಟ್ಟ; ತನ್ನೆಲ್ಲ ದೋ ನಂಬರಿ ಬಿಸ್ನೆಸ್‌ಗೆ ಧರ್ಮಪತ್ನಿಯನ್ನೇ ಮ್ಯಾನೇಜರ್ ಮಾಡಿಕೊಂಡ. ಆತನ ಕ್ಷೇತ್ರೋದ್ಧಾರದ 'ಕದಂಬ ಚಾರಿಟೆಬಲ್ ಟ್ರಸ್ಟ್'ನ ಡಾಂಬರು ದಂಧೆ-ಬಡವರಿಗೆ ಮನೆ ಒದಗಿಸುವ ವ್ಯವಹಾರದಿಂದ ಮೊದಲ್ಗೊಂಡು ಎಂಪಿಗಿರಿ ದರ್ಬಾರಿನ ಪ್ರತಿಯೊಂದು 'ಸೇವೆ'ಯಲ್ಲೂ 'ಹಣಕಳ್ಳ, ಹೋರಾಟ' ಹಾಸುಹೊಕ್ಕಾಗಿರುತ್ತಿತ್ತು. ಆತನ ಎಂಪಿ ನಿಧಿ ಪರ್ಸೆಂಟೇಜ್ ಪರಾಕ್ರಮ, ಅರಣ್ಯ ಅತಿಕ್ರಮಣ, ಸ್ವಜಾತಿ ಬ್ರಾಹ್ಮಣ ತೋಟಿಗರ ದಾರಿ ತಪ್ಪಿಸುವ ಮಿಶ್ರ ಬೆಳೆ ಬೊಗಳೆ ಮತ್ತು ಕಂಡ-ಕಂಡವರ ಕೆಣಕುವ ಕೋಳಿ ಕಾಳಗ ಜಿಲ್ಲೆಯಲ್ಲಿ ನಿತ್ಯ ಚರ್ಚೆಯ ಸಂಗತಿಗಳಾಗಿ ಹೋದವು. ಜಿಲ್ಲೆಯ ಜನರಲ್ಲಿ ಮತ್ತು ಬಿಜೆಪಿ ಕಾರ್ಯಕರ್ತರಲ್ಲಿ ಈತನ ಹಾವಳಿಯಿಂದ ಅಸಹ್ಯ-ಆಕ್ರೋಶ ಭುಗಿಲೆದ್ದಿತು. ಹೀಗಾಗಿಯೇ ಆತ ಕಳೆದ ಎಲೆಕ್ಷನ್‌ನಲ್ಲಿ ಸೋಲಿನ ದವಡೆಗೆ ಹೋಗಿದ್ದ. ಜಿಲ್ಲೆಯ ದುರಾದೃಷ್ಟ, ಅದ್ಹೇಗೋ ಬಚಾವಾಗಿದ್ದ.

ಇಷ್ಟಾದರೂ ಆತ ಬದಲಾಗಲಿಲ್ಲ, ಕಳೆದೈದು ವರ್ಷದ ಅವಧಿಯಲ್ಲಿ ಆತನ ಅವಾಂತರ-ಅಧಿಕ ಪ್ರಸಂಗ-ಅವ್ಯವಹಾರ ಮತ್ತಷ್ಟು ಹೆಚ್ಚಾಗಿದೆ. ಎಂಪಿ ಸಹಾಯ ಕೇಳಿ ಬರುವ ಜನಸಾಮಾನ್ಯರನ್ನು ಕೀಳಾಗಿ ಕಾಣುವ ದುರಹಂಕಾರ ಮಿತಿ ಮೀರಿದೆ. ಬಿಜೆಪಿಯಲ್ಲಂತೂ ಯಾರಿಗೂ ಬೇಡದ ಅನಿಷ್ಟ ಪೀಡೆಯಂತಾಗಿದ್ದಾನೆ. ಹೀಗಾಗಿ ಈ ಬಾರಿ ಆತನಿಗೆ ಮತ್ತೆ ಎಂಪಿ ಟಿಕೆಟ್ ಕೊಡಬಾರದೆಂಬ ಸೊಲ್ಲು ಆರಂಭದಲ್ಲೇ ಹಳ್ಳಿಯಿಂದ ದಿಲ್ಲಿತನಕ ಮೊಳಗಿತ್ತು, ರಾಘವೇಶ್ವರ ಭಾರತಿ, ಸ್ವರ್ಣವಲ್ಲಿ ಸ್ವಾಮಿಗಳಂಥ ಹೈಗರ ಮಠಾಧೀಶರು ಮೊದಮೊದಲು ಮಾಣಿಗೆ ಬೆಂಬಲಿಸಿದರೂ ಸ್ವ-ಜಾತಿ ಬ್ರಾಹ್ಮಣರೇ ಆತನ ವಿರುದ್ಧ ತಿರುಗಿ ಬಿದ್ದಾಗ ಬದಲಾದರು. ಆದರೆ ನಾಲ್ಕು ಬಾರಿ ಎಂಪಿಯಾಗಿ ಕೇಶವ ಕೃಪಾ-ನಾಗಪುರದ ಆರೆಸ್ಸೆಸ್ ಅಡ್ಡೆ, ದಿಲ್ಲಿಯ ಬಿಜೆಪಿ ಅಂತಃಪುರದಲ್ಲಿ ಬೆಳೆಸಿಕೊಂಡಿದ್ದ ಸಂಪರ್ಕ ಶಕ್ತಿಯಿಂದ ವಿರೋಧ-ಡ್ಯಾಮೇಜ್ ಅನಂತ್ಮಾಣಿ ಕಂಟ್ರೋಲ್ ಮಾಡಿಕೊಂಡಿದ್ದ. ಹೀಗಾಗಿ ಒಂದು ಹಂತದಲ್ಲಿ ಆತನೇ ಉತ್ತರ ಕನ್ನಡ ಕ್ಷೇತ್ರದ ಬಿಜೆಪಿಯ ಕಪ್ಪು ಕುದುರೆ ಎಂಬ ಭಾವನೆ ಮೂಡಿತ್ತು. ಅನಂತನೂ ಕ್ಷೇತ್ರದ ಉದ್ದಗಲಕ್ಕೂ ಛದ್ಮವೇಷ ತೊಟ್ಟುಕೊಂಡು ಓಡಾಡಲಾರಂಭಿಸಿದ್ದ.

ಆದರೆ ಆತನ ಶತ್ರು ಪಡೆ ಲಾಬಿ ಒಳಗೊಳಗೇ ಪ್ರಚ್ಛನ್ನ ಸಮರ ನಡೆಸುತ್ತಲೇ ಇತ್ತು. ತುಂಬ ನಾಜೂಕಾಗಿ ಕಾರ್ಯತಂತ್ರ ಹೆಣೆವ ನರಿ ಚಾಣಾಕ್ಷತೆಯ ಕಾಗೇರಿ ರಹಸ್ಯವಾಗಿ ಅನಂತ್‌ಗೆ ಟಾಂಗ್ ಕೊಡುವ ಕಾರ್ಯಾಚರಣೆ ಚಾಲೂ ಇಟ್ಟಿದ್ದರು. ಹಿಂದೆ ಹಿರಿಯರಾದ ಡಾ. ಎಂ.ಪಿ. ಕರ್ಕಿ ತನ್ನ ಮಂತ್ರಿ ಆಸೆಗೆ ಅಡ್ಡಗಾಲಾಗಬಹುದೆಂದು ಆತನಿಗೆ ಕುಮಟಾ ಅಸೆಂಬ್ಲಿ ಟಿಕೆಟ್ ತಪ್ಪಿಸಿದ್ದ ಕಾಗೇರಿ ಈ ಬಾರಿ ಅನಂತ್ಮಾಣಿಗೆ ಕೈತೊಳೆದು ಬೆನ್ನಟ್ಟಿದ್ದರು! ಬಹು ದಿನಗಳಿಂದ ಸಂಸದನಾಗುವ ಕನಸು ಕಾಣುತ್ತಿದ್ದ ಸಚ್ಚಿದಾನಂದ ಹೆಗಡೆ ಎಂಬ ಅಸಲೀ ಚೆಡ್ಡಿಯ ಬೆಂಬಲ ಕಾಗೇರಿಗೆ ಸಿಕ್ಕಿತ್ತು. ಒಂದು ಕಾಲದಲ್ಲಿ ವೈರಿಗಳಾಗಿದ್ದ ಈ ಮನುವಾದಿ ಪತ್ರಕರ್ತ ಸಚ್ಚಿ ಮತ್ತು ಎಬಿವಿಪಿ ಕ್ಯಾಡರಿನ ಕಾಗೇರಿ ರಾಜಿಯಾಗಿದ್ದರು ಅನಂತ್ಮಾಣಿಯ ಮಟ್ಟ ಹಾಕಲು. ಈ ಸಚ್ಚಿ ಸಾಮಾನ್ಯ ಹಿಂದೂವಾದಿಯಲ್ಲ. ಆರೆಸ್ಸೆಸ್‌ನ ಆಯಕಟ್ಟಿನ ಸ್ಥಾನದಲ್ಲಿರುವ ಭಾಗ್ವತ್-ಭಟ್-ಜೋಶಿಗಳ ನಿಕಟ ಒಡನಾಡಿ ಈತ. 'ವಿಶ್ವ ವಿಖ್ಯಾತ' ಪತ್ರಕರ್ತ ವಿಶ್ವೇಶ್ವರ ಭಟ್ಟರ ಸೋದರ ಮಾವ ಬೇರೆ. ಹೀಗಾಗಿ ದಶದಿಕ್ಕುಗಳಿಂದ ಈ ಬಾರಿ ಅನಂತ್ಮಾಣಿ ಮೇಲೆ ದಾಳಿ ಆಗಿದೆ. ಕೆಲವು ಚೆಡ್ಡಿ ಒಲವಿನ ಪತ್ರಿಕೆಗಳಲ್ಲಿ ಆತನ ಕರ್ಮಕಾಂಡಗಳೆಲ್ಲಾ ಧಾರಾವಾಹಿಯಾಗಿ ಬಂದಿದೆ. ಅನಂತನ ಈ ಅವಾಂತರವೆಲ್ಲ ತುಂಬ ಹಿಂದೆಯೇ 'ಪತ್ರಿಕೆ' ಯಲ್ಲಿ ಬಂದಿವೆ. ಆದರೆ ಬ್ರಾಹ್ಮಣರೇ ಒಟ್ಟಾಗಿ ಆತನ ಮೇಲೆರಗಿರುವುದರಿಂದ ಈ ಬಾರಿ ಆತ ಹೈರಾಣಾಗಿದ್ದಾನೆ.

ಅನಂತ್ಮಾಣಿ ಹೆಸರನ್ನು ಬೆಂಗಳೂರಿನ ಬಿಜೆಪಿ ಕೋರ್ ಕಮಿಟಿ ಅಂತಿಮಗೊಳಿಸಿತ್ತು. ಆದರೆ ಬಿಜೆಪಿಯ ಮಾಂಡಲೀಕ ಅನಂತಕುಮಾರ್ (ಶಾಸ್ತ್ರಿ) ಮತ್ತು ಯಡ್ಡಿ ಯಾಕೋ ಅನಂತ ಮಾಣಿಗೆ ಟಿಕೆಟ್ ಕೊಡಲೇಬಾರದೆಂದೂ, ಆತ ಈ ಸಲ ಗೆಲ್ಲಲಾರನೆಂದು ವಾದ ದಿಲ್ಲಿಯಲ್ಲಿ ಹೂಡಿದ್ದರು. ಯಡ್ಡಿಗೆ ಉತ್ತರ ಕನ್ನಡ ಶಿಷ್ಯ ಶಿವಾನಂದ ನಾಯ್ಕ್‌ನ ದಾರಿ ಸಲೀಸು ಮಾಡುವ ದರ್ದಿದ್ದರೆ, ಅನಂತಕುಮಾರ್‌ಗೆ ತನ್ನ ಹಿಂಬಾಲಕ ಕಾಗೇರಿಯ ಚೆಲ್ಲಾ ಮಟ್ಟದ ತೊಂದರೆ ನಿವಾರಿಸುವ ಜರೂರಿತ್ತು, ಅನಂತ್-ಯಡ್ಡಿ ಒತ್ತಡಕ್ಕೆ ಮಣಿದ ಬಿಜೆಪಿ ಟಿಕೆಟ್ ಕಮಿಟಿ ಉತ್ತರ ಕನ್ನಡದಲ್ಲಿ ಅನಂತ್ಮಾಣಿ ಸ್ಥಿತಿ-ಗತಿ ಸರ್ವೆಗೆ ರೆಡಿಯಾಯ್ತು. ಹಿಂದೆಲ್ಲ ಉತ್ತರ ಕನ್ನಡದ ಬಿಜೆಪಿ ಉಸ್ತುವಾರಿಯಾಗಿ-ಅಂಕೋಲೆಯಲ್ಲೊಂದು ಬೀಚ್-ರೆಸಾರ್ಟ್ ಮಾಡಿ ಈ ಜಿಲ್ಲೆಯ 'ಸಂಪರ್ಕ' ಹೊಂದಿರುವ ಕಾರ್ಕಳದ ಭಜರಂಗಿ ಶಾಸಕ ಸುನಿಲ್‌ಕುಮಾರ್ ನೇತೃತ್ವದ ಟೀಮು ಕ್ಷೇತ್ರದಾದ್ಯಂತ ರೌಂಡು ಹಾಕಿತು. ಈ ತಂಡ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಅನಂತ್ಮಾಣಿ ಹೆಸರು ಕೆಡಿಸಿಕೊಂಡಿದ್ದಾನೆಂದು ವರದಿ ಒಪ್ಪಿಸಿತು.

ಯಾವಾಗ ಅನಂತ್ಮಾಣಿ ಕ್ಯಾಂಡಿಡೇಟಾದರೆ ಬಿಜೆಪಿಗೆ ದುಬಾರಿ ಆಗುತ್ತದೆಂದು ಆಂತರಿಕ ಸರ್ವೆ ರಿಪೋರ್ಟ್ ಬಂತೋ, ಆಗ ಬಿಜೆಪಿಯ ಟಿಕೆಟ್ ಹಂಚಿಕೆದಾರರ ಪೀಕಲಾಟ ಆರಂಭವಾಯ್ತು. ಸಿಟ್ಟಿಂಗ್ ಎಂಪಿ ಬದಲಿಸಿದರೆ ಪರ್ಯಾಯ ಅಭ್ಯರ್ಥಿ ಹುಡುಕುವುದು ಕಷ್ಟ ಎಂಬ ಆತಂಕ ಕೋರ್‌ಕಮಿಟಿ ಕಾಡಿತು. ಯಡ್ಡಿ ಶಿಷ್ಯ-ಮಾಜಿ ಮಂತ್ರಿ ಶಿವಾನಂದ ನಾಯ್ಕ್‌ಗೆ ಟಿಕೆಟ್ ಕೊಡೋಣವೆಂದರೆ, ಆತ ವಾರದ ಹಿಂದಷ್ಟೇ ಜೆಡಿಎಸ್ ಪಾಲಾಗಿದ್ದಾನೆ. ಜಿಲ್ಲೆಯ ಬಹುಸಂಖ್ಯಾತ ದೀವರ ಧೀರನಾದ ನಾಯ್ಕ್ ಹೆಚ್ಚುಕಮ್ಮಿ ಅನಂತ್ಮಾಣಿಗೆ ಬದಲಿ ಆಗುತ್ತಿದ್ದರು. ಕಾಗೇರಿ ಮತ್ತು ಅನಂತ್ಮಾಣಿ ಮೇಲಿನ ಮುನಿಸಿನಿಂದ ಬಿಜೆಪಿಗೆ ಬೈ ಹೇಳಿರುವ ನಾಯ್ಕ್ ಮತ್ತೆ ಬರುವ ಸ್ಥಿತಿಯಲ್ಲಿಲ್ಲ, ನಾಯ್ಕ್‌ಗೆ ಕಾಗೇರಿಯೂ ಹಿತ ಶತ್ರುವೇ!


ಈಗ ಬಿಜೆಪಿಯ ಟಿಕೆಟ್ ಕಮಿಟಿ ಎದುರು ಎರಡು ಹೆಸರುಗಳಿವೆ. ಎರಡೂ ಬ್ರಾಹ್ಮಣ ಕುಲೋದ್ಧಾರಕರದೇ ಎಂಬುದು ಪರಿಶೀಲನೆಯಲ್ಲಿ ತೊಡಕುಂಟು ಮಾಡಿದೆ. ಒಂದು, ಮಾಜಿ ಮಂತ್ರಿ ಕಾಗೇರಿ ವಿಶ್ವೇಶ್ವರ ಹೆಗಡೆ; ಮತ್ತೊಂದು ಮಾಜಿ ಪತ್ರಕರ್ತ- ಪಾನ ಸಂಯಮ ಮಂಡಳಿಯ ಮಾಜಿ ಅಧ್ಯಕ್ಷ- ಹಾಲಿ ಹಿಂದೂ ಹಿಕಮತ್ತುದಾರ ಸಚ್ಚಿದಾನಂದ ಹೆಗಡೆ. ಕಾಗೇರಿಗೆ ಎಂಪಿಗಿರಿಗೆ ಸ್ಪರ್ಧಿಸುವ ಆಸೆಯಿದ್ದರೂ ಧೈರ್ಯವಿಲ್ಲ; ತನ್ನನ್ನು ಸೋಲಿಸಲು ಅನಂತ್ಮಾಣಿ ಏನೆಲ್ಲಾ ಸಾಧ್ಯವೋ ಅದೆಲ್ಲ ಮಾಡದೇ ಇರಲಾರ. ಮೋದಿ ಅಲೆಯಿದ್ದರೂ ಅಬ್ರಾಹ್ಮಣರು ತನ್ನ ಬಗ್ಗೆ ಬೇಸರದಲ್ಲಿದ್ದಾರೆ. ಕರಾವಳಿ ಭಾಗದಲ್ಲಿ ತಾನು ಮಂತ್ರಿಯಾಗಿ ದ್ರೋಹ ಮಾಡಿದ್ದೇನೆಂಬ ಭಾವನೆಯಿರುವುದು ಆತನಿಗೆ ಅರ್ಥವಾಗಿದೆ. ಹಾಗೆಯೇ ಬಿಜೆಪಿಯ ದೊಡ್ಡವರೂ ಕಾಗೇರಿಗೆ ಟಿಕೆಟ್ ಕೊಡಲು ಮನಸ್ಸು ಮಾಡುತ್ತಿಲ್ಲ. ಆಕಸ್ಮಾತ್ ಆತ ಗೆದ್ದರೆ ಅಸೆಂಬ್ಲಿಯಲ್ಲಿ ಬಿಜೆಪಿ ಶಾಸಕರ ಸಂಖ್ಯೆ ಕಡಿಮೆಯಾಗಿ ವಿರೋಧ ಪಕ್ಷದ ಸ್ಥಾನ-ಮಾನಕ್ಕೆ ಸಂಚಕಾರ ಬರುತ್ತದೆಂಬ ಭಯ ಬಿಜೆಪಿಯವರನ್ನು ಕಾಡುತ್ತಿದೆ.


ಅಂತಿಮವಾಗಿ ಉಳಿಯುವುದು-ಸಚ್ಚಿದಾನಂದ ಹೆಗಡೆ ಮಾತ್ರ. ಕಳೆದ ಮೂರ್‍ನಾಲ್ಕು ತಿಂಗಳಿಂದ ಆತನ ಪರ ಬ್ರಾಹ್ಮಣ ಪತ್ರಕರ್ತರೂ ಸೇರಿದಂತೆ ಬಿಜೆಪಿಯ ಹಾರುವ ಪುಢಾರಿಗಳು, ಆರೆಸ್ಸೆಸ್‌ನ ಜನಿವಾರಿಗಳು ಸಶಕ್ತ ಲಾಬಿ ಮಾಡುತ್ತಲೇ ಇದ್ದಾರೆ. ಅನಂತಕುಮಾರ್ (ಶಾಸ್ತ್ರಿ) ಹೇಗಾದರೂ ಮಾಡಿ ಸಚ್ಚಿಗೆ ಟಿಕೆಟ್ ಖಾತ್ರಿ ಕೊಡಿಸಲೇಬೇಕೆಂಬ ಹಠಕ್ಕೆ ಬಿದ್ದಿದ್ದಾರೆ. ಅನಂತ್ಮಾಣಿಯನ್ನು ಸಮಾಧಾನಪಡಿಸಲು ಸೂತ್ರ ಒಂದು ತಯಾರು ಮಾಡಲಾಗಿದೆ. ಕಾಗೇರಿ ಕ್ಯಾಂಡಿಡೇಟಾದರೆ, ಆತ ತೆರವು ಮಾಡುವ ಶಿರಸಿ ಕ್ಷೇತ್ರ ಟಿಕೆಟ್ ಕೊಡುವುದು. ಸಚ್ಚಿಗೆ ಪಾರ್ಲಿಮೆಂಟ್ ಸೀಟು ಬಿಟ್ಟು ಕೊಟ್ಟರೆ ಕಲ್ಪಿತ ಮೋದಿ ಪರ್ವದಲ್ಲಿ ಜಬರ್ದಸ್ತ್ ಗೂಟದ ಕಾರಿನ ಭಾಗ್ಯ-ಭೋಗ್ಯ ಕೊಡಿಸುವುದು. ಇದಕ್ಕೆ ಮಾಣಿ ಒಪ್ಪುತ್ತಾನಾ? ಆತ ಒಪ್ಪಲಿ-ಬಿಡಲಿ. ಆತನಿಗೆ ಟಿಕೆಟ್ ತಪ್ಪಿಸುವುದರಿಂದ ಬಿಜೆಪಿಗೆ ಹಾನಿಯೇನಿಲ್ಲ, ಮೋದಿ ಮಾಯೆಯಲ್ಲಿ ಅನಂತ್ಮಾಣಿ ಅಳಿಸಿ ಹೋಗಬಹುದು.

ಹಾಗಿದ್ದರೆ ಬಿಜೆಪಿ ಯುದ್ಧ ಕುದುರೆ ಯಾರು? ಶೂದ್ರರಿಗಂತೂ ಛಾನ್ಸೇ ಇಲ್ಲ, ಕಾಗೇರಿಯೋ? ಸಚ್ಚಿಯೋ?


● ದುರ್ಯೋಧನ

ಸಿಂಗಾಪೂರ್‌ನಲ್ಲಿ ಅಂಬಿ ಅಂಡರ್ ರಜನಿ ಕೇರ್?





'ಅಂಬರೀಶ್ ಮೊದಲ ಚಿತ್ರ ನಾಗರಹಾವು ಬಿಡುಗಡೆಯಾದಾಗ ನಾನಿನ್ನೂ ಬಸ್ ಕಂಡಕ್ಟರ್ ಆಗಿದ್ದೆ. ಅದೆಂಥಾ ಹುಚ್ಚು ಅಂದ್ರೆ ನನ್ನ ಕಂಡಕ್ಟರ್ ಯೂನಿಫಾರ್ಮ್ ಕೂಡ ಬಿಚ್ಚದೆ ಹೋಗಿ ಅವರ ಆ್ಯಕ್ಟಿಂಗ್ ನೋಡುತ್ತಿದ್ದೆ. ನಾಗರಹಾವು ಚಿತ್ರದಲ್ಲಿ ಅಂಬಿ ಸ್ಟೈಲಾಗಿ ಸಿಗರೇಟನ್ನು ಬಾಯಿಗೆಸೆದು ಹೊಗೆ ಬಿಡ್ತಾ ಇದ್ರಲ್ಲ; ಅದೇ ಜಲೀಲನ ಪಾತ್ರ... ಅದನ್ನು ನೋಡಿಯೇ ನಾನು ಹೇಗೆ ಸ್ಟೈಲಾಗಿ ಸಿಗರೇಟು ಸೇದಬೇಕು ಅನ್ನೋ ಟೆಕ್ನಿಕ್ಕನ್ನು ಕಲಿತುಕೊಂಡೆ...!'



ಇದು 2012ರ ಮೇ 28ರಂದು ಬೆಂಗಳೂರಿನ ಪ್ಯಾಲೇಸ್ ಮೈದಾನದಲ್ಲಿ ನಡೆದ ಅಂಬಿ ಅರವತ್ತನೇ ಹುಟ್ಟುಹಬ್ಬದ ಸಮಾರಂಭದಲ್ಲಿ ತಮಿಳಿನ ಸೂಪರ್‌ಸ್ಟಾರ್ ರಜನಿಕಾಂತ್ ತನ್ನ ಸ್ಟೈಲ್‌ಕಿಂಗ್ ಇಮೇಜಿಗೆ ಅಂಬಿ ಹೇಗೆ ಕಾರಣರಾಗಿದ್ದರೆಂದು ಸ್ಮರಿಸಿದ ರೀತಿ.

ಸಿಗರೇಟಿಗೂ ತನ್ನ ಶ್ವಾಸಕೋಶಕ್ಕೂ ಅದರಿಂದ ವ್ಯಾಧಿ ಸದೃಶ **Chronic Bronchitis and emphysima** (ಕ್ರೋನಿಕ್ ಬ್ರಾಂಕೈಟಿಸ್ ಅಂಡ್ ಎಂಫಿಸೀಮಾ) ಎಂಬ ಮಾರಕ ರೋಗಕ್ಕೂ ಗೆಳೆಯ ಅಂಬಿಗೂ ಮತ್ತು ದೂರದ ಸಿಂಗಾಪೂರ್‌ನ ಮೌಂಟ್ ಎಲಿಜಬೇತ್ ಆಸ್ಪತ್ರೆಗೂ ಇರುವ ಋಣಾನುಬಂಧದ ಬಗ್ಗೆ ಸಣ್ಣದೊಂದು ಸುಳಿವಿದ್ದರೂ ರಜನಿಕಾಂತ್ ಅವತ್ತು ಇಂಥಾದ್ದೊಂದು ಡೈಲಾಗ್ ಹೊಡೆಯುತ್ತಿರಲಿಲ್ಲವೇನೊ!

ಸಿಗರೇಟು, ಶ್ವಾಸಕೋಶ ಮತ್ತು ಸಿಂಗಾಪೂರ್‌ನ ಮೌಂಟ್ ಎಲಿಜಬೆತ್ ಆಸ್ಪತ್ರೆಗಳೆಲ್ಲವೂ ಗೆಳೆಯರಿಬ್ಬರ ಪಾಲಿಗೆ ಪ್ರಾರಬ್ಧ ಕರ್ಮವಾಗೇ ಬಂದದ್ದು ವಿಧಿ ವಿಪರೀತವೋ ದೌರ್ಭಾಗ್ಯವೋ ಬಲ್ಲವರ್ಯಾರು?

ಸಿಂಗಾಪೂರ್‌ನತ್ತ...!

ಸದ್ಯ ಅಂಬಿ ಸಿಂಗಾಪೂರ್‌ನ ಪ್ರತಿಷ್ಠಿತ ಮೌಂಟ್ ಎಲಿಜಬೆತ್ ಆಸ್ಪತ್ರೆಯ ಐಸಿಯೂನಲ್ಲಿ ಮಲಗಿದ್ದಾರೆ. ಮುಖಕ್ಕೆ ಹಾಕಿದ ಆಮ್ಲಜನಕದ ಕವಚವಿನ್ನೂ ಹಾಗೇ ಇದೆ. ಬಹುಶಃ ಇನ್ನೆರಡು ದಿನಗಳಲ್ಲಿ ಅಂಬಿ ಬಗ್ಗೆ ಆಶಾದಾಯಕ ಸುದ್ದಿ ಬಂದರೂ ಬರಬಹುದು. ಪ್ರಶ್ನೆಯೆಂದರೆ ಬೆಂಗಳೂರಿನ ಬೇರೆಲ್ಲ ಆಸ್ಪತ್ರೆಗಳಿಗಿಂತ ಶ್ರೇಷ್ಠವಾದ ಚಿಕಿತ್ಸೆ ಸಿಂಗಾಪೂರ್‌ನ ಮೌಂಟ್ ಎಲಿಜಬೆತ್ ಆಸ್ಪತ್ರೆಯಲ್ಲಿದೆಯೇ ಅಥವಾ ವಿಕ್ರಂ ಆಸ್ಪತ್ರೆಯಲ್ಲಿ ಅಂಥಾ ಗುಣಮಟ್ಟದ ಚಿಕಿತ್ಸೆಯ ಕೊರತೆಯಿತ್ತೆ? ಕರ್ನಾಟಕದ ಬೇರೆ ಯಾವುದೇ ಆಸ್ಪತ್ರೆಯಲ್ಲಿ ಸಿಗದಂಥ ಗುಣಮಟ್ಟದ ಆರೈಕೆಯನ್ನು ಸಿಂಗಾಪೂರ್ ಮೌಂಟ್ ಎಲಿಜಬೆತ್ ಆಸ್ಪತ್ರೆ ನೀಡುತ್ತದೆಯೆ?

ಈ ಥರದ ಪ್ರಶ್ನೆಗಳೆಲ್ಲ ಹುಟ್ಟಿಕೊಂಡಿದ್ದು ಫೆಬ್ರವರಿ 28ರ ಶುಕ್ರವಾರದ ರಾತ್ರಿಯೆ. ಏಕಾಏಕಿ ಅಂಬಿಯನ್ನು ಸಿಂಗಾಪೂರ್‌ಗೆ ಸಾಗಿಸಲಾಗುತ್ತದೆ ಎಂಬ ಸುದ್ದಿ ಹಬ್ಬಿದ್ದೇ ಅಭಿಮಾನಿಗಳು ಆತಂಕಕ್ಕೆ ಬಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಖುದ್ದು ವಿಕ್ರಂ ಆಸ್ಪತ್ರೆಗೆ ಫೋನ್ ಮಾಡಿ ಅಪಾಯದ ಕಾರಣ ಕೆದಕತೊಡಗಿದ್ದರು. ಆಗಲೇ ಗೊತ್ತಾಗಿದ್ದು ಅಂಬಿ ಅಂಡರ್ ರಜನಿ ಕೇರ್...!

ಹಾಗೆ ನೋಡಿದರೆ ಕರ್ನಾಟಕದಲ್ಲಿ ಮೌಂಟ್ ಎಲಿಜಬೆತ್ ಮಟ್ಟದ ಆಸ್ಪತ್ರೆಗಳಾಗಲಿ ಅಲ್ಲಿನ ಶ್ವಾಸಕೋಶ ತಜ್ಞ ಡಾ. ಓಂಗ್ ಥರದ ನಿಷ್ಣಾತರಾಗಲಿ ಇಲ್ಲವೆಂದಲ್ಲ, ವಿಕ್ರಂ ಆಸ್ಪತ್ರೆಯ ಶ್ವಾಸಕೋಶ ತಜ್ಞ ಡಾ. ಸತೀಶ್ ವಿಶ್ವದ ಶ್ರೇಷ್ಠ ಶ್ವಾಸಕೋಶ ತಜ್ಞರಲ್ಲೊಬ್ಬರು. ವಿಕ್ರಂ ಆಸ್ಪತ್ರೆ ಮಾತ್ರವಲ್ಲದೆ ನಾರಾಯಣ ಹೃದಯಾಲಯಕ್ಕೂ ವಿಶೇಷ **Pulmonologist** ಆಗಿರುವ ಡಾ. ಸತೀಶ್ ರಾಜಾಜಿನಗರದ ಭಾಷ್ಯಂ ಸರ್ಕಲ್ ಬಳಿ ತಮ್ಮದೇ ಆದ ಸತೀಶ್ ಆಸ್ಪತ್ರೆಯನ್ನೂ ನಡೆಸುತ್ತಾರೆ.

ಡಾ. ಸತೀಶ್

ಸಿಂಗಾಪೂರ್‌ನ ಡಾ. ಓಂಗ್‌ಗೆ ಹೋಲಿಸಿದರೆ ಡಾ. ಸತೀಶ್ ಪದವಿ ಮತ್ತು ಪರಿಣತಿಯಲ್ಲೂ ಒಂದು ಕೈ ಮೇಲೆಯೆ. ವರ್ಷಗಟ್ಟಲೆ ಇಂಗ್ಲೆಂಡಿನ ಸೌತ್ ಹ್ಯಾಂಪ್ಟನ್ ಜನರಲ್ ಆಸ್ಪತ್ರೆಯಲ್ಲಿ ಹಿರಿಯ **chest physician** ಆಗಿದ್ದರು. ಆ ಕಾಲಕ್ಕೇ ಎದೆಗೂಡು ಶಾಸ್ತ್ರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ವರ್ಣಪದಕ ಪಡೆದವರು. ಲಂಡನ್‌ನಲ್ಲಿ ತಮ್ಮ **MRCP** ಮತ್ತು **FRCP** ಕೋರ್ಸ್ ಮುಗಿಸಿದ ನಂತರ **British Thorasis Society**ಯ ಫೆಲೋಶಿಪ್ ಪಡೆದವರು.

ಅಷ್ಟಕ್ಕೂ ಡಾ. ಸತೀಶ್ ಬಳಿ ಚಿಕಿತ್ಸೆ ಪಡೆಯುವಂತೆ ಅಂಬಿಗೆ ಶಿಫಾರಸ್ಸು ಮಾಡಿದ್ದೇ ಅಂಬಿ ಅಕ್ಕನ ಮಗ ಡಾ. ಶೇಖರ್. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಪ್ರೊಫೆಸರ್ ಆಫ್ ಮೆಡಿಸಿನ್ ಆಗಿರುವ ಡಾ. ಶೇಖರ್ ಕೂಡ ನಿಷ್ಣಾತ ವೈದ್ಯರೇ. ತನ್ನ ಖಾಸಾ ಸೋದರಮಾವ ಅಂಬಿಯನ್ನು ಡಾ. ಸತೀಶ್ ಬಳಿ ಚಿಕಿತ್ಸೆ ಪಡೆಯುವಂತೆ ಶೇಖರ್ ಸೂಚಿಸುತ್ತಾರೆಂದರೆ ಅದಕ್ಕೊಂದು ಮಹತ್ತರವಾದ ಕಾರಣ ಇರಲೇಬೇಕು.

ಇಲ್ಲಿಗೆ ಒಂದೂವರೆ ವರ್ಷದ ಹಿಂದೆಯೇ ಅಂಬಿಗೆ ಶ್ವಾಸಕೋಶದ ಸಮಸ್ಯೆ ಉಲ್ಬಣಗೊಂಡಿತ್ತು. ಇದ್ದಕ್ಕಿದ್ದಂತೆ ಉಸಿರು ಕಟ್ಟಿದಂತಾಗುವುದು, ತಲೆಸುತ್ತು ಬರುವುದು, ಫರ್ಲಾಂಗ್ ದೂರ ನಡೆಯುವುದಕ್ಕೂ ಕಷ್ಟವಾಗುತ್ತಿತ್ತು. ಇದನ್ನು ಸೂಕ್ಷ್ಮವಾಗೇ ಗಮನಿಸಿದ ಡಾ. ಶೇಖರ್ ತಮ್ಮ ಪರಿಚಿತರಾಗಿದ್ದ ಡಾ. ಸತೀಶ್‌ರನ್ನು ಕರೆದೊಯ್ದು ಅಂಬಿಗೆ ಪರಿಚಯಿಸಿದ್ದರು. ಡಾ. ಸತೀಶ್ ಚಿಕಿತ್ಸೆ ಮತ್ತು ಎಚ್ಚರಿಕೆಯ ಫಲವಾಗಿಯೇ ಅಂಬಿ ತಮ್ಮ 45 ವರ್ಷಗಳ ಸುದೀರ್ಘ ಸಿಗರೇಟು ಚಟವನ್ನು ಬಿಟ್ಟಿಯೂ ಆಗಿತ್ತು. ಆಸ್ಪತ್ರೆಯೆಂದರೇನೇ ಅಂಬಿಗೆ ಅದೆಂಥದೋ ಭೀತಿ. ಆ ಕಾರಣಕ್ಕೇ ಶುದ್ಧ ಆಮ್ಲಜನಕ ಪೂರೈಸುವ ಉಪಕರಣವೊಂದನ್ನು ಖರೀದಿಸಿ ತಂದಿಟ್ಟುಕೊಂಡಿದ್ದ ಅಂಬಿ ಪ್ರತಿನಿತ್ಯ ಎದ್ದಾಕ್ಷಣವೇ ಆಕ್ಸಿಜನ್ ಕವಚ ಧರಿಸುತ್ತಿದ್ದರು.

ಕುಸಿದು ಬಿದ್ದರು

ಅಷ್ಟಾಗ್ಯೂ ಕದ್ದೂ ಮುಚ್ಚಿ ಸಿಗರೇಟು ಸೇದುವ ಖಯಾಲಿಯಿತ್ತಲ್ಲ, ಇಲ್ಲಿಗೆ ಎರಡು ತಿಂಗಳ ಹಿಂದೆ ಜ್ಞಾನಭಾರತಿ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಟಿ ಪ್ರಿಯಾ ಹಾಸನ್ ತನ್ನ ಸ್ಮಗ್ಲರ್ ಚಿತ್ರದ ಆಡಿಯೋ ಬಿಡುಗಡೆ ಕಾರ್ಯಕ್ರಮವೊಂದಕ್ಕೆ ಅಂಬಿಯನ್ನು ಕರೆದೊಯ್ದಾಗಲೇ ಅನಾಹುತ ನಡೆದುಹೋಯಿತು.

ಏಕಾಏಕಿ ಎದೆ ಹಿಡಿದುಕೊಂಡು ಕುಸಿದು ಬಿದ್ದ ಅಂಬಿಯನ್ನು ಜೊತೆಗಿದ್ದವರೆಲ್ಲ ಎತ್ತಿ ಕೂರಿಸಿ ಗಾಳಿ ಬೀಸಿ ನೀರು ಕುಡಿಸಿದರಾದರೂ ಪರಿಸ್ಥಿತಿ ಮಾತ್ರ ಸರಿ ಹೋಗಲೇ ಇಲ್ಲ. ಹತ್ತೇ ನಿಮಿಷದಲ್ಲಿ ಆಡಿಯೋ ಬಿಡುಗಡೆ ಮಾಡಿ ವಾಪಸ್ಸಾದ ಅಂಬಿಗೆ ಅವತ್ತೂ ಡಾ. ಸತೀಶ್ ಮನೆಗೇ ಬಂದು ಚಿಕಿತ್ಸೆ ನೀಡಿದ್ದರು. ಇದಾಗಿ ಒಂದೂವರೆ ತಿಂಗಳಿಗೆ ಅಂದರೆ ಅಂಬಿ ವಿಕ್ರಂ ಆಸ್ಪತ್ರೆಗೆ ದಾಖಲಾಗುವುದಕ್ಕೂ 20 ದಿನಗಳ ಹಿಂದೆ ಮೈಸೂರಿನಲ್ಲಿ ನಡೆದ ಗುಂಡ್ಲುಪೇಟೆ ಶಾಸಕ ಮತ್ತು ಮಾಜಿ ಮಂತ್ರಿ ಮಹದೇವ ಪ್ರಸಾದ್ ಮಗನ ಮದುವೆಗೆ ಬಂದಾಗಲೂ ಅಂಬಿ ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದರು.

ಆಗಲೂ ಇದೇ ಡಾ. ಸತೀಶ್ ನಿಂತು ಅಂಬಿಯ ಶ್ವಾಸಕೋಶದ ಆರೈಕೆ ನಡೆಸಿದ್ದರು. ಕಳೆದ ಒಂದೂವರೆ ವರ್ಷದಿಂದ ವಾರಕ್ಕೊಮ್ಮೆ ಜೆ.ಪಿ.ನಗರದ ಅಂಬಿ ಮನೆಗೆ ಹೋಗಿ ಆರೈಕೆ ಮಾಡುತ್ತಿದ್ದ ಡಾ. ಸತೀಶ್ ಗಮನಿಸಿದ ಒಂದು ಸೂಕ್ಷ್ಮವೆಂದರೆ ಫೆಬ್ರವರಿ 21ಕ್ಕೆ ಅಂಬಿ ವಿಕ್ರಂ ಆಸ್ಪತ್ರೆಗೆ ದಾಖಲಾಗುವುದಕ್ಕೂ ಎರಡು ವಾರಗಳ ಹಿಂದೆಯೇ ಮತ್ತೆ ಸಿಗರೇಟು ಶುರು ಹಚ್ಚಿಕೊಂಡಿದ್ದರು!

ಹಾಗೊಮ್ಮೆ ವಿಕ್ರಂ ಆಸ್ಪತ್ರೆಯಾಗಲಿ ಡಾ. ಸತೀಶ್ ಆರೈಕೆಯಾಗಲಿ ಸರಿ ಹೋಗಲಿಲ್ಲ ಎಂದಾದರೆ ಶ್ವಾಸಕೋಶ ಚಿಕಿತ್ಸೆಯಲ್ಲಿ ಉನ್ನತಿ ಸಾಧಿಸಿದ ನಾರಾಯಣ ಹೃದಯಾಲಯವಿತ್ತು, **Fortis** ಆಸ್ಪತ್ರೆಯಲ್ಲೂ ವಿಶ್ವದ ಬೇರಾವುದೇ ಆಸ್ಪತ್ರೆಯಷ್ಟೇ ಉನ್ನತ ಚಿಕಿತ್ಸೆಯಿತ್ತು, ಅಪೊಲೋ ಆಸ್ಪತ್ರೆ ಕೂಡ ವಿಶ್ವ ಮಟ್ಟದ ಶ್ವಾಸಕೋಶ ಚಿಕಿತ್ಸಾ ಘಟಕ ಹೊಂದಿತ್ತು, ಮಣಿಪಾಲ ಆಸ್ಪತ್ರೆ, ಸೆಂಟ್ ಜಾನ್ಸ್ ಆಸ್ಪತ್ರೆಗಳ ಆರೈಕೆ ಮತ್ತು ಶ್ರೇಷ್ಠತೆ ಯಾವ ಮಟ್ಟದ್ದೆಂದರೆ ಇಲ್ಲಿ ಚಿಕಿತ್ಸೆ ಪಡೆಯಲೆಂದೇ ವಿಶ್ವದ ಬೇರೆ ಬೇರೆ ಭಾಗಗಳಿಂದ ವಿದೇಶಿಯರು ಬರುತ್ತಾರೆ. ಅಷ್ಟೇ ಏಕೆ, ನಮ್ಮ ಸರ್ಕಾರಿ ವಿಕ್ಟೋರಿಯಾ ಆಸ್ಪತ್ರೆಯ ಎದೆಗೂಡು ತಜ್ಞ ಡಾ. ಹೆಚ್.ಎಸ್. ರವೀಂದ್ರ ಕೂಡ ವಿಶ್ವ ಶ್ರೇಷ್ಠರೇ.

ರಜನಿಯ ಎಂಟ್ರಿ

ಇಷ್ಟೆಲ್ಲಾ ಇದ್ದೂ ಬರೋಬ್ಬರಿ ಒಂದು ವಾರದ ಕಾಲ ವಿಕ್ರಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಅಂಬಿಯನ್ನು ಸಿಂಗಾಪುರಕ್ಕೆ ಸಾಗಿಸಲು ಬೇರೆ ಕಾರಣವೇ ಇರಲಿಲ್ಲ, ಇದ್ದ ಒಂದೇ ಒಂದು ಕಾರಣವೆಂದರೆ ಅದು ತಮಿಳು ಸೂಪರ್‌ಸ್ಟಾರ್ ರಜನಿಯ ಕಳಕಳಿ!

ವಿಕ್ರಂ ಆಸ್ಪತ್ರೆಗೆ ಅಂಬಿ ದಾಖಲಾಗಿದ್ದಾರೆಂಬ ಪುಕಾರೆದ್ದಿದ್ದೇ ಎಲ್ಲೆಲ್ಲಿಂದಲೋ ಗಣ್ಯರು ಬರಲಾರಂಭಿಸಿದ್ದರು. ಆದಿ ಚುಂಚನಗಿರಿಯ ನಿರ್ಮಲನಾಥರಿಂದ ಹಿಡಿದು ತೆಲುಗು ನಟ ಮೋಹನ್‌ಬಾಬು ತನಕ ಬೆಂಗಳೂರಿಗೆ ಬಂದು ವಿಕ್ರಂ ಆಸ್ಪತ್ರೆಗೆ ಭೇಟಿ ಕೊಟ್ಟರಾದರೂ ಅಂಬಿಯನ್ನು ಇರಿಸಿದ್ದ ಐಸಿಯೂನ ಒಳಕ್ಕೆ ಪ್ರವೇಶ ಸಿಕ್ಕಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಾತ್ರ. ಅದೇ ಹೊತ್ತಿಗೆ ರಜನಿಕಾಂತ್ ಬೆಂಗಳೂರಿಗೆ ಬರುತ್ತಾರೆಂದು ವದಂತಿ ಹಬ್ಬಿತು. ಫೆಬ್ರವರಿ 27ರ ಹೊತ್ತಿಗೆ ಏಕಾಏಕಿ ಸಹಸ್ರಾರು ಭಕ್ತರು ವಸಂತನಗರದ ವಿಕ್ರಂ ಆಸ್ಪತ್ರೆಯ ಸುತ್ತ ಜಮಾಯಿಸಿದ್ದೇ ದೊಡ್ಡ ರಾದ್ಧಾಂತವಾಯಿತು. ಇನ್ನೇನು ಜನ ಕಿಕ್ಕಿರಿದು ಗಲಾಟೆಯಾಗುತ್ತೋ ಎಂದು ಬೆಂಗಳೂರಿಗೆ ಬಂದಿದ್ದ ರಜನಿ ಅಂಬಿಯನ್ನು ನೋಡುವುದಕ್ಕೂ ಸಾಧ್ಯವಾಗದೆ ವಾಪಸ್ಸಾದರೆಂಬ ಸುದ್ದಿಯೂ ಬಂತು.

ನಿಜಕ್ಕೂ ಅಂಬಿಯ ಆರೋಗ್ಯ ವಿಚಾರಣೆಗೆಂದು ಬೆಂಗಳೂರಿಗೆ ಬರುವ ಇರಾದೆ ರಜನಿಗಿತ್ತಾದರೂ ವಿಕ್ರಂ ಆಸ್ಪತ್ರೆಯ ಸುತ್ತಮುತ್ತಲ ವಾತಾವರಣ ಭಯಾನಕವಾಗಿತ್ತು. ದಿನದ ಯಾವುದೇ ಹೊತ್ತಲ್ಲೂ ಆಸ್ಪತ್ರೆಯೆದುರೇ ಶಾಮಿಯಾನ ಹಾಕಿ ಕೂತ ಅಂಬಿ ಅಭಿಮಾನಿಗಳ ದಂಡು, ಹೊತ್ತು ಗೊತ್ತಿಲ್ಲದೆ ಅಂಬಿಯನ್ನು ಕಾಣಲೆಂದು ಬರುತ್ತಿದ್ದ ಗಣ್ಯರ ಹಿಂಡು, ಇದರ ಮಧ್ಯೆ ತಾನೇನಾದರೂ ಬರುತ್ತೇನೆಂದರೆ ಕಿಕ್ಕಿರಿಯುವ ತಮಿಳು ಭಕ್ತಾದಿಗಳೆಲ್ಲ ಸೇರಿಬಿಟ್ಟರೆ ಆಸ್ಪತ್ರೆಯ ವಾತಾವರಣ ಮತ್ತಷ್ಟು ಹದಗೆಡುತ್ತದೆಯೇ ಹೊರತು ಅಂಬಿಗದು ಅನುಕೂಲವಲ್ಲ ಎಂಬುದು ರಜನಿಗೆ ಚೆನ್ನಾಗಿ ಗೊತ್ತು.

ಆಪ್ತಮಿತ್ರ...!

ಇದೆಲ್ಲ ಲೆಕ್ಕ ಹಾಕಿಯೇ ಬೆಂಗಳೂರಿಗೆ ಬರುವ ತನ್ನ ಕಾರ್ಯಕ್ರಮವನ್ನು ಹಠಾತ್ತಾಗಿ ರದ್ದು ಮಾಡಿದ ರಜನಿ ಮೊದಲು ಫೋನಾಯಿಸಿದ್ದೇ ಸುಮಲತಾಗೆ. ಅಲ್ಲಿ ಆ ಗಲಾಟೆ ಮಧ್ಯೆ ಏನೇ ಟ್ರೀಟ್‌ಮೆಂಟ್ ಕೊಟ್ಟರೂ ವಾತಾವರಣ ಸರಿಹೋಗಲ್ಲ, ಹೊರಗೆ ಅಭಿಮಾನಿಗಳ ಗಲಾಟೆ, ಪ್ರತಿನಿತ್ಯ ಆಸ್ಪತ್ರೆಗೆ ಬರುವ ಗಣ್ಯರ ಮಧ್ಯೆ ಟೆನ್ಷನ್ ಇದ್ದೇ ಇರುತ್ತೆ, ಅದಕ್ಕೆ ಈ ಹಿಂದೆ ನಾನು ಕೂಡ ಇದೇ ಪ್ರಾಬ್ಲಂಗೆ ಟ್ರೀಟ್‌ಮೆಂಟ್ ಪಡೆದಿದ್ದ ಸಿಂಗಾಪೂರ್ ಆಸ್ಪತ್ರೆಯೇ ಸೂಕ್ತ ಎಂದು ರಜನಿ ಒತ್ತಾಯಿಸಿದ್ದಕ್ಕೆ ಸುಮಲತಾ ಕೂಡ ಇಲ್ಲವೆನ್ನುವಂತಿರಲಿಲ್ಲ.

ಏಕೆಂದರೆ ರಜನಿ ಮತ್ತು ಅಂಬಿ ಇಂದು ನಿನ್ನೆಯ ಗೆಳೆಯರಾಗಿರಲಿಲ್ಲ. ಬೆಂಗಳೂರಿಗೆ ಬಂದಾಗೆಲ್ಲ ರಜನಿ ಅಂಬಿಯ ಆತಿಥ್ಯ ಪಡೆಯದೇ ಹೋದವರಲ್ಲ, ಹಾಗೆ ಅಂಬಿ ಕೂಡ ಚೆನ್ನೈಗೆ ಹೋದರೆಂದರೆ ರಜನಿಯನ್ನು ಕಾಣದೆ ಬಂದವರಲ್ಲ. ಚಿತ್ರರಂಗದ ಏನೇ ಸಮಸ್ಯೆಗಳಿರಲಿ ಕಾವೇರಿ ನೀರಿನಿಂದ ಹಿಡಿದು ತಮಿಳು ಚಿತ್ರಗಳ ನಿಷೇಧದ ತನಕ ಅಂಬಿ-ರಜನಿ ಗೆಳೆತನವೇ ಅನೇಕ ಸಮಸ್ಯೆಗಳನ್ನು ಬಗೆ ಹರಿಯುವಂತೆ ಮಾಡಿದೆ. ಇಷ್ಟಲ್ಲದೆ ರಜನಿ ಮತ್ತು ಅಂಬಿ ಪದೇ ಪದೇ ಇಸ್ಪೀಟು ಕಾರಣಕ್ಕೂ ಸೇರಿದ್ದುಂಟು. ಮಾರಿಷಸ್, ಸಿಂಗಾಪೂರ್, ಬ್ಯಾಂಕಾಕ್‌ಗಳಲ್ಲೂ ಗೆಳೆಯರ ಒಡನಾಟವಿತ್ತು!

60ರ ಸಂಭ್ರಮದಲ್ಲೇ ಆಪ್ತಮಿತ್ರರು ಎಚ್ಚರಿಸಿದ್ದು!



2012ರ ಮೇ 28ರಂದು ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ ನಡೆದ ಅಂಬಿ 60ನೇ ಹುಟ್ಟುಹಬ್ಬದ ಸಂಭ್ರಮದ ಮಧ್ಯೆಯೇ ಅಪಾಯದ ಪಟಾಕಿಯೊಂದನ್ನು ಸಿಡಿಸಿದ್ದು ಅಂಬಿಯ ಹಳೇ ಗೆಳೆಯ ಮತ್ತು ಹಿಂದಿ ನಟ ಶತ್ರುಘ್ನ ಸಿನ್ಹಾ-

ಸಿನಿಮಾದಲ್ಲಿ ನಾವೆಲ್ಲ ಸ್ಟೈಲಾಗಿ ಸಿಗರೇಟು ಸೇದುತ್ತೇವೆ. ಅದು ಆ್ಯಕ್ಟಿಂಗಿಗಷ್ಟೇ ಸೀಮಿತವಾಗಬೇಕು. ಹಾಗೊಮ್ಮೆ ನಮ್ಮಲ್ಲಿ ಅದೇನಾದರೂ ಚಟವಾಗಿದ್ದರೆ ಹೆಚ್ಚೆಂದರೆ ನಲವತ್ತೋ ಐವತ್ತೋ ವರ್ಷ ವಯಸ್ಸಿಗೇ ಅದನ್ನು ಬಿಡಬೇಕು. ಅಂಬರೀಶ್‌ಗೀಗ ಅರವತ್ತು ವರ್ಷ. ಬಿಸಿರಕ್ತವಾಗಿದ್ದರೆ ನಾನೀ ಮಾತು ಹೇಳುತ್ತಿರಲಿಲ್ಲ, ಇನ್ನಾದರೂ ಅಂಬಿ ತನ್ನ ಸಿಗರೇಟ್ ಖಯಾಲಿಯನ್ನು ಬಿಡಲಿ. ಅವರು ನೂರ್ಕಾಲ ಆರೋಗ್ಯವಾಗಿ ಬದುಕಬೇಕೆಂಬುದೇ ನನ್ನ ಆಶೆ. ಈ ಸಂದರ್ಭದಲ್ಲಿ ಇದೊಂದೇ ನನ್ನ ಹಾರೈಕೆ...!

ಇದು ಅಂಬಿ ಅರವತ್ತರ ಸಂಭ್ರಮದಲ್ಲಿ ಹಿಂದಿ ನಟ ಶತ್ರುಘ್ನ ಸಿನ್ಹಾರ ಬಯಕೆ ಮತ್ತು ಹಾರೈಕೆಯಾದರೆ ರಜನಿಕಾಂತ್ ಕೂಡ ಇದನ್ನೇ ಮತ್ತೊಮ್ಮೆ ಒತ್ತಿ ಹೇಳಿದ್ದರು. ಅಂಬಿಯ ಹಾಗೆ ನಾನು ಕೂಡ ಚೈನ್ ಸ್ಮೋಕರ್ರೇ. ಅದು ಸಿನಿಮಾಕ್ಕಷ್ಟೇ ಚೆಂದ. ಅದರಿಂದ ಹೊರಬರುವುದಕ್ಕೆ ನಾನು ಪಟ್ಟ ಕಷ್ಟ ನನಗಷ್ಟೇ ಗೊತ್ತು. ಒಬ್ಬ ಸ್ನೇಹಿತನಾಗಿ ಈ ಸಂದರ್ಭದಲ್ಲಿ ಅಂಬಿಗೆ ನಾನು ಆದಷ್ಟು ಬೇಗ ಸಿಗರೇಟು ಬಿಟ್ಟು ಬಿಡಿ ಎಂದಷ್ಟೇ ಹಾರೈಸುತ್ತೇನೆ. ಇಲ್ಲೀತನಕ ಸೇದಿದ್ದು ಸಾಕು...!


ಬಹುಶಃ ಅವತ್ತು ಗೆಳೆಯರಿಬ್ಬರು ಹಾರೈಸಿದ್ದನ್ನು ಸಾಧಿಸುವುದು ಅಂಬಿಗೆ ಸಾಧ್ಯವಾಗಲಿಲ್ಲವೋ ಇಚ್ಛಾಶಕ್ತಿಯ ಕೊರತೆಯೋ ಗೊತ್ತಿಲ್ಲ. ಹಾಗಂತ ತನ್ನನ್ನು ತಾನು ಸುಟ್ಟುಕೊಳ್ಳುವುದಿದೆಯಲ್ಲ ಅದು ಅಂಬಿ ಥರದ ಜವಾಬ್ದಾರಿಯುತ ನಾಯಕನಿಗಂತೂ ಥರವಲ್ಲ.



ಇಂಥಾ ಸ್ನೇಹದ ಫಲವಾಗೇ ರಜನಿ ಸಿಂಗಾಪೂರ್‌ನ ಮೌಂಟ್ ಎಲಿಜಬೆತ್ ಮೆಡಿಕಲ್ ಸೆಂಟರ್‌ನ ಶ್ವಾಸಕೋಶ ತಜ್ಞ ಡಾ. ಓಂಗ್‌ಗೆ ಫೋನಾಯಿಸಿದ್ದಾರೆ. ಎರಡು ವರ್ಷಗಳ ಹಿಂದಷ್ಟೇ ರಜನಿಕಾಂತ್ ಇದೇ ಸಿಂಗಾಪೂರ್ ಆಸ್ಪತ್ರೆಯಲ್ಲಿ ಸತತ ಎರಡು ತಿಂಗಳ ಕಾಲ ಮಲಗೆದ್ದು ಬಂದದ್ದು ಈಗ ಅಂಬಿ ಬಳಲುತ್ತಿದ್ದ ಇದೇ **Chronic bronchitis and emphysima** ಸಮಸ್ಯೆಯ ಕಾರಣಕ್ಕೆ!

ಅಂಬಿಯ ಹಾಗೆ ರಜನಿ ಕೂಡ ಚೈನ್ ಸ್ಮೋಕರ್. ಕೊಚ್ಚಡಿಯಾನ್ ಮುಹೂರ್ತದ ದಿನವೇ ನಿತ್ರಾಣರಾಗಿದ್ದ ರಜನಿ ಇದ್ದಕ್ಕಿದ್ದಂತೆ ಉಸಿರುಗಟ್ಟಿ ಕುಸಿದು ಬಿದ್ದಾಗ ಚೆನ್ನೈ ವೈದ್ಯರು ವಿಶೇಷ ವಿಮಾನ ಮಾಡಿ ಕರೆ ತಂದದ್ದು ಸಿಂಗಾಪೂರ್‌ನ ಮೌಂಟ್ ಎಲಿಜಬೆತ್ ಆಸ್ಪತ್ರೆಗೆ. ಇದೇ ಅನುಭವದ ಮೇಲೆ ರಜನಿ ಸಿಂಗಾಪೂರ್ ಚಿಕಿತ್ಸೆಗೆ ವ್ಯವಸ್ಥೆ ಮಾಡಿದ್ದಾರೆ. ವಿಶೇಷ ವಿಮಾನವೂ ಅಣಿಯಾಗಿದೆ. ಫೆಬ್ರವರಿ 28 ರಂದು ಸುಮಲತಾ ಮತ್ತು ಡಾ. ಕೆ.ಎಸ್. ಸತೀಶ್ ಜಂಟಿಯಾಗೇ ಪತ್ರಿಕಾಗೋಷ್ಠಿ ನಡೆಸಿ ಅಂಬಿಯನ್ನು ಸಿಂಗಾಪೂರ್‌ಗೆ ಕರೆದೊಯ್ಯುತ್ತಿರುವುದು **Non Medical** ಕಾರಣಕ್ಕೆ ಅಂದಾಗಲೇ ಇದರ ಹಿಂದಿರುವ ರಜನಿಯ ಕಾಳಜಿ ಗೊತ್ತಾಗಿಹೋಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಇದೇ ಬೇಕಾಗಿತ್ತು.

ಡಾ. ಓಂಗ್ ಅಚ್ಚರಿ



ಅಂದರೆ ಸಿಂಗಾಪೂರ್‌ನ ಮೌಂಟ್ ಎಲಿಜಬೆತ್ ಆಸ್ಪತ್ರೆಯ ಅನುಕೂಲಗಳು ನಮ್ಮಲ್ಲಿಲ್ಲ ಎಂದಾಗಲಿ, ನಮ್ಮಲ್ಲಿ ಆ ಮಟ್ಟದ ನಿಷ್ಣಾತ ಡಾಕ್ಟರ್‌ಗಳು ಇಲ್ಲ ಎಂದಾಗಲಿ ಅರ್ಥವಲ್ಲ. ಅಂಬಿ ಜೊತೆ ವಿಶೇಷ ವಿಮಾನದಲ್ಲಿ ಸಿಂಗಾಪೂರ್‌ಗೆ ಹೋಗಿದ್ದ ಡಾ. ಶೇಖರ್ ಜೊತೆಗೆ ಡಾ. ಸತೀಶ್ ಕೂಡ ಇದ್ದರು. ಸಿಂಗಾಪೂರ್ ತಲುಪಿದ್ದೇ ರಜನಿಯ ಕಾಳಜಿಗೆ ತಕ್ಕಂತೆ ಎಲ್ಲ ವ್ಯವಸ್ಥೆಯನ್ನೂ ಮಾಡಲಾಗಿತ್ತು. ವಿಕ್ರಂ ಆಸ್ಪತ್ರೆಯಲ್ಲಿ ಡಾ. ಸತೀಶ್ ನಡೆಸಿದ್ದ ರಕ್ತ ಪರೀಕ್ಷೆ, ಪ್ರತಿನಿತ್ಯದ ಎಕ್ಸ್‌ರೇ ವರದಿ, ಅಲ್ಟ್ರಾಸೌಂಡ್ ಸ್ಕ್ಯಾನ್, **Dopplar scan, echo test, ECG** ಎಲ್ಲವನ್ನೂ ಪರಿಶೀಲಿಸಿದ ಡಾ. ಓಂಗ್ ಅಂಬಿಯ ಯಕೃತ್ತನ್ನು ಪರಿಶೀಲಿಸಲಾಗಿ ಅದಿನ್ನೂ ಕಾರ್ಯ ನಿರ್ವಹಿಸುತ್ತಿದ್ದದ್ದನ್ನು ಗಮನಿಸಿದ್ದಾರೆ.

ಸಮಸ್ಯೆಯಿದ್ದದ್ದು ಕಿಡ್ನಿಯಲ್ಲಿ. ಶ್ವಾಸಕೋಶದ ಸೋಂಕಿನ ಫಲವಾಗಿ ಕಿಡ್ನಿ ಕೂಡ ಸೋಂಕಿಗೊಳಗಾಗಿ **Renal distunction** ಆಗಿತ್ತು. ವಿಕ್ರಂ ಆಸ್ಪತ್ರೆಯಲ್ಲಿ ಕಿಡ್ನಿ ಚೇತರಿಸಿಕೊಂಡಾಗಿತ್ತು, ಶ್ವಾಸಕೋಶದ ಸೋಂಕು ಕೂಡ ತಹಬಂದಿಗೆ ಬಂದಾಗಿತ್ತು. ಇದೆಲ್ಲವನ್ನೂ ಸೂಕ್ಷ್ಮವಾಗೇ ಗಮನಿಸಿದ ಡಾ. ಓಂಗ್ ನಾವು ಮಾಡೋದು ಏನೂ ಉಳಿದಿಲ್ಲ... ನಿಮ್ಮ ಚಿಕಿತ್ಸೆಯನ್ನಷ್ಟೇ ಮುಂದುವರಿಸುತ್ತೀವಿ... ಎಂದು ಬಿಟ್ಟರು. ಅದೇ **Antibiotics, Fluids** ಆರೈಕೆ ಬಿಟ್ಟರೆ ಸಿಂಗಾಪೂರ್ ವೈದ್ಯರಿಗೆ ಕೆಲಸವೇ ಇರಲಿಲ್ಲ.

ಈ ವರದಿ ಅಚ್ಚಿಗೆ ಹೋಗುವ ಕೊನೆ ಗಳಿಗೆಯ ಮಾಹಿತಿಯಂತೆ ಇವತ್ತು ಅಂದರೆ ಮಾರ್ಚ್ 6ರ ಬೆಳಗ್ಗಿಯ ಹೊತ್ತಿಗೆಲ್ಲಾ ಅಂಬಿಗೆ ಅಳವಡಿಸಿದ್ದ ವೆಂಟಿಲೇಟರ್ ಕಳಚಿದ್ದಾರೆ. ಆಮ್ಲಜನಕದ ಕವಚ ಕಿತ್ತಾಕ್ಷಣವೇ ಅಂಬಿ ದೀರ್ಘ ನಿಟ್ಟುಸಿರೆಳೆದಿದ್ದಾರೆ. ಕಣ್ಣು ಬಿಟ್ಟಿದ್ದಾರೆ. ಉಸಿರು ನಿರಾಳವಾಗಿ ಶ್ವಾಸಕೋಶ ಸಹಜ ಕ್ರಿಯೆಗೆ ಸ್ಪಂದಿಸುತ್ತಿದೆ.

ಅಭಿಮಾನಿಗಳ ಹರಕೆ, ಬಂಧುಬಳಗದ ಹಾರೈಕೆ, ಕನ್ನಡಿಗರ ಬಯಕೆಗಳೆಲ್ಲ ಒಟ್ಟೊಟ್ಟಿಗೆ ಫಲಗೂಡಿರಬೇಕು. ಎಲ್ಲಕ್ಕೂ ಮಿಗಿಲಾಗಿ ಆಪ್ತಮಿತ್ರ ರಜನಿಯ ಕಾಳಜಿಯಿತ್ತಲ್ಲ ಅದು ನಿಸ್ವಾರ್ಥ ಮತ್ತು ನಿಷ್ಕಲ್ಮಶವಾಗಿತ್ತು.

ಲಾಭದ ಸೋಂಕಿಲ್ಲದ ಗೆಳೆತನದ ಮುಂದೆ ಶ್ವಾಸಕೋಶದ ಸೋಂಕು ಯಾವ ಮಹಾ?

● ರಾ.ಸೋಮನಾಥ್

ಕಪ್ಪು 'ಸುಂದರಿ'

03 ⏮


ಕಾಣಿಸಿಕೊಂಡಳು. ಆಕೆ ರಾತ್ರಿಯಷ್ಟೇ ಕಪ್ಪಾಗಿದ್ದರೂ ಪ್ರಮುಖ ರೂಪದರ್ಶಿಗಳಲ್ಲಿ ಒಬ್ಬಳಾಗಿದ್ದು, ಜಗತ್ತಿನಾದ್ಯಂತ ಮಾಡೆಲ್ ಆಗಿ ಕಂಗೊಳಿಸುತ್ತಿದ್ದಳು, ಹಲವಾರು ಪತ್ರಿಕೆಗಳ ಮುಖಪುಟದಲ್ಲಿ ಆಕೆಯ ಫೋಟೋ ಅಚ್ಚಾಯಿತು. ಎಲ್ಲರೂ ಆಕೆ ತುಂಬ ಸುಂದರಿ ಎನ್ನುತ್ತಿದ್ದರು. ಓಪ್ರಾ ವಿಂಫ್ರೀ ಕೂಡ ಆಕೆ ಸುಂದರಿ ಎಂದಿದ್ದರಿಂದ ಅದು ವಾಸ್ತವ ಎನಿಸಿಕೊಂಡಿತು. ನನ್ನಂತೆ ಕಾಣುವ ಮಹಿಳೆಯೊಬ್ಬಳನ್ನು ಸುಂದರಿ ಎಂದು ಜನ ಕರೆಯುತ್ತಿದ್ದದ್ದನ್ನು ನನಗೆ ನಂಬಲಾಗಲಿಲ್ಲ, ನನ್ನ ಮೈಬಣ್ಣವೇ ನನಗೆ ದೊಡ್ಡ ಅಡಚಣೆ ಎಂದು ಸದಾ ಭಾವಿಸುತ್ತಿದ್ದ ನನಗೆ ಇದ್ದಕ್ಕಿದ್ದಂತೆ ಓಫ್ರಾ ಅದು ಅಡಚಣೆಯಲ್ಲ ಎಂದು ಹೇಳಿದ್ದಳು. ಗೊಂದಲಗೊಂಡಿದ್ದ ನಾನು ನನ್ನ ಅತೃಪ್ತಿಯಲ್ಲೇ ಹೊರಳಾಡುವುದಕ್ಕೆ ಹೊಂದಿಕೊಂಡಿದ್ದೆ, ಆದರೆ ನನ್ನೊಳಗಿನ ಹೂ ಅರಳದೆ ಇರಲು ಸಾಧ್ಯವಿರಲಿಲ್ಲ, ಅಲೆಕ್‌ಳ ಫೋಟೋ ನೋಡಿದಾಗಲೆಲ್ಲ ನಾನು ಅನುದ್ದಿಷ್ಟವಾಗಿ ನನ್ನ ಪ್ರತಿಬಿಂಬವನ್ನು ಕಾಣಲಾರಂಭಿಸಿದೆ. ಈಗ ನನ್ನ ನಡೆಯಲ್ಲೂ ಒಂದು ತರಹದ ಉತ್ಸಾಹವಿತ್ತು, ದೂರದಲ್ಲೆಲ್ಲೋ ಇದ್ದ ಸೌಂದರ್ಯದ ಕಾವಲುಗಾರರು ನನ್ನನ್ನು ನೋಡುತ್ತಿರುವಂತೆ ನನಗೆ ಭಾಸವಾಗುತ್ತಿತ್ತು, ಆದರೂ ನನ್ನ ಸುತ್ತಲೂ ಇದ್ದ ಜಗತ್ತಿನಲ್ಲಿ ಬಿಳಿ ಚರ್ಮಕ್ಕೇ ಆದ್ಯತೆ ಇತ್ತು, ಅವರ ಕಣ್ಣಲ್ಲಿ ನಾನೂ ಅಗಲೂ ಸುಂದರಿ ಆಗಿರಲಿಲ್ಲ, ಅಗೆಲ್ಲ ನನ್ನ ಅಮ್ಮ "ಸೌಂದರ್ಯವನ್ನು ನೀನು ಉಣ್ಣಲಾರೆ, ಅದು ನಿನ್ನನ್ನು ಎಂದೂ ಸಲುಹದು" ಎನ್ನುತ್ತಿದ್ದರು. ನನಗೆ ಅರ್ಥವಾಗದ ಆಕೆ ಈ ಮಾತುಗಳು ನನ್ನನ್ನು ಕಾಡುತ್ತಿದ್ದವು. ಆದರೆ ಕೊನೆಗೊಂದು ದಿನ ನನಗೆ ಅರಿವಾಯಿತು. ಸೌಂದರ್ಯ ಎನ್ನುವುದನ್ನು ನೀನು ಹೊರ ಜಗತ್ತಿನಿಂದ ಸಂಪಾದಿಸಲಾಗುವುದಿಲ್ಲ, ಬದಲಾಗಿ ನಾನು ಇದ್ದಂತೆ ಇರಬೇಕೆಂಬುದೇ ಅಮ್ಮನ ಮಾತಿನ ಅರ್ಥವಾಗಿತ್ತು, ಮಾತ್ರವಲ್ಲ, ಸೌಂದರ್ಯವನ್ನೇ ನಂಬಿಕೊಂಡು ಹೆಚ್ಚು ಕಾಲ ಬದುಕಲಾಗುವುದಿಲ್ಲ ಎಂಬುದೂ ಅಮ್ಮನ ಮಾತಿನ ಅರ್ಥವಾಗಿತ್ತು.

ಬದಲಾಗಿ ಮೂಲಭೂತವಾಗಿ ಸೌಂದರ್ಯ ಎಂಬುದು ನಮ್ಮ ಮತ್ತು ನಮ್ಮ ಸುತ್ತಲು ಇರುವವರ ಬಗೆಗೆ ನಮ್ಮೊಳಗೆ ಇರುವ ಕಕ್ಕುಲತೆ ಎಂಬುದು ಅರ್ಥವಾಯಿತು. ಅಂತಹ ಸೌಂದರ್ಯ ನಿಮ್ಮ ಹೃದಯ ಮತ್ತು ಆತ್ಮ ಜ್ವಲಿಸುವಂತೆ ಮಾಡುತ್ತದೆ. 'ದಿ ಕಲರ್ ಪರ್ಪಲ್' ಕಾದಂಬರಿಯಲ್ಲಿ ಪಾಟ್ಸಿಯನ್ನು ತೊಂದರೆಗಳಿಗೆ ಸಿಲುಕಿಸಿದ್ದು ಮತ್ತು ಆಕೆಯ ಕತೆಯನ್ನು ಇವತ್ತಿಗೂ ನಮ್ಮಲ್ಲಿ ಜೀವಂತವಾಗಿಟ್ಟಿರುವುದು ಆಕೆಯಲ್ಲಿದ್ದ ಅಂತಹ ಸೌಂದರ್ಯ. ಆಕೆಯ ದೈಹಿಕ ಸೌಂದರ್ಯ ನಶಿಸಿಹೋದ ನಂತರವೂ ಉಳಿದುಕೊಂಡಿರುವುದು ಆಕೆಯ ಅಂತರಾಳದ ಈ ಸೌಂದರ್ಯ.

ನನಗೆ ಪತ್ರ ಬರೆದ ಹುಡುಗಿಗೆ ಹೇಳಲು ಇಚ್ಛಿಸುತ್ತೇನೆ: ನನ್ನನ್ನು ತೆರೆಯ ಮೇಲೆಯೋ, ಪತ್ರಿಕೆಗಳ ಮುಖಪುಟದಲ್ಲೋ ನೋಡಿದಾಗ ನನ್ನಂತದ್ದೇ ಪಯಣದಲ್ಲಿ ತೊಡಗಲು ನಾನು ನಿನ್ನನ್ನು ಪ್ರೇರೇಪಿಸುವಂತಾಗಲಿ.

ಆಗ ಹೊರಗಿನ ಸೌಂದರ್ಯಕ್ಕಿಂತ ನಿನ್ನೊಳಗಿನ ಸೌಂದರ್ಯ ಮುಖ್ಯ ಎಂಬುದು ನಿನಗೆ ಅರ್ಥವಾಗುತ್ತದೆ. ಯಾಕೆಂದರೆ ಆ ಒಳಗಿನ ಸೌಂದರ್ಯಕ್ಕೆ ಯಾವುದೇ ಬಣ್ಣವಿಲ್ಲ. ●

ದೇವಸಂದ್ರದ ಶ್ರೀನಿವಾಸ್ ಹತ್ಯೆಯ ಹಿಂದೆ
ಬಿಜೆಪಿ ನಾಯಕರ ಹೆಣ ರಾಜಕೀಯ ಆರಂಭ





ನಂದೀಶ್ ರೆಡ್ಡಿಯ ಕಟ್ಟಾ ಬೆಂಬಲಿಗ ಮತ್ತು ದೇವಸಂದ್ರ ವಾರ್ಡಿನ ಪಾಲಿಕೆ ಸದಸ್ಯೆ ಮಂಜುಳಾ ದೇವಿಯ ಪತಿ ಸಿರಿಪುರ ಶ್ರೀನಿವಾಸ್ ಹತ್ಯೆಯನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟಿದೆಯೆಂದು ಬಿಜೆಪಿ ಬೊಬ್ಬೆ ಹಾಕುತ್ತಿದೆ.

ನಿಜ, ಕೆ.ಆರ್. ಪುರದ ಬಿಜೆಪಿ ಕೌನ್ಸಿಲರ್ ಮಂಜುಳಾ ದೇವಿ ಪತಿ ಶ್ರೀನಿವಾಸ್ ಕೊಲೆ ಅಕ್ಷಮ್ಯವೆ. ಮಹಿಳಾ ಮೀಸಲಾಗದೆ ಹೋಗಿದ್ದರೆ ಖುದ್ದು ಶ್ರೀನಿವಾಸ್ ಗೆದ್ದು ಕೌನ್ಸಿಲರ್ ಆಗುತ್ತಿದ್ದರು. ಒಂದಾನೊಂದು ಕಾಲಕ್ಕೆ ವರ್ತೂರು ಕೃಷ್ಣಪ್ಪನವರ ಬೆಂಬಲಿಗನಾಗಿ ಲೋಕಲ್ ಕಾಂಗ್ರೆಸ್ ನಾಯಕನಾಗಿದ್ದ ಶ್ರೀನಿವಾಸ್ ಕೆ.ಆರ್. ಪುರ ಭಾಗದ ಓರ್ವ ಪ್ರಭಾವಿ ಬಿಜೆಪಿ ನಾಯಕನೆಂಬ ಬಗ್ಗೆ ಎರಡು ಮಾತಿಲ್ಲ.

ಕಾಂಗ್ರೆಸ್ಸಿನಲ್ಲಿ ಸಿದ್ದು ಪ್ರಾಬಲ್ಯಕ್ಕೆ ಬಂದು ಕೆ.ಆರ್. ಪುರದ ಕಾಂಗ್ರೆಸ್ ಪಾರುಪತ್ತೆ ಭೈರತಿ ಬಸವರಾಜ್ ಅಧಿಪತ್ಯಕ್ಕೊಳಪಟ್ಟ ಮೇಲೆ ತನಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ ಎಂಬ ಒಂದೇ ಕಾರಣಕ್ಕೆ ಬಿಜೆಪಿ ಟಿಕೆಟ್ ಗಿಟ್ಟಿಸಿ ನಂದೀಶ್ ರೆಡ್ಡಿಯ ಬೆನ್ನಿಗೆ ನಿಂತ ಶ್ರೀನಿವಾಸ್ ಹೇಳಿಕೇಳಿ ರಿಯಲ್ ಎಸ್ಟೇಟ್ ಕುಳ. ವೈಟ್‌ಫೀಲ್ಡ್‌ನ ಸಮೀಪದ ನಾಲ್ಕೆಕರೆ ಭೂಮಿಗೆ ಕೈಯಿಟ್ಟು ತನ್ನ ಎದುರಾಳಿಗಳ ಜಿದ್ದಿಗೆ ನಿಂತ. ಸಾಲದ್ದಕ್ಕೆ ಮಹದೇವಪುರದ ಹೆಂಗಸೊಬ್ಬಳ ಉಸಾಬರಿಗೂ ಕೈಯಿಟ್ಟ.

ಶ್ರೀನಿವಾಸ್ ಮೇಲೆ ಎದುರಾಳಿ ಗ್ಯಾಂಗ್ ಮೊದಲ ಬಾರಿಗೆ ದಾಳಿ ನಡೆಸಿದ್ದು ಇಲ್ಲಿಗೆ ಎರಡು ವರ್ಷಗಳ ಹಿಂದೆ. ಅಂದರೆ ಬಿಜೆಪಿ ಅಧಿಕಾರದಲ್ಲಿದ್ದಾಗಲೇ. ಆ ಹೊತ್ತಿಗೆ ನಂದೀಶ್ ರೆಡ್ಡಿ ಕೆ.ಆರ್. ಪುರದ ಬಿಜೆಪಿ ಶಾಸಕ. ಇದೇ





ಆರ್. ಅಶೋಕ್ ಆಗ ಪೊಲೀಸ್ ಖಾತೆ ಆಳುತ್ತಿದ್ದರು. ಅವತ್ತು ಶ್ರೀನಿವಾಸ್ ಹತ್ಯೆಗೆ ಕೈಯಿಟ್ಟು ಜೈಲುಪಾಲಾದವರೆಲ್ಲ ಬಿಜೆಪಿ ತೊಲಗುವ ಮೊದಲೇ ಜೈಲಿಂದ ಹೊರಬಿದ್ದಿದ್ದರು. ಬಿಜೆಪಿ ಅಧಿಕಾರದಲ್ಲಿರುವಾಗ ನಂದೀಶ್ ರೆಡ್ಡಿಯೇ ಶಾಸಕನಾಗಿರುವಾಗ ಶ್ರೀನಿವಾಸ್ ಮೇಲೆ ಕೈಯಿಟ್ಟರೆ ತಮಗೆ ಇನ್ನಷ್ಟು ಹಾನಿಯೇ ಹೊರತು ಪ್ರಯೋಜನವಾಗದೆಂಬ ಲೆಕ್ಕಾಚಾರ ಹಂತಕರಿಗಿತ್ತೇನೊ.

ಬಹುಶಃ ಇದೇ ಜಿದ್ದಾಜಿದ್ದಿಯನ್ನು ನೆಪ ಮಾಡಿಕೊಂಡು ಶ್ರೀನಿವಾಸ್ ಸಂಭಾಳಿಸುತ್ತಿದ್ದ ಹೆಂಗಸಿನ ಕಡೆಯವರೂ ಕೈಚಳಕ ತೋರಿರಲೂಬಹುದು. ಕೊಲೆಯಾದ ರೀತಿ ಮಾತ್ರ ಇದೊಂದು ವ್ಯವಸ್ಥಿತ ಸಂಚೆಂಬುದಕ್ಕೆ ಸಾಕಷ್ಟು ಪುಷ್ಟಿ ನೀಡುವಂತಿದೆ. ಕ್ಷೌರದ ಅಂಗಡಿಗೆ ಶ್ರೀನಿವಾಸ್ ಹೋಗುವುದನ್ನೇ ಹೊಂಚು ಹಾಕಿದ್ದ ಹಂತಕರ ತಂಡ ಹೆಲ್ಮೆಟ್‌ಧಾರಿಗಳಾಗಿಯೇ ನುಗ್ಗಿ ಕೌನ್ಸಿಲರ್ ಪತಿಯನ್ನು ಕೊಚ್ಚಿ ಹಾಕಿದ್ದಾರೆ.

ಶ್ರೀನಿವಾಸ್ ಹತ್ಯೆ ಪ್ರತಿಭಟಿಸಿ ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಅನಂತ್‌ಕುಮಾರ್, ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಜೋಷಿಯಾದಿ ಬೀದಿಗಿಳಿದಿದ್ದಾರೆ ನಿಜ. ಆದರೆ ಮಾಜಿ ಡಿಸಿಎಂ ಅಶೋಕ್ ಮಾಡುತ್ತಿರುವ ಆರೋಪವಾದರೂ ಎಂಥಾದ್ದು?

ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದೇ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಬಿಜೆಪಿ ಕಾರ್ಯಕರ್ತರ ಮೇಲೆ ಗೂಂಡಾಗಿರಿ ಹೆಚ್ಚುತ್ತಿದೆ, ಪೊಲೀಸ್ ವ್ಯವಸ್ಥೆ ಕುಲಗೆಟ್ಟಿದೆ ಇತ್ಯಾದಿ ತಾನೆ? ಸಾಲದ್ದಕ್ಕೆ ಮಾರ್ಚ್ 6 ರಂದು ಬಿಜೆಪಿ ನಾಯಕರೆಲ್ಲ ಸೇರಿ ರಾಜ್ಯಪಾಲರಿಗೆ ಸರ್ಕಾರದ ವಿರುದ್ಧ ಮನವಿಯನ್ನೂ ಸಲ್ಲಿಸಿದ್ದಾಗಿದೆ.

ಸರ್ಕಾರದ ವಿರುದ್ಧ

ಬಿಜೆಪಿ ನಾಯಕರ ಆರೋಪದ ಪ್ರಕಾರವೇ ಕಾನೂನು ಮತ್ತು ಸುವ್ಯವಸ್ಥೆಯನ್ನು ಲೆಕ್ಕ ಹಾಕುವುದಾದರೆ ಬಿಜೆಪಿ ಅಧಿಕಾರಾವಧಿಯಲ್ಲಿ ಬಿಬಿಎಂಪಿಯ ಇಬ್ಬರು ಕೌನ್ಸಿಲರ್‌ಗಳ ಕೊಲೆಯಾಯಿತು. ಈ ಪೈಕಿ ಬನಶಂಕರಿ ದೇವಸ್ಥಾನದ ಜೆಡಿಎಸ್ ಕೌನ್ಸಿಲರ್ ದಿವಾನಾ ಆಲಿ ಹತ್ಯೆಯಲ್ಲಿ ನೇರವಾಗಿ ಕೇಳಿಬಂದಿದ್ದು ಆಗ ಗೃಹಮಂತ್ರಿಯಾಗಿದ್ದ ಅಶೋಕ್ ಹೆಸರೆ. ಅಶೋಕ್ ಸ್ವಂತ ಕ್ಷೇತ್ರ ಪದ್ಮನಾಭನಗರದ ಕೌನ್ಸಿಲರ್ ಆಗಿದ್ದ ದಿವಾನಾ ಆಲಿ ಕೊಲೆಯಾದ ನಂತರ ಅಲ್ಲಿಂದ ಗೆದ್ದುಬಂದ ಬಿಜೆಪಿಯ ಬಸವರಾಜ್ ನಾಯಕ ಅಶೋಕ್‌ರ ಬಲಗೈ ಬಂಟ. ಆಲಿ ಹಂತಕರಿಗೆ ಅಶೋಕ್ ಬಂಟ ಬಸವರಾಜ್ ದುಡ್ಡು ಕಾಸಿನ ನೆರವು ನೀಡಿದ ಬಗ್ಗೆಯೂ ಮಾಹಿತಿಯಿತ್ತು.

ಕೊಲೆಯಾಗುತ್ತಾನೆಂದು ಗೊತ್ತಿದ್ದರಿಂದಲೇ ಬನಶಂಕರಿ ವಾರ್ಡಿನ ಮತದಾರರ ಪಟ್ಟಿಯಲ್ಲಿದ್ದ ಮುಸ್ಲಿಂ ಮತದಾರರ ಹೆಸರನ್ನು ನಾಪತ್ತೆ ಮಾಡಿ ಆ ಜಾಗಕ್ಕೆ ಸಾವಿರಾರು ಬಿಜೆಪಿ ನಕಲಿ ಮತದಾರರನ್ನು ಸೇರಿಸಲಾಗಿತ್ತು. ತನಿಖೆಯಾದರೆ ಕೌನ್ಸಿಲರ್ ಆಲಿ ಹತ್ಯೆಯಲ್ಲಿ ಈಗಲೂ ಅಶೋಕ್ ಮತ್ತು ಕೌನ್ಸಿಲರ್ ಬಸವರಾಜ್ ಜೈಲುಪಾಲಾಗಬಹುದು.

ಇನ್ನು ದಿನೇಶ್ ಗುಂಡೂರಾವ್ ಬಂಟ ಮತ್ತು ಗಾಂಧಿನಗರದ ಕಾಂಗ್ರೆಸ್ ಕೌನ್ಸಿಲರ್ ನಟರಾಜ್‌ರನ್ನು ಕೊಂದವರ ಜೊತೆಗೇ ಆಗಿನ ಗೃಹಮಂತ್ರಿ ಅಶೋಕ್ ಚುನಾವಣಾ ಪ್ರಚಾರ ನಡೆಸಿದ್ದರು. ಹಂತಕರ ನಾಯಕ ಮುರುಗನ್ ಜೊತೆಯಲ್ಲೇ ಅಶೋಕ್ ಬಿಜೆಪಿಗೆ ಓಟು ಕೇಳುತ್ತಿದ್ದ ಫೋಟೋಗಳೂ ಟೀವಿ, ಪತ್ರಿಕೆಗಳಲ್ಲಿ ಬಂದವು. ಕೆ.ಆರ್.ಪುರಕ್ಕೆ ಶಾಸಕರಾಗಿದ್ದ ನಂದೀಶ್ ರೆಡ್ಡಿಯೇ ನಿಂತು ದಲಿತ ನಾಯಕ ಕೆಂಪಾಪುರ ಮೂರ್ತಿಯನ್ನು ರಿಯಲ್ ಎಸ್ಟೇಟ್ ಲಾಭಕ್ಕೆ ಕೊಲ್ಲಿಸಿದರೆಂಬುದರ ಬಗ್ಗೆಯೂ ತನಿಖೆಯಾಗಲಿಲ್ಲ, ಆಗಲೂ ಅಶೋಕ್ ಕೈಯಲ್ಲೇ ಪೊಲೀಸ್ ಇಲಾಖೆಯಿತ್ತು.

ಯಲಹಂಕದ ಶಾಸಕ ವಿಶ್ವನಾಥ್ ಎದುರಾಳಿಯಾಗಿದ್ದ ಬುಲೆಟ್ ರವಿ ಹತ್ಯೆಯಲ್ಲೂ ಕೇಳಿಬಂದದ್ದು ಬಿಜೆಪಿ ಶಾಸಕ ವಿಶ್ವನಾಥ್ ಹೆಸರೆ. ಸೈಲೆಂಟ್ ಸುನೀಲನ ಗ್ಯಾಂಗ್ ವಿಶ್ವನಾಥ್ ಮನೆಯಲ್ಲೇ ಪಾರ್ಟಿ ಮಾಡಿದ್ದಾಗಲಿ, ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಯ ಮಗಳ ನಿಗೂಢ ಸಾವಾಗಲಿ (ಮರ್ಯಾದಾ ಹತ್ಯೆ?), ತನ್ನ ಬೆಂಬಲಿಗ ಇಟ್ಟಮಡು ಬಾಬು ಹತ್ಯೆಗೆ ಪ್ರತೀಕಾರವಾಗಿ ಅಶೋಕ್ ಪೊಲೀಸರನ್ನು ಬಿಟ್ಟು ನಡೆಸಿದ ರೌಡಿ ಪರಂಧಾಮನ ಎನ್‌ಕೌಂಟರಾಗಲಿ; ಯಾವುದೂ ಬಿಜೆಪಿ ನಾಯಕರಿಗೆ ನೆನಪಿಲ್ಲವೆ?

ಗೃಹಮಂತ್ರಿಯೊಬ್ಬ ತನ್ನ ಕಾಲ ಬುಡಕ್ಕೇ ಇಷ್ಟೆಲ್ಲಾ ರಕ್ತ ಕೂಡಿಟ್ಟುಕೊಂಡು, ಕೈಗೆ ರಕ್ತವನ್ನೇ ಮೆತ್ತಿಸಿಕೊಂಡು ಈಗ ಕಾಂಗ್ರೆಸ್ ಸರ್ಕಾರ ಬಂದಿದೆಯೆಂದು ತನ್ನೆಲ್ಲಾ ಪಾಪ ಮರೆತರೆ ಹೆಂಗೆ?

ಇನ್ನು ನಂದೀಶ್ ರೆಡ್ಡಿ ಹಾಲಿ ಶಾಸಕ ಭೈರತಿ ಬಸವರಾಜ್ ವಿರುದ್ಧ ಕಿಡಿಕಾರಿದ್ದೇನೊ ಸರಿ. ಆದರೆ ತಾನು ಶಾಸಕನಾಗಿದ್ದಾಗ ಮಾಡಿದ್ದೇನು? ಬಿಬಿಎಂಪಿ ಸದಸ್ಯೆಯ ಪತಿಯ ಹತ್ಯೆ ಬಿಜೆಪಿಯ ಪಾಪಕ್ಕೆ ಸಮರ್ಥನೆಯಾಗಬಾರದು ನಿಜ. ಹಾಗಂಥ ಕಾನೂನು ಸುವ್ಯವಸ್ಥೆ ಕುಲಗೆಟ್ಟಿದೆ, ಕಾಂಗ್ರೆಸ್ ಬಂದಾಕ್ಷಣ ಗೂಂಡಾಗಿರಿ ಹೆಡೆಯೆತ್ತಿದೆ ಎಂದೆಲ್ಲ ಬೊಬ್ಬೆ ಹಾಕಲು ಬಿಜೆಪಿಗೆ ಏನು ಹಕ್ಕಿದೆ?

ವಿಪರ್ಯಾಸವೆಂದರೆ ಶ್ರೀನಿವಾಸ್ ಹತ್ಯೆಯ ಆರೋಪಿಗಳನ್ನು ಪೊಲೀಸರು ಬಂಧಿಸಿದ ನಂತರವೂ ಬಿಜೆಪಿ ತನ್ನ ರಾಜ್ಯಪಾಲರಿಗೆ ಮನವಿ ಕಾರ್ಯಕ್ರಮ ಮುಂದುವರೆಸಿತ್ತು.

ತಾನು ಮಾಡಿದ ಬಾರಾಖೂನ್ ಮಾಫಿ ಮಾಡಬೇಕು ತನಗಾಗದವನ ಸೈಕಲ್ ಕಳ್ಳತನಕ್ಕೆ ಗಲ್ಲಿಗೆ ಹಾಕಬೇಕೆಂಬ ಬಿಜೆಪಿ ಬೊಬ್ಬೆಗೆ ಅರ್ಥವಂಟೆ?

● ರಾ.ಸೋಮನಾಥ್

ಕಲ್ಯಾಣ ಕರ್ನಾಟಕದ ಕತೆ

ಹೈದರಾಬಾದ್ ಕರ್ನಾಟಕ ವಿಶೇಷಾಂಕ


ಭಾರತಕ್ಕೆ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರೆತರೆ ನಿಜಾಮರ ಆಳ್ವಿಕೆಗೆ ಒಳಗಾಗಿದ್ದ ಹೈದ್ರಾಬಾದ್ ಕರ್ನಾಟಕಕ್ಕೆ 1948 ಸೆಪ್ಟೆಂಬರ್ 17 ರಂದು ಸ್ವಾತಂತ್ರ್ಯ ದೊರೆಯಿತು. ರಜಾಕಾರರು (ಸ್ವಯಂ ಸೇವಕರು) ದೌರ್ಜನ್ಯ ನಡೆಸಿದರು. ಅದನ್ನು ಸಶಸ್ತ್ರ ಹೋರಾಟದ ಮೂಲಕ ಎದುರಿಸಲಾಯ್ತು. ಇಲ್ಲಿಯ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ವಿರುದ್ಧ, ನಿಜಾಮನ ಸರ್ವಾಧಿಕಾರದ ವಿರುದ್ಧ ಏಕಕಾಲಕ್ಕೆ ಹೋರಾಡಬೇಕಾಯ್ತು.

ಹೈದ್ರಾಬಾದ್ ಕರ್ನಾಟಕದವೆಂದರೆ ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿಗಳನ್ನೊಳಗೊಂಡ 6 ಜಿಲ್ಲೆಗಳು. ತುಂಗಭದ್ರಾ ಹಾಗೂ ಕೃಷ್ಣಾ ನಡುವಿನ ಪ್ರದೇಶವನ್ನು ಎಡೆದೊರೆ ನಾಡು, ದೋಆಬ್ ಪ್ರದೇಶವೆಂದು ಕರೆಯುತ್ತಾರೆ. ಇದು ಫಲವತ್ತತೆಗೆ ಹೆಸರಾದ ಪ್ರದೇಶ. ಈ ಪ್ರದೇಶದ ಮೇಲಿನ ಹತೋಟಿಗಾಗಿ ಘನಘೋರ ಯುದ್ಧಗಳು ನಡೆದುಹೋಗಿದೆ.


ಈ ಪ್ರದೇಶದಲ್ಲಿ ಆದಿಮಾನವರು ನೆಲೆಸಿದ್ದರೆಂಬುದಕ್ಕೆ ಪುರಾವೆಗಳಿವೆ. ಹಿಕ್ಕಿಹಾಳ, ಹುಣಸಗಿ, ರಾಜನಕೋಳೂರ, ಹಗರಟಗಿ ಮುಂತಾದವು ಪುರಾತತ್ವದ ನೆಲೆಗಳಾಗಿವೆ. ಸಿಂಧೂಕೊಳ್ಳದ ಹರಪ್ಪ-ಮೊಹಂಜೋದಾರದ ಕಾಲಘಟ್ಟದಲ್ಲಿ ಇಲ್ಲಿಯೂ ನಾಗರಿಕತೆಯಿತ್ತು. ಈ ನೆಲೆಗಳಲ್ಲಿ ದೊರಕಿರುವ ಕಲ್ಗೋರಿಗಳು, ಕಲ್ಲಾಸರೆಯ ವರ್ಣಚಿತ್ರಗಳು, ಆಯುಧಗಳು, ಅಲಂಕಾರದ ಮಣಿಗಳು, ಮಡಿಕೆಚೂರುಗಳು, ಇಟ್ಟಿಗೆಗಳು ಪ್ರಾಚೀನತೆಗೆ ಸಾಕ್ಷಿಯಾಗಿವೆ.

ಮೌರ್ಯ ದೊರೆ ಅಶೋಕನ ಶಿಲಾಶಾಸನಗಳು ಕೊಪ್ಪಳ, ಮಸ್ಕಿ, ಜಟ್ಟಿಂಗಿ ಸಿದ್ದಾಪುರ, ನಿಟ್ಟೂರು ಮುಂತಾದ ಕಡೆ ದೊರಕಿವೆ. ಇವುಗಳಲ್ಲಿ ಆತನು "ನಾನು ಸಂಘಕ್ಕೆ ಸೇರಿ ಒಂದೂವರೆ ವರ್ಷಗಳಾದವು. ಹಿಂದೆ ಇಲ್ಲಿ ದೇವರು ಮತ್ತು ಮನುಷ್ಯರ ನಡುವೆ ಅಂತರವಿತ್ತು. ಈಗ ಜನ ಸಾಮಾನ್ಯರೂ ಆ ಎತ್ತರಕ್ಕೆ ಏರಬಹುದು. ತಂದೆ-ತಾಯಿಗಳ, ಗುರು-ಹಿರಿಯರ ಸೇವೆಯನ್ನು ಮಾಡಬೇಕು" ಎಂದು ಮುಂತಾಗಿ ಸಾಮಾನ್ಯವಾಗಿ ಹೇಳಲಾಗಿದೆ.

ಕೊಪ್ಪಳ, ಮಸ್ಕಿ, ಸನ್ನತಿ ಬೌದ್ಧಧರ್ಮದ ನೆಲೆವೀಡಾಗಿದ್ದವು ಹಾಗೂ ವಿದ್ಯಾಕೇಂದ್ರಗಳಾಗಿದ್ದವು.
















ಶಾತವಾಹನರ ಕಾಲದ ಬೌದ್ಧಸ್ತೂಪಗಳು ದೊರಕಿವೆ. ಕೊಪ್ಪಳಕ್ಕೆ ಸಮೀಪದ ಚಿಕ್ಕಸಿಂದೋಗಿಯಲ್ಲಿ ಹಲವಾರು (5558) ಮುದ್ರಾಂಕಿತ ಬೆಳ್ಳಿನಾಣ್ಯಗಳ ತಾಮ್ರದ ಪಾತ್ರೆ ದೊರಕಿದ್ದು ಅದರ ಮೇಲೆ ಬ್ರಾಹ್ಮಿಲಿಪಿಯ ಪ್ರಾಕೃತ ಭಾಷೆಯಲ್ಲಿ 'ಚಿಂತನ', ಎಂದು ಕೊರೆಯಲಾಗಿದೆ.

ಮೌರ್ಯರು, ಶಾತವಾಹನರು, ಬಾದಾಮಿಯ ಚಾಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಸೇವುಣರು, ಕುಮ್ಮಟದುರ್ಗದ ಕಂಪಿಲರಾಯ, ಕುಮಾರರಾಮರು, ವಿಜಯನಗರದಸರು, ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು, ಮೊಗಲರು ಹಾಗೂ ಹೈದ್ರಾಬಾದಿನ ನಿಜಾಮರು ಈ ಭಾಗವನ್ನು ಆಳಿದ್ದಾರೆ. ಹೈದರಾಲಿ, ಟಿಪ್ಪು ಸುಲ್ತಾನರು ಕೊಪ್ಪಳ, ಬಳ್ಳಾರಿ ಮುಂತಾದ ಕಡೆ ಆಳಿಕೆ ಮಾಡಿದ್ದಾರೆ. ಸುರಪುರದ ನಾಯಕರು, ಕನಕಗಿರಿಯ ಪಾಳೇಗಾರರು, ಸಿಂಧರು, ಶಿಲಾಹಾರರು ಕೆಲವು ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಾರೆ.

ನಾಲ್ಕನೆಯ ಶತಮಾನದ ಚಂದ್ರವಳ್ಳಿ ಶಾಸನವನ್ನು ಕುಪಿಣ (ಕೊಪ್ಪಳ)ದ 'ಚಮ'ನೆಂಬವನು ಮಾಡಿದನು. ಕನ್ನಡದ ಮೊಟ್ಟಮೊದಲ ಲಭ್ಯ ಕೃತಿಯಾದ ಕವಿರಾಜಮಾರ್ಗ (ಕ್ರಿ.ಶ. 850) ರಚನೆಯಾದದ್ದು ಹೈದ್ರಾಬಾದ್ ಕರ್ನಾಟಕದಲ್ಲಿ, 19 ಕಥೆಗಳ ವಡ್ಡಾರಾಧನೆ ಹುಟ್ಟಿದ್ದು ಈ ಪ್ರದೇಶದಲ್ಲಿ, ಆದಿಕವಿ ಪಂಪ, ಪೊನ್ನ, ರನ್ನ ಇವರಿಗೆ ಆಶ್ರಯ ನೀಡಿದ್ದು ಈ ಪ್ರದೇಶವೆ. 11ನೆಯ ಶತಮಾನದ ಅಭಿನವ ಪಂಪ ನಾಗಚಂದ್ರನು ಜೇವರ್ಗಿ ತಾಲ್ಲೂಕಿನ ಕುಳಗೇರಿಯವನು. ಆದ್ಯವಚನಕಾರ ಜೇಡರ ದಾಸಿಮಯ್ಯ ಗುಲ್ಬರ್ಗಾ ಜಿಲ್ಲೆಯ ಮುದನೂರಿನವನು.

ನಾಡಿನ, ದೇಶದ, ವಿಶ್ವದ ಗಮನವನ್ನು ಸೆಳೆದ ಸಮಾನತೆ, ಕಾಯಕ, ದಾಸೋಹ, ಲಿಂಗತಾರತಮ್ಯ ಹಾಗೂ ಜಾತಿನಿರಾಕರಣೆಯ ತತ್ವಗಳನ್ನು ಪ್ರತಿಪಾದಿಸಿ ಅನುಷ್ಠಾನಕ್ಕೆ ತಂದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನೆಲೆಗಟ್ಟಾದ ಅನುಭವ ಮಂಟಪ ನೆಲೆಗೊಂಡದ್ದು ಕಲ್ಯಾಣದಲ್ಲಿ. ಹರಳಯ್ಯ ಮಧುವರಸರ ಮಕ್ಕಳ ವಿವಾಹ ಕಾರಣದಿಂದ ವರ್ಣಾಶ್ರಮ ಧರ್ಮಿಗಳು ವರ್ಣಸಂಕರವಾಗುತ್ತದೆಂದು ಹುಯಿಲೆಬ್ಬಿಸಿ ಕಲ್ಯಾಣ ಕ್ರಾಂತಿಗೆ ಕಲ್ಲು ಹಾಕಿದರು. ಆದರೂ ಇವತ್ತಿನವರೆಗೆ ವಚನ ಸಾಹಿತ್ಯದ ಚರ್ಚೆ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆಯೆಂಬುದು ಗಮನಾರ್ಹ ಸಂಗತಿ.

ಹಂಪೆಯಲ್ಲಿ ಹರಿಹರ, ರಾಘವಾಂಕರು ಜನ ಬದುಕಬೇಕೆಂದು ಕಾವ್ಯ ರಚಿಸಿದರು. ಜನಸಾಮಾನ್ಯರನ್ನು ತಮ್ಮ ಕಾವ್ಯ ನಾಯಕರನ್ನಾಗಿ ಮಾಡಿಕೊಂಡು ರಗಳೆ, ಷಟ್ಪದಿಗಳಲ್ಲಿ ಕಾವ್ಯ ರಚಿಸಿದರು. ಪುರಂದರ ದಾಸರು, ಕನಕದಾಸರು ಹಂಪೆಯನ್ನೇ ಕೇಂದ್ರವಾಗಿಸಿಕೊಂಡು ದಾಸಸಾಹಿತ್ಯ ಪ್ರಸಾರ ಮಾಡಿ ಡಾಂಭಿಕತೆಯನ್ನು ತಿರಸ್ಕರಿಸಿ ಶುದ್ಧಭಕ್ತಿಯನ್ನು ಪ್ರತಿಪಾದಿಸಿದರು. ರಾಯಚೂರು ಜಿಲ್ಲೆಯ ಮಾನ್ವಿಯ ಜಗನ್ನಾಥದಾಸರು, ಚೀಕಲಪರ್ವಿಯ ವಿಜಯದಾಸರು, ರಾಮದಾಸರು (ಪಿಂಜಾರ ಬಡೇಸಾಬ), ಕುಂಟೋಜಿದಾಸರು, ಮೋಹನದಾಸರು, ಗಂಗಾವತಿ ತಾಲ್ಲೂಕಿನ ನವಲಿಯ ಗಲಗಲಿ ಅವ್ವನವರು, ಹರಪನಹಳ್ಳಿಯ ಭೀಮವ್ವ ಪ್ರಸಿದ್ಧರಾದ, ಜನಮನವನ್ನು ತಿದ್ದಿದದಾಸರಲ್ಲಿ ಪ್ರಮುಖರು.

ಯಾದಗಿರಿ ಜಿಲ್ಲೆಯ ಸುರಪುರದ ಸಮೀಪದ ದೇವಪುರದಲ್ಲಿದ್ದು ಕನ್ನಡ ಜೈಮಿನಿ ಭಾರತ ರಚಿಸಿದ ಲಕ್ಷ್ಮೀಶ ಕವಿ ಇಲ್ಲಿಯವನು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತಿತರರು ಲಕ್ಷ್ಮೀಶನು ಚಿಕ್ಕಮಗಳೂರು ಜಿಲ್ಲೆಯ ಕಡೂರ ತಾಲೂಕಿನ ದೇವಪುರದವನೆಂದು ಪ್ರತಿಪಾದಿಸಿದ್ದನ್ನು ಸಂಶೋಧಕ ಸೀತಾರಾಮಜಾಗೀರದಾರರು ಪುರಾವೆಗಳ ಮೂಲಕ ಇಲ್ಲಿಯವನೆಂದು ದೃಢಪಡಿಸಿದ್ದಾರೆ. ಕೊಡೇಕಲ್ ಬಸವಣ್ಣ ಹಾಗೂ ತಿಂಥಿಣಿ ಮೌನಪ್ಪಯ್ಯ ಜಾತಿನಿರಾಕರಣೆ ಮಾಡಿ ವಚನಗಳನ್ನು ರಚಿಸಿದ್ದಾರೆ. ಇವರದೊಂದು ಪರಂಪರೆಯೇ ಇದೆ.

ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ ಶರಣರು, ರಾಮಪುರದ ಬಕ್ಕಪ್ಪ, ಖೈನೂರ ಕೃಷ್ಣಪ್ಪ, ನಿಂಬರಗಿಯ ನಾರಾಯಣ. ಐನೂಲಿಯ ಕರಿಬಸವಾರ್ಯ, ಬಿಜಲಿ ಮಸ್ತಾದಿ, ಚೆನ್ನೂರ ಜಲಾಲಸಾಬ, ಚಿದಾನಂದಾವಧೂತ, ಹೇರೂರ ವಿರುಪನಗೌಡ, ವಡಕಿ ತಾತಪ್ಪಯ್ಯ, ನೀರಲಕೇರಿ ಬಸವಲಿಂಗಪ್ಪ, ಸಂತೆ ಕೆಲ್ಲೂರಿನ ಘನಮಠದಪ್ಪ, ಕಡ್ಲೆಬಾಳ ರೇವಪ್ಪ, ಚೀಳಗುರ್ಕಿಯ ತಿಕ್ಕಣ್ಣ ಮುಂತಾದ ನೂರಾರು ತತ್ವಪದಕಾರರು ಇಲ್ಲಿ ಆಗಿಹೋಗಿದ್ದಾರೆ. ಜಡಸಂಪ್ರದಾಯವನ್ನು ಅಲ್ಲಗಳೆದು ಎಲ್ಲರೂ ಒಂದಾಗಿ ಚೆಂದಾಗಿ ಬದುಕುವ ಪರಿಯನ್ನು ನಡೆದು ನುಡಿದು ತೋರಿಸಿದವರು.

ಸಾಹಿತ್ಯ ಚರಿತ್ರೆಕಾರರಿಂದ ಅಲಕ್ಷಿಸಲ್ಪಟ್ಟ ತತ್ವ ಪದಕಾರರ ಜೊತೆಗೆ ನಿಲ್ಲುವವರು ಈ ಭಾಗದ ಪುರಾಣಕರ್ತೃಗಳು. ದ್ಯಾಂಪುರದ ಚೆನ್ನಕವಿ, ಪಂಡಿತ ಕಲ್ಲಿನಾಥ ಶಾಸ್ತ್ರಿ ಬನ್ನಿಕೊಪ್ಪದ ಅಮರನಾಥ ಶಾಸ್ತ್ರಿ ಬಳ್ಳಾರಿಯ ವೈ. ನಾಗೇಶ ಶಾಸ್ತ್ರಿ ಗೋರ್ಕಲ್ ಕರಿಬಸವ ಶಾಸ್ತ್ರಿ, ತಾಳಪಲ್ಲಿಯ ವೆಂಕಪ್ಪಯ್ಯ ಜಾಲಿಹಾಳದ ವೀರಭದ್ರ ಕವಿ ಮುಂತಾಗಿ ಅನೇಕ ಜನ ಪುರಾಣಕಾರರು ಆಗಿಹೋಗಿದ್ದಾರೆ. ಈ ಪ್ರದೇಶದ ದ್ಯಾಂಪುರ ಚೆನ್ನಕವಿಗಳು ನೀಡಿದ ಪುರಾಣಗಳನ್ನು ಅವಲೋಕಿಸಿದ ಮಹಾಕವಿ ಕುವೆಂಪು ಆ ಆಧುನಿಕ ಕಾಲದಲ್ಲಿಯೂ ಷಟ್ಪದಿ ಛಂದಸ್ಸಿನಲ್ಲಿ ಕಾವ್ಯ ರಚಿಸುತ್ತಿದ್ದುದನ್ನು ಸಾರ್ವಜನಿಕವಾಗಿ ಶ್ಲಾಘಿಸಿದ್ದರು. ಇದೇ ರೀತಿ ಅ.ನ.ಕೃ ಅವರು ಪಂಡಿತ ಕಲ್ಲಿನಾಥ ಶಾಸ್ತ್ರಿಗಳ ಪುರಾಣಗಳನ್ನು ನೋಡಿ ಅವರ ಸಾಹಿತ್ಯ ಸೇವೆಯನ್ನು ಮುಕ್ತವಾಗಿ ಪ್ರಶಂಸಿಸಿದ್ದರು.

ಗಿರಿದುರ್ಗಗಳಾದ ಕೊಪ್ಪಳ, ಬಹಾದ್ದೂರ ಬಂಡೆ, ಬಳ್ಳಾರಿ, ರಾಯಚೂರು, ಮುದಗಲ್ಲು ಅಲ್ಲದೆ ಗುಲ್ಬರ್ಗಾ, ಬೀದರ್, ಬಸವಕಲ್ಯಾಣ, ಯಾದಗಿರಿ ಆನೆಗುಂದಿ ಮುಂತಾದವು ಅಭೇದ್ಯ ಕೋಟೆಗಳೆನಿಸಿ ಹಲವು ಕದನಗಳಿಗೆ ಸಾಕ್ಷಿಯಾಗಿವೆ. ಮಲಯಾಬಾದ ಕೋಟೆ ಜಲದುರ್ಗವಾಗಿ ಪ್ರಸಿದ್ಧವಾಗಿದೆ.

ದೇವಾಲಯಗಳ ಚಕ್ರವರ್ತಿಯೆನಿಸಿದ ಇಟ್ಟಿಗೆಯ ಮಹಾದೇವ ದೇವಾಲಯ ರಚಿಸಿದ (ಕ್ರಿ.ಶ. 1112) ವಾಸ್ತುಶಿಲ್ಪಿಗಳೇ ಬೇಲೂರಿನ ಶಿಲಾಬಾಲಿಕೆಯರನ್ನು ಕೆತ್ತಿದ್ದಾರೆಂಬುದು ಬಹುಜನರಿಗೆ ಗೊತ್ತಿರದ ಸಂಗತಿಯಾಗಿದೆ. ಆನೆಗುಂದಿಯ ಹುಚ್ಚಪ್ಪಯ್ಯನ ಮಠ, ಕನಕಗಿರಿಯ ವೆಂಕಟಪತಿಭಾರಿ, ವಿಜಯನಗರದ ಹಜಾರರಾಮನ ಗುಡಿ, ವಿಜಯವಿಠ್ಠಲ ಮಂದಿರ, ಕಲ್ಲಿನ ತೇರು, ಉಗ್ರನರಸಿಂಹ ಮುಂತಾದವು ಗಮನ ಸೆಳೆಯುತ್ತವೆ. ಆಧುನಿಕ ಕಾಲದ ರಚನೆಗಳಾದ ಕಲಬುರ್ಗಿಯ ಶರಣಬಸವೇಶ್ವರ ಗುಡಿ, ಖಾಜಾಬಂದೇನವಾಜದರ್ಗಾ, ಬೌದ್ಧ ವಿಹಾರಗಮನ ಸೆಳೆಯುತ್ತದೆ. ಜಪಾನಿ ಮಾದರಿಯ ಪಂಪಾವನ ತುಂಗಭದ್ರಾ ಆಣೆಕಟ್ಟೆ ಪ್ರದೇಶದಲ್ಲಿ ಜನರನ್ನಾಕರ್ಷಿಸುತ್ತಿದೆ. ಕಾರಟಗಿಯ ತೋಂಟದಾರ್ಯ ತಪೋವನ ವಿಶಿಷ್ಟವಾಗಿದೆ.

ಕವಿರಾಜಮಾರ್ಗ ಮತ್ತು ವಡ್ಡಾರಾಧನೆಯ ಜೊತೆಗೆ ನೆನಪಿಸಿಕೊಳ್ಳಬೇಕಾದ ಬಿಲ್ಹಣ ಕವಿಯ ವಿಕ್ರಮಾಂಕದೇವಚರಿತೆ, ನ್ಯಾಯಶಾಸ್ತ್ರದಲ್ಲಿ ಇಡೀ ರಾಷ್ಟ್ರಕ್ಕೆ ಪ್ರಮಾಣ ಗ್ರಂಥವಾದ ವಿಜ್ಞಾನೇಶ್ವರನ ಮಿತಾಕ್ಷರ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ (ವಿಶ್ವಕೋಶ), ಮತಂಗಮುನಿಯ ಸಂಗೀತ ಪ್ರಮಾಣಗ್ರಂಥ ಬೃಹದ್ದೇಶಿಗಳಲ್ಲದೆ ಜೈನ ಧರ್ಮದ ಪ್ರಮಾಣ ಗ್ರಂಥಗಳು, ಮಹಾಪುರಾಣ, ಧವಳ ಮತ್ತು ಮಹಾಧವಳ, ಉತ್ತರ ಪುರಾಣ ಮುಂತಾದವು ಪ್ರಾಕೃತದಲ್ಲಿ ರಚಿತವಾದ ಕೃತಿಗಳು ಈ ನೆಲದಲ್ಲಿ ರಚನೆಗೊಂಡಿವೆ.

ನವೋದಯ ಸಾಹಿತ್ಯದ ಕೇಂದ್ರಗಳನ್ನು ಹೆಸರಿಸುವಾಗ ಧಾರವಾಡ, ಮೈಸೂರು, ಮಂಗಳೂರು ಕೇಂದ್ರಗಳನ್ನು ಗುರುತಿಸಿದಂತೆ ಹೈದ್ರಾಬಾದ್ ಕರ್ನಾಟಕದಲ್ಲಿಯೂ ಒಂದು ಕೇಂದ್ರವಿತ್ತೆಂಬುದನ್ನು ಮರೆತುಬಿಡುತ್ತಾರೆ. ಮಹಾಗಾಂವದ ಕವಿ ಶರಣಯ್ಯ ಸ್ವಾಮಿ, 1925 'ಕಥಾಗೊಂಚಲು'ವಿನ ಚೆನಪನಹಳ್ಳಿ ದೇಸಾಯಿ ಹನುಮಂತರಾಯ, ಡಿ.ಕೆ. ಭೀಮಸೇನರಾವ, ತವಗ ಭೀಮಸೇನರಾವ, ಮಾನ್ವಿ ನರಸಿಂಗರಾವ, ಕಪಟರಾಳ ಕೃಷ್ಣರಾವ, ನಾ.ಭ. ಶಾಸ್ತ್ರಿ, ದಾಸ ಸಾಹಿತ್ಯ ಹೊರಬರಲು ಕಾರಣರಾದ ಗೊರೆಬಾಳ ಹನುಮಂತರಾಯ ಮುಂತಾದ ಪೂರ್ವಪರಂಪರೆಯೊಂದಿಗೆ

> ಸಹಬಾಳ್ವೆ, ಸಾಹಿತ್ಯ, ಸಂಸ್ಕೃತಿ, ವಾಸ್ತುಶಿಲ್ಪ, ಕಲೆ, ಕೃಷಿ, ದಲಿತ-ಬಂಡಾಯ ಚಳವಳಿಗೆ ಈ ಪ್ರದೇಶ ಕೊಟ್ಟು ಕೊಡುಗೆಗಳು ಅನನ್ಯ. ಆದ್ದರಿಂದ ಇನ್ನೂ ಈ ಪ್ರದೇಶವನ್ನು 'ಕಲ್ಯಾಣ ಕರ್ನಾಟಕ' ಎಂದು ಕರೆಯುವುದೇ ಸೂಕ್ತ.

ವ್ಯಾನಂದ, ಶಾಂತರಸ, ಇಟಗಿ ರಾಘವೇಂದ್ರ, ದೇವೇಂದ್ರಕುಮಾರ ಹಕಾರಿ, ಜಯತೀರ್ಥ ರಾಜಪುರೋಹಿತ, ಚಂದ್ರಕಾಂತ ಕುಸನೂರ, ಚತುರ್ಭಾಷಾ ಡಾ.ಕೆ. ಮುದ್ದಣ್ಣ ಶಿವಲಿಂಕ, ಕಲಾನಂದ ಗೂಗಲ್, ಚನ್ನಬಸವಪ್ಪ ಬೆಟ್ಟದೂರು (ಅಮರಾನಂದ), ಪಂಚಾಕ್ಷರಿ ಹಿರೇಮಠ, ವಸಂತ ಕುಷ್ಟಗಿ, ಡಾ. ಮಂದಾಕಿನಿ ಸಾಹಿತ್ಯ ಸೇವೆಗೈದಿದ್ದಾರೆ.

ಕುವೆಂಪು, ಬೇಂದ್ರೆ, ಪು.ತಿ.ನ.ರ ಸಾಲಿನಲ್ಲಿ ಸೇರಬೇಕಾದ ಭಾವಗೀತಕಾರರಲ್ಲಿ ಕಾವ್ಯಾನಂದರನ್ನು ಅಲಕ್ಷಿಸಲಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದಿರುವ ಸಮಾನದ ಕಾವ್ಯದಲ್ಲಿ ಅವರ ಭಾವಗೀತೆಗಳಿಲ್ಲ. ಆದರೆ ಅವರ ವಚನಗಳಿವೆ. ಪ್ರಕೃತಿ ಪ್ರೇಮದಿಂದ ಹಿಡಿದು ವೈಚಾರಿಕತೆಯವರೆಗಿನ ಕಾವ್ಯ ರಚಿಸಿದ್ದಾರೆ.

ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ದಲಿತಗೋಷ್ಠಿಯಿಡಬೇಕೆಂದು ಆಗ್ರಹಿಸಿದ ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಬೋಳಬಂಡೆಪ್ಪ ಮುಂತಾದವರು ದಲಿತ-ಬಂಡಾಯದ ಹೊಸ ತಿರುವಿಗೆ ಕಾರಣರಾದರು.

ಗೋಕಾಕ್ ಚಳವಳಿ, ಕುದುರೆಮೋತಿ ಹೋರಾಟ, ಪದಕಿನಾಳ, ಅಹಮದ್‌ನಗರ ಭೂಹೋರಾಟ, ಹೊಸ ಜಿಲ್ಲೆಗಳ ರಚನೆಗಾಗಿ ಹೋರಾಟ, ಹಂಪಿ ವಿ.ವಿ. ಉಳಿಸಿ ಹೋರಾಟ, ತುಂಗಭದ್ರಾ ಉಳಿಸಿ ಹೋರಾಟ ಇತ್ತೀಚಿನ 371 ನೇ ಕಲಮಿನ ತಿದ್ದುಪಡಿಗಾಗಿ ನಡೆಸಿದ ದೀರ್ಘ ಹೋರಾಟ ಮುಂತಾದವು ಇಲ್ಲಿಯ ಪ್ರಮುಖ ಹೋರಾಟಗಳಾಗಿವೆ.


ಸಿದ್ದಯ್ಯ ಪುರಾಣಿಕರ (ಕಾವ್ಯಾನಂದ), ಶಾಂತರಸರ ಪೀಳಿಗೆಯ ನಂತರ ಶೈಲಜಾ ಉಡಚಣ, ಶಿವಶರಣ ಜಾವಳಿ ಪಾಟೀಲ, ವೀರೇಂದ್ರ ಸಿಂಪಿ, ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಡಾ. ರಾಜಶೇಖರ ನೀರಮಾನ್ವಿ, ಮಲ್ಲಿಕಾರ್ಜುನ ಹಿರೇಮಠ, ಗವಿಸಿದ್ಧ ಎನ್. ಬಳ್ಳಾರಿ, ಅಲ್ಲಮಪ್ರಭು ಬೆಟ್ಟದೂರು, ವಿಠ್ಠಪ್ಪ ಗೋರಂಟ್ಲಿ, ಡಾ. ವಿ. ಬ್ಯಾಳಿ, ಎಚ್.ಎಸ್. ಪಾಟೀಲ, ಡಾ. ಕಾಶೀನಾಥ ಅಂಬಲಗೆ, ಗೀತಾ ನಾಗಭೂಷಣ, ಆರ್.ಕೆ. ಹುಡಗಿ, ಸ್ವಸ್ತಿ ಚಿಮ್ಮಲಗಿ, ಅಮರೇಶ ನುಗಡೋಣಿ, ಸುಧಾ ಜನಗುಂಟಿಕರ, ಡಾ. ಬಸವರಾಜ ಸಬರದ, ಡಾ. ಎಸ್.ಎಂ. ಹಿರೇಮಠ, ವೀರಣ್ಣ ದಂಡೆ, ಪ್ರಭು ಖಾನಾಪುರೆ, ಕುಂ. ವೀರಭದ್ರಪ್ಪ ಗುರುಮೂರ್ತಿ ಪೆಂಡಕೂರ, ಕೆ. ವಿರುಪಾಕ್ಷ ಪ್ಪ, ಸ್ವಾಮಿರಾವ ಕುಲಕರ್ಣಿ ಡಾ. ಬಸವಪ್ರಭು ಪಾಟೀಲ ಮುಂತಾದ ಬರಹಗಾರರ ದೊಡ್ಡ ಪಡೆಯೇ ಇದೆ.

ಇತ್ತೀಚಿನ ಆರಿಫ್ ರಾಜಾ, ವಿಕ್ರಮ ವಿಸಾಜಿ, ಶಿವಾನಂದ ಸಾಲಿ, ಶಿವರಾಜ ಬೆಟ್ಟದೂರು, ಬಿ. ಪೀರ್‌ಭಾಷಾ, ಅಲ್ಲಾಗಿರಿ ರಾಜ, ಸಿರಾಜ ಬಿಸರಳ್ಳಿ, ಮಹೇಶ್ ಬಳ್ಳಾರಿ, ಅರುಣಾ ನರೇಂದ್ರ, ಶಾಂತಾದೇವಿ ಹಿರೇಮಠ, ವಿಜಯಲಕ್ಷ್ಮಿ ಕೊಟಗಿ, ಜಾಜಿ ದೇವೇಂದ್ರಪ್ಪ ರಮೇಶ ಗಬ್ಬೂರ, ಶರಣಪ್ಪ ಮೆಟ್ರಿ, ಶರಣಬಸಪ್ಪ ಕೋಲ್ಕಾರ, ಜಿ. ಪವನ ಕುಮಾರ, ವೀರಹನುಮಾನ ಮುಂತಾದವರು ಉತ್ಸಾಹದಿಂದ ಬರೆಯುತ್ತಿದ್ದಾರೆ.

ಇತ್ತೀಚಿನ ದಶಕಗಳಲ್ಲಿ ಪ್ರಜಾವಾಣಿಯ ದೀಪಾವಳಿ ಕಥಾಸ್ಪರ್ಧೆಯಲ್ಲಿ ಸತತವಾಗಿ ಇಲ್ಲಿಯ ಕತೆಗಾರರು ಬಹುಮಾನ ಪಡೆಯುತ್ತಿದ್ದಾರೆ. ಡಾ. ರಾಜಶೇಖರ ನೀರಮಾನ್ವಿ, ಅಮರೇಶ ನುಗಡೋಣಿ, ರಾಜಶೇಖರ ಹತಗುಂದಿ, ಕೆ. ನೀಲಾ, ಮಹಾಂತೇಶ ನವಲಕಲ್, ಲೋಗಣನಾಥ ಗುಡದೂರ, ಚಿತ್ರಶೇಖರ ಕಂಠಿ, ಶಂಕರಯ್ಯ ಘಂಟಿ ಮುಂತಾದವರು ಕಥೆಗಳಿಗಾಗಿ ಬಹುಮಾನ ಪಡೆದಿದ್ದಾರೆ. ಇವೆಲ್ಲ ಕಳಶವಿಟ್ಟಂತೆ ಗೀತಾ ನಾಗಭೂಷಣ, ಕುಂ. ವೀರಭದ್ರಪ್ಪ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ. ಅನುವಾದಕ್ಕಾಗಿ ಡಾ. ಪಂಚಾಕ್ಷರಿ ಹಿರೇಮಠ, ಡಾ. ಕಾಶೀನಾಥ ಅಂಬಲಗಿ, ಚಂದ್ರಕಾಂತ ಕುಸನೂರ, ಬಾಲಚಂದ್ರಜಯ ಶೆಟ್ಟಿ ಪ್ರಶಸ್ತಿ ಪಡೆದಿದ್ದಾರೆ.

ತೊಗರಿ, ಭತ್ತದ ಕಣಜವಾದ ಈ ನಾಡು ಹತ್ತಿ ಗೂ ಬಿಳಿಜೋಳಕ್ಕಾಗಿಯೂ ಪ್ರಸಿದ್ಧವಾಗಿದೆ. ಇತ್ತೀಚಿಗೆ ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಕೊಪ್ಪಳ, ಜಿಲ್ಲೆಗಳಲ್ಲಿ ತೋಟಗಾರಿಕೆ ವಿಸ್ತಾರಗೊಂಡಿದೆ.

ಸಂವಿಧಾನದ 371ನೇ ಕಲಮಿನ ಜಾರಿಯವರೆಗೆ ನಾವು ಹೈದ್ರಾಬಾದ್ ಕರ್ನಾಟಕದವರೆಂದು ಗುರುತಿಸಿಕೊಳ್ಳುವುದು ಅನಿವಾರ್ಯವಾಗಿತ್ತು ಇನ್ನು ಮುಂದೆ ಜನರ ಅಭಿಲಾಷೆಯಂತೆ ಇದನ್ನು ಕಲ್ಯಾಣ ಕರ್ನಾಟಕವೆಂದು ಕರೆಯಬೇಕು.




ಅಲ್ಲಮಪ್ರಭು ಬೆಟ್ಟದೂರು — ಎಚ್.ಎಸ್. ಪಾಟೀಲ ಕೊಪ್ಪಳ

ಆಟಕ್ಕುಂಟು ಲೆಕ್ಕಕ್ಕಿಲ್ಲ


ಹೈದರಾಬಾದ್ ಕರ್ನಾಟಕ ವಿಶೇಷಾಂಕ

ಆಗ ದೆಹಲಿಯಲ್ಲಿದ್ದೆ. ಲಾಜಪತ್‌ನಗರ ಏರಿಯಾದ ದಯಾನಂದ್ ಕಾಲನಿಯಲ್ಲಿದ್ದ ಉದ್ಯಾನದ ಕಡೆ ಹೊರಟಿದ್ದೆ. "ಎಪ್ಪಾ ಒಂದ್ರುಪ್ಯಾ ಕೊಡರಿ ತಂದೆ, ಎಲ್ಡು ದಿವಸಾತು ಉಂಡಿಲ್ಲ" ಹೆಣ್ಣಿನ ಧ್ವನಿ. ಅದೋ ಉತ್ತರ ಕರ್ನಾಟಕದ ಜವಾರಿ ಕನ್ನಡ. ಕೇಳಿಸಿಕೊಂಡ ನಾನು ರೋಮಾಂಚನಗೊಂಡೆ. ಕತ್ತೊರಳಿಸಿ ನೋಡಿದೆ: ಕೆದರಿದ್ದ ತಲೆ, ಸುಕ್ಕುಗಟ್ಟಿರುವ ಮುಖ, ಅಲ್ಲಲ್ಲಿ ಹರಿದಿದ್ದ ಇಲಕಲ್ ಸೀರೆ ರವಿಕೆ ಧರಿಸಿದ್ದಳು. ಕುಕ್ಕುರುಗಾಲಲ್ಲಿ ಕೂತಿದ್ದ ಆಕೆ ನಿಸ್ಸಂದೇಹವಾಗಿ ಉತ್ತರ ಕರ್ನಾಟಕ ಅದರಲ್ಲೂ ಹೈದರಾಬಾದ್ ಕರ್ನಾಟಕದ ಯಾವುದೋ ಹಳ್ಳಿಯ ಹೆಂಗಸು. ಒಣಗಿರುವ ಜಾಲಿಮರದಂತಿದ್ದಳು. ಅಗತ್ಯಕ್ಕಿಂತ ಹೆಚ್ಚು ವಯಸ್ಸಾದವಳಂತೆ ಗೋಚರಿಸಿದಳು. ನನ್ನ ತಾಯಿಯಂತೆ.

ಶೇಷ ಕರ್ನಾಟಕ ಒಂದು ತೂಕವಾದರೆ ಆರೂ ಜಿಲ್ಲೆಗಳನ್ನೊಳಗೊಂಡಿರುವ ಹೈದರಾಬಾದ್ ಕರ್ನಾಟಕವೇ ಇನ್ನೊಂದು ತೂಕ. ಹ್ಞಾಂ! ವಿಶ್ವನಾಥ ರೆಡ್ಡಿ ಮುದ್ನಾಳ್, ವೈಜನಾಥ ಪಾಟೀಲ, ರಾಘವೇಂದ್ರ ಕುಷ್ಟಗಿಯರಂಥ ಹಿರಿಯರ ಮುಖಂಡತ್ವದಲ್ಲಿ ಸುದೀರ್ಘ ಅರವತ್ತು ವರ್ಷಗಳ ಕಾಲ ಹೋರಾಟ ನಡೆದು ಅಂತೂ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ವಾತ್ಸಲ್ಯದಿಂದಾಗಿ 371 (ಜೆ) ಕಲಂ ಸೌಲಭ್ಯ ದೊರಕಿದೆ. ಇಲ್ಲಿನ ಶೋಷಿತ ಜನಾನಿಕ ನೆಮ್ಮದಿಯ ಉಸಿರುಬಿಟ್ಟಿದೆ, ಆದ್ದರಿಂದ 'ಕಲ್ಯಾಣ ಕರ್ನಾಟಕ' ಎಂದು ಪುನರ್ ನಾಮಕರಣ ಮಾಡುವುದು ಎಲ್ಲಾ ರೀತಿಯಿಂದ ಸೂಕ್ತ. ಹನ್ನೆರಡನೇ ಶತಮಾನದಲ್ಲಿಯೇ ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಟ ನಡೆಸಿದ ಬಸವಣ್ಣ ನೇತೃತ್ವದ ಶರಣ ಸಮುದಾಯವಿದ್ದದ್ದು ನಾಡಿನ ಶಿಖರ ಬೀದರ್ ಪ್ರದೇಶದಲ್ಲಿ. ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದ ಹತ್ತಾರು ದಾಸವರೇಣ್ಯರು ಕವಿಗಳು ಕಲಾವಿದರೊಂದೇ ಅಲ್ಲದೆ ಕನ್ನಡ ಸಾಹಿತ್ಯಕ್ಕೆ ತಮ್ಮ ಕವಿರಾಜಮಾರ್ಗ ಎಂಬ ವಿಶಿಷ್ಟ ಲಾಕ್ಷಣಿಕ ಗ್ರಂಥ ರಚಿಸಿದ, ಗೋದಾವರಿ ನರ್ಮದಾ ತೀರದವರೆಗೆ ನಾಡನ್ನು ವಿಸ್ತರಿಸಿದ ರಾಷ್ಟ್ರಕೂಟರು ಆಳಿದ ಪ್ರದೇಶ ಇದು. ಮೌಖಿಕ ಅವಸ್ಥೆಯಲ್ಲಿದ್ದ ಭಾಷೆಗೆ ಲಿಪಿ ಸೌಕರ್ಯ ಕಲ್ಪಿಸಿದ ಅಶೋಕನಿಗೂ ಪರಿಚಯವಿದ್ದ ಪ್ರದೇಶವಿದು. ಅವನು ಲಿಪಿ ಪ್ರಪಂಚಕ್ಕೆ ಪರಿಚಯಿಸಿದ ಲಿಪಿಕಾರ ಚಪಡ ಗಾಂಧಾರ (ಅಫ್ಘಾನಿಸ್ತಾನ) ದೇಶದವನು. ಅಶೋಕ ಅವನನ್ನು ದಕ್ಷಿಣ ಭಾರತಕ್ಕೆ ಕಳಿಸಿದ, ಚಪಡ ಲಿಖಿಸಿರುವ ಪ್ರಾಕೃತ ಬ್ರಾಹ್ಮಿ ಭಾಷೆಯ ಅತಿಹೆಚ್ಚು ಶಾಸನಗಳಿರುವುದು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಹಲವು ಕಡೆ.

ಕಳೆದ ಸಹಸ್ರಮಾನದ ಮಧ್ಯಯುಗದಲ್ಲಿ ಸಂಭವಿಸಿದ ಹತ್ತಾರು ಕಾಳಗಗಳು ಈ ಪ್ರದೇಶದ ಸಾಮಾಜಿಕ ಸೌಂದರ್ಯವನ್ನು ವಿರೂಪಗೊಳಿಸಿದವು. ಬಹಮನಿ ಸುಲ್ತಾನರಿಗಾಗಲೀ, ವಿಜಯನಗರದ ಅರಸು ಮನೆತನಗಳಿಗಾಗಲೀ ಪ್ರಜಾನಿಕದ ಕಲ್ಯಾಣ ಮುಖ್ಯವಾಗಿರಲಿಲ್ಲ, ತುಂಗಭದ್ರ ಮತ್ತು ಕೃಷ್ಣಾ ನದಿಗಳ ನಡುವೆ ಇರುವ ಫಲವತ್ತಾದ ಪ್ರದೇಶ ಉತ್ಕೃಷ್ಟ ಹತ್ತಿಬೆಳೆ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದೆ. ರಾಜ್ಯವನ್ನಾಳಿದ ಎಲ್ಲಾ ಅರಸರು ಆ ಪ್ರದೇಶವನ್ನು ವಶಪಡಿಸಿಕೊಳ್ಳಲು ಯುದ್ಧಗಳನ್ನು ಮಾಡಿದರು, ಪ್ರಜೆಗಳ ಮಾರಣಹೋಮ ನಡೆಸಿದರು. ಹತ್ತಿಯನ್ನು ಅರಬ್ ರಾಷ್ಟ್ರಗಳಿಗೆ ರಫ್ತು ಮಾಡುವುದು ಅಲ್ಲಿಂದ ಬಲಿಷ್ಟ ಕುದುರೆ ಮತ್ತಿತರ ಯುದ್ಧೋಪಕರಣಗಳನ್ನು ಆಮದು ಮಾಡಿಕೊಳ್ಳುವುದು ಎಲ್ಲಾ ಯುದ್ಧಗಳ ಉದ್ದೇಶವಾಗಿತ್ತು, ಆ ಹಲ್ಲೆಗಳ ಅವಶೇಷಗಳಿಂದ ಈ ಪ್ರದೇಶ ಕಿಕ್ಕಿರಿದಿದೆ, ಯುದ್ಧದಿಂದಾದ ಸಹಸ್ರಾರು ಗಾಯಗಳು ಇಲ್ಲಿನ ಇತಿಹಾಸದ ಮೈತುಂಬ ವಾಸಿಯಾಗದ ವ್ರಣಗಳಾಗಿವೆ. ಇನ್ನೇನು ಸ್ವಾತಂತ್ರ್ಯ ಲಭಿಸಿಯೇಬಿಟ್ಟಿತೆನ್ನುವಷ್ಟರಲ್ಲಿ ಹೈದರಾಬಾದ್ ಆಳುತ್ತಿದ್ದ ನಿಜಾಮ ಇಲ್ಲಿನ ಕನಸುಗಳನ್ನು ಅಪಹರಿಸಿದ, ದೆಹಲಿಯ ಆಜ್ಞೆಯನ್ನು ಧಿಕ್ಕರಿಸಿದ್ದೂ ಅಲ್ಲದೆ ರಾಕ್ಷಸ ಸದೃಶ ರಜಕಾರರನ್ನು ಈ ಪ್ರದೇಶದ ಮೇಲೆ ಛೂಬಿಟ್ಟ. ಅವನ ಮೃಗೀಯ ಆಕ್ರಮಣದ ವಿರುಧ ಭಾಲ್ಕಿ ಧಾರ್ಮಿಕ ಸಂಸ್ಥಾನಗಳೂ ಸೇರಿದಂತೆ ಅನೇಕರು ಹೋರಾಡಿ ಹಿಮ್ಮೆಟ್ಟಿಸಿದರು. ಶೇಷ ಕರ್ನಾಟಕ ಸ್ವಾತಂತ್ರ್ಯಗೊಂಡ ಬಳಿಕ ಹೈದರಾಬಾದ್ ಕರ್ನಾಟಕಕ್ಕೆ ಎರಡನೇ ಸಲ ಸ್ವಾತಂತ್ರ್ಯ ಲಭಿಸಿತು.

ಈ ಆರೂ ಜಿಲ್ಲೆಗಳು ಸ್ವಾತಂತ್ರ್ಯೋತ್ತರವಾಗಿ ಚುನಾಯಿತ ಪ್ರತಿನಿಧಿಗಳಿಂದಲೂ ಶಕ್ತಿಕೇಂದ್ರವೆನಿಸಿರುವ ರಾಜಧಾನಿ ಬೆಂಗಳೂರಿನಿಂದಲೂ ನಿರ್ಲಕ್ಷ್ಯಕ್ಕೀಡಾಗುತ್ತಲೇ ಮುಂದುವರೆದಿವೆ. ಇಲ್ಲಿನ ಜನಸಮುದಾಯದ, ಜನಪ್ರತಿನಿಧಿಗಳ ನ್ಯಾಯಸಮ್ಮತ ಬೇಡಿಕೆಗಳಿಗೆ ಅಧಿಕಾರಾರೂಢ ಶಕ್ತಿಗಳಿಂದ ಕವಡೆ ಕಿಮ್ಮತ್ತು ಸಿಗಲಿಲ್ಲ, ಹೀಗಾಗಿ ಈ ಪ್ರದೇಶದ ಆರೂ ಜಿಲ್ಲೆಗಳು ಶೇಷ ಕರ್ನಾಟಕದ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಪುನರ್ವಸತಿ ಮತ್ತು ಗಂಜಿಕೇಂದ್ರವಾದವು. ಇಲ್ಲಿನ ಶೈಕ್ಷಣಿಕ ಸಂಸ್ಥೆಗಳು, ಕಂದಾಯ ಇಲಾಖೆಗಳು ಸೇರಿದಂತೆ ಸರ್ಕಾರಿ ಇಲಾಖೆಗಳಲ್ಲಿ ಸ್ಥಳೀಯರನ್ನು ನಿರ್ಲಕ್ಷಿಸಲಾಯಿತು. ನಿರಂತರ ವಲಸೆಯಿಂದ ಇಲ್ಲಿನ ಹಳ್ಳಿಗಳು ಭಣಗುಟ್ಟಲಾರಂಭಿಸಿದವು. ಇಲ್ಲಿನ ಜಲಸಂಪನ್ಮೂಲಗಳನ್ನು ಅಲಕ್ಷಿಸಿದ ಪರಿಣಾಮದಿಂದಾಗಿ



ಕುಡಿಯುವ ನೀರಿನ ಅಭಾವ ಕಾಣಿಸಿಕೊಂಡಿತು. ಇಲ್ಲಿನ ಗ್ರಾನೈಟ್ ಸ್ಥಾವರಗಳನ್ನು ಹೊರಗಿನವರು ಆಕ್ರಮಿಸಿಕೊಂಡು ಲೂಟಿ ಮಾಡಲಾರಂಭಿಸಿದರು. ಅಧಿಕಾರಿಗಳ, ರಾಜಕಾರಣಿಗಳ ದಿವ್ಯನಿರ್ಲಕ್ಷ್ಯದಿಂದಾಗಿ ಬಡತನ ಮತ್ತು ನಿರಕ್ಷರತೆ ತಾಂಡವವಾಡುತ್ತಿರುವುದಲ್ಲದೆ ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ ಕೃಷಿ, ಕೈಗಾರಿಕೆ ಇಂಥ ಹಲವು ಕ್ಷೇತ್ರಗಳ ಅಭಿವೃದ್ಧಿ ಶೂನ್ಯ. ಹೀಗಾಗಿ ಸಾಮಾಜಿಕ, ಆರ್ಥಿಕ ಅಸಮಾನತೆ, ಶೋಷಣೆ, ಅನಕ್ಷರತೆ, ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಯಿಂದ ವಂಚನೆಗೆ ಒಳಗಾದ ಪ್ರದೇಶವಿದು. ಇಂಥ ಹಲವು ಕಾರಣಗಳಿಂದಾಗಿ ಬಡವರು ಮತ್ತು ಶ್ರೀಮಂತರ ನಡುವೆ ಕಂದಕ ಏರ್ಪಟ್ಟಿತು. ಡಾ.ಡಿ.ಎಂ.ನಂಜುಂಡಪ್ಪ ವರದಿಯ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ಇಪ್ಪತ್ತೊಂದು. ನಂತರದ ವರ್ಷಗಳಲ್ಲಿ ಧರ್ಮಸಿಂಗ್ ಅಧ್ಯಕ್ಷತೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಲಾಯಿತು. ಆದರೂ ಈ ಭಾಗದ ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿದಿದೆ. ಈ ಮರೀಚಿಕೆಗಳು ಸೃಷ್ಟಿಸಿದ ಅವಘಡಗಳಿಗೆ ಸಂಬಂಧಿಸಿದಂತೆ ಎರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಅವೆಂದರೆ:

ಎಂಭತ್ತೊಂದರಲ್ಲಿ ನಡೆದ ಘಟನೆ. ದೆಹಲಿಯಲ್ಲಿದ್ದೆ. ಲಾಜಪತ್‌ನಗರ ಏರಿಯಾದ ದಯಾನಂದ್ ಕಾಲನಿಯಲ್ಲಿದ್ದ ಉದ್ಯಾನದ ಕಡೆ ಹೊರಟಿದ್ದೆ. "ಎಪ್ಪಾ ಒಂದ್ರುಪ್ಯಾ ಕೊಡರಿ ತಂದೆ, ಎಲ್ಡು ದಿವಸಾತು ಉಂಡಿಲ್ಲ" ಹೆಣ್ಣಿನ ಧ್ವನಿ. ಅದೋ ಉತ್ತರ ಕರ್ನಾಟಕದ ಜವಾರಿ ಕನ್ನಡ. ಕೇಳಿಸಿಕೊಂಡ ನಾನು ರೋಮಾಂಚನಗೊಂಡೆ. ಕತ್ತೊರಳಿಸಿ ನೋಡಿದೆ: ಕೆದರಿದ್ದ ತಲೆ, ಸುಕ್ಕುಗಟ್ಟಿರುವ ಮುಖ, ಅಲ್ಲಲ್ಲಿ ಹರಿದಿದ್ದ ಇಲಕಲ್ ಸೀರೆ ರವಿಕೆ ಧರಿಸಿದ್ದಳು. ಕುಕ್ಕುರುಗಾಲಲ್ಲಿ ಕೂತಿದ್ದ ಆಕೆ ನಿಸ್ಸಂದೇಹವಾಗಿ ಉತ್ತರ ಕರ್ನಾಟಕ ಅದರಲ್ಲೂ ಹೈದರಾಬಾದ್ ಕರ್ನಾಟಕದ ಯಾವುದೋ ಹಳ್ಳಿಯ ಹೆಂಗಸು. ಒಣಗಿರುವ ಜಾಲಿಮರದಂತಿದ್ದಳು. ಅಗತ್ಯಕ್ಕಿಂತ ಹೆಚ್ಚು ವಯಸ್ಸಾದವಳಂತೆ ಗೋಚರಿಸಿದಳು. ನನ್ನ ತಾಯಿಯಂತೆ. ಒಂದೆರಡು ನಾಣ್ಯಗಳನ್ನು ಅರಳಿದ್ದ ಬೊಗಸೆಗೆ ಹಾಕಿದಾದ ಬಳಿಕ "ಎವ್ವಾ ಯಾವೂರಭೆ" ಎಂದು ಕೇಳಿದೆ. ನನ್ನನ್ನೂ ಅಪಾದಮಸ್ತಕ ದಿಟ್ಟಿಸಿ ಸಂತೋಷ ಮತ್ತು ವಿಸ್ಮಯದಿಂದ ನೋಡಿ "ಕನ್ನಡ ಮಾತಾಡ್ತೀಯಲ್ಲ ನಿಂದ್ಯಾವೂರು ನನ್ನಪ್ಪಾ" ಎಂದು ಕೇಳಿದಳು.


ಪರಸ್ಪರ ಕಷ್ಟಸುಖ ಹೇಳಿಕೊಳ್ಳುವುದು ಬೇಕಿತ್ತು. ಪಕ್ಕದಲ್ಲಿದ್ದ ಬೆಂಚ್ ಮೇಲೆ ಕೂತೆ. "ಅದಿರ್ಲಿ ನಿಂದ್ಯಾವೂರವ್ವಾ" ಎಂದು ಕೇಳಿದ್ದೇ ತಡ ತನ್ನ ದುರಂತ ಕಥೆಯನ್ನು "ಈ ಬೂಮಿ ಮ್ಯಾಲ ನಮ್ಮಂಥ ಬಡವು ಬದುಕಿರಬಾರ್ದು ತಂದೆ" ಎಂಬ ಪಲ್ಲವಿಯೊಂದಿಗೆ ಆರಂಭಿಸಿದಳು. ಆಕೆ ಬಸಣ್ಣೆವ್ವ ಎಂಬ ವಿಧವೆ. ಊರು ಕುಷ್ಟಗಿ ಸಮೀಪದ ದೋಟಿಹಾಳು. ಆಕೆ ಭೂಹೀನಳಲ್ಲ, ಇರುವ ಎರಡೂವರೆ ಜಮೀನು ಅನಾವೃಷ್ಟಿ ಕಾರಣದಿಂದಾಗಿ ಬೀಳು. ಆಕೆ ಬಂಜೆಯಲ್ಲ, ನಾಲ್ಕಾರು ಮಕ್ಕಳು ಇರುವುದು ಎಷ್ಟು ನಿಜವೋ, ಅವು ನಾಡಿನಾದ್ಯಂತ ದಿಕ್ಪಾಪಾಲಾಗಿರುವುದು ಅಷ್ಟೇ ನಿಜ. ಮಾನವ ಕಳ್ಳಸಾಗಾಣಿಕೆದಾರನ ಹುಸಿಭರವಸೆಗಳನ್ನು ನಂಬಿದ ನೂರಾರು ಮಂದಿ ಕಟ್ಟಡಕಾರ್ಮಿಕರ ಪೈಕಿ ತಾನೂ ಓರ್ವಳು. ದುಷ್ಟ ಅಂಥ ನೂರಾರು ಅಸಹಾಯಕರನ್ನು ನಿರ್ಗತಿಕರನ್ನು ರೈಲಿನಲ್ಲಿ ದೆಹಲಿಗೆ ಕರೆತಂದು ಲಾಜಪತ್‌ನಗರದ ರಿಂಗ್‌ರೋಡ್‌ನಲ್ಲಿ ಬಹುಮಹಡಿ ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಸರಬರಾಜು ಮಾಡಿ ತನ್ನ ಕಮಿಷನ್ ಗಿಟ್ಟಿಸಿಕೊಂಡು ಕಣ್ಮರೆಯಾದ. ಒಂದೆರಡು ತಿಂಗಳುಗಳ ಕಾಲ ಅಸನವಸನಕ್ಕೆ ತತ್ವಾರ ಇರಲಿಲ್ಲ, ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಹೈದರಾಬಾದ್ ಕರ್ನಾಟಕ ಪ್ರದೇಶದ ಕೆಲವು ಗ್ರಾಮಗಳಿಂದ ಬಂದಿದ್ದ ಬಹುಪಾಲು ಮಂದಿ ದೆಹಲಿಯಲ್ಲಿ ಅನಾಥರಾದರು. ಅವರಲ್ಲಿ ಬಸವಣ್ಣೆವ್ವ ಸಹ ಒಬ್ಬಳು. ನನ್ನ ನಮ್ಮೂರಿಗೆ ಮುಟ್ಟಿಸಿದ್ರೆ ಪುಣ್ಯ ಬರ್ತದೆ ಎಂದು ಕೇಳಿಕೊಂಡಳು. ಪ್ರಯತ್ನಿಸಿದರೂ ಅದು ನನ್ನಿಂದ ಸಾಧ್ಯವಾಗಲಿಲ್ಲ.

ತೀರಾ ಮೊನ್ನೆಮೊನ್ನೆ ನಡೆದ ಘಟನೆ. ಕೆಂಪುಬಸ್ಸಿನಲ್ಲಿ ಹೊಸಪೇಟೆಯಿಂದ ಲಿಂಗಸ್ಗೂರಿಗೆ ಹೊರಟಿದ್ದೆ. ಬಸ್ಸಿನ ತುಂಬ ಅಸ್ಥಿಪಂಜರವನ್ನು ಹೋಲುತ್ತಿದ್ದ ಸಹಪ್ರಯಾಣಿಕರು. ನಾವಿದ್ದ ಹಿಂದಿನ ಸೀಟಿನಲ್ಲಿ ವೃದ್ಧೆ, ಅಕಾಲಿಕ ವೃದ್ಧಾಪ್ಯಕ್ಕೆ ತುತ್ತಾಗಿದ್ದ ತರುಣ, ತನ್ನ ಹೆಂಡತಿ ಇಬ್ಬರು ಮಕ್ಕಳೊಂದಿಗೆ ಕೂತಿದ್ದ, ಅವರು ಯಾರೂ ಕೆಲವು ದಿವಸಗಳಿಂದ ನೀರಿನ ಮುಖ ಕಂಡಿರಲಿಲ್ಲ, ಅವರ ದೇಹದ ಪರಿಮಳ ಬಸ್ಸಿನ ತುಂಬ ಆವರಿಸಿತ್ತು, ರೌರವ ನರಕ ರಸ್ತೆಯ ರೂಪ ತಳೆದಿತ್ತು, ಇಕ್ಕೆಲದಲ್ಲಿ ಸ್ಮಶಾನ ಸದೃಶ ಬೀಳುಭೂಮಿ, ಸೆಖೆ ಧಗೆ, ನಲವತ್ತು ಕಿಮೀ ಕ್ರಮಿಸಲು ತೆಗೆದುಕೊಂಡ ಸಮಯ ಎರಡೂವರೆ ತಾಸು. ದಣಿವಾರಿಸಿಕೊಳ್ಳಲೆಂದು ಬಸ್ಸು ಮುದಗಲ್ ಸಮೀಪದ ಡಾಬಾದ ಬಳಿ ನಿಂತಿತು. ಊಟ ಮಾಡಲೆಂದು ಗೆಳೆಯರ ಸಂಗಡ ಇಳಿದೆ. ಹಿಂದಿನ ಸೀಟಿನಲ್ಲಿದ್ದ ಯುವಕ ಒಂದ ಮಾಡಿ ಬರುವುದಾಗಿ ಬಸ್ಸಿನಿಂದ ಇಳಿದವನೆ ಕಳ್ಳಹಾದಿ ಮೂಲಕ ಡಾಬಾ ಪ್ರವೇಶಿಸಿದ. ಪಾಪಪ್ರಜ್ಞೆ ಅಸಹಾಯಕತೆಯನ್ನು ಅನುಭವಿಸುತ್ತ ಆತ ಎರಡೇ ನಿಮಿಷದಲ್ಲಿ ಅನ್ನಪ್ರಾಶನ ಮುಗಿಸಿದ. ತನ್ನವರಿಗೆ ಕೇಳಿಸದಿರಲೆಂದು ಡೇಗುವ ಸಾಹಸ ಮಾಡಲಿಲ್ಲ, ಹಾರನ್ ಹಾಕುವ ಮೊದಲೇ ಹೋಗಿ ಬಸ್ಸಿನಲ್ಲಿ ವಿರಾಜಮಾನನಾದ. ಬಸ್ ಚಲಿಸಲಾರಂಭಿಸಿತು.

ವೃದ್ಧೆಯ ಘ್ರಾಣೇಂದ್ರಿಯದ ರಣಕಹಳೆ ಮೊಳಗಿತು. ಮಗನ ಉಸಿರ ಪರಿಮಳವನ್ನು ಆಘ್ರಾಣಿಸಿತು. ತನ್ನ ಮಗ ಕದ್ದು ಹೋಗಿ ಉಂಡು ಬಂದಿರುವನೆಂದು ಗ್ರಹಿಸದೆ ಇರಲಿಲ್ಲ, "ಉಂಡು ಬಂದಂಗದೀಯಲ್ಲ ಮಗನೆ" ಎಂದು ಆಕ್ರಂದನ ವ್ಯಕ್ತಪಡಿಸಿತು. "ದೇವ್ರಾಣ್ಯಾಗೂ ಉಂಡ್ ಬಂದಿಲ್ಲವ್ವಾ, ಹಂಗೋಗಿ ಒಂದಾ ಮಾಡಿ ಹಿಂಗಾ ಬಂದೆಭೆ" ಎಂದ. ಅದಕ್ಕೆ ಮುದುಕಿ "ಹೆತ್ತವ್ವಗೇ ಸುಳ್ ಹೇಳಿದ್ರ ದೇವ್ರು ಮೆಚ್ತಾನೇನಪ್ಪಾ, ಅನ್ನ ಸಾರಿನ ವಾಸಣೆ ಬರ್ತದಲ್ಲ ಇದು ಸುಳ್ಳೇನು! ನೀನ್ ಉಣ್ ಬ್ಯಾಡನ್ನಾಕಿಲ್ಲ, ಆದ್ರ ಕರ್ಕೊಂಡೋಗಿದ್ರ ನಾವೂನು ಒಂದೊಂದ್ ತುತ್ತು ಉಣ್ತಿರ್ಲಿಲ್ಲೇನಪ್ಪಾ. ನೀನ್ ಕಂಡಂಗೆ ನಾವ್ಯಾರಾದ್ರೂ ಒಂದಿವಸ್ದಿಂದ ಉಂಡಿಲ್ಲಂಬೋದು ನಿಂಗೇ ತಿಳಿದೈತಿ, ಹೆತ್ತಾಯಿ ಎಂಬ ಕನಿಕರ ಬ್ಯಾಡೇನು" ಎನ್ನುತ್ತ ನಿಟ್ಟುಸಿರು ಚೆಲ್ಲಿತು.

ಈ ಎರಡೂ ಘಟನೆಗಳ ನಡುವೆ ಮೂರೂವರೆ ದಶಕಗಳ ಅಂತರವಿದೆ. ಈ ಸುದೀರ್ಘಾವಧಿಯಲ್ಲಿ ಹತ್ತು ಹಲವಾರು ಯೋಜನೆಗಳನ್ನು ಪ್ರಕಟಿಸಲಾಗಿದೆ. ಆದರೂ ಈ ಪ್ರದೇಶದ ವಸ್ತುಸ್ಥಿತಿ ಮಾತ್ರ ಬದಲಾಗಿಲ್ಲ, ಸ್ವಾತಂತ್ರ್ಯ ಲಭಿಸಿದ ಆರು ದಶಕಗಳ ಬಳಿಕವೂ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶೇಕಡಾ 80ಕ್ಕೂ ಹೆಚ್ಚು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಶೇಕಡಾ 50ರಷ್ಟು ಅಸುರಕ್ಷಿತ ಹೆರಿಗೆಗಳು, ಶೇಕಡಾ 67ರಷ್ಟು ಮಕ್ಕಳಲ್ಲಿ ಅಪೌಷ್ಟಿಕತೆ, ಶೇಕಡಾ 44ರಷ್ಟು ಕುಟುಂಬಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವುದು ಶೋಚನೀಯ. 6-14 ವಯೋಮಿತಿಯ ಶೇಕಡಾ 21ರಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಬೆಂಗಳೂರು ಮೈಸೂರು ಪೂನಾ ಮುಂಬೈ ಗೋವಾ ಸೇರಿದಂತೆ ಹಲವು ಕಾರ್ಪೋರೇಟ್ ನಗರಗಳಲ್ಲಿರುವ ಕಟ್ಟಡ ಕಾರ್ಮಿಕರು, ಭಿಕ್ಷುಕರು, ವೇಶ್ಯಾವಾಟಿಕೆಗೆ ತಳ್ಳಲ್ಪಟ್ಟಿರುವವರು, ದುರಂತಗಳಿಗೆ ಬಲಿಯಾಗಿ ದುರ್ಮರಣವನ್ನಪ್ಪುತ್ತಿರುವವರಲ್ಲಿ ಬಹುಪಾಲು ಮಂದಿ ಈ ಪ್ರದೇಶದಿಂದ ವಲಸೆ ಹೋಗಿರುವಂಥವರೆ. ಹೀಗೆ ಸಮಸ್ಯೆಗಳನ್ನು ಪಟ್ಟಿ ಮಾಡಿದಲ್ಲಿ ಸಮಸ್ಯೆಗಳ ಸಂಖ್ಯೆ ನೂರರ ಸಂಖ್ಯೆಯನ್ನೂ ದಾಟುತ್ತದೆ.

ಕಲ್ಯಾಣ ಕರ್ನಾಟಕದ ಗುಲ್ಬರ್ಗಾದವರೇ ಆದ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸಚಿವರಾಗಿರದಿದ್ದಲ್ಲಿ 371 (ಜೆ) ಕಲಂ ಜಾರಿಯಾಗಲು ಇನ್ನೂ ಸಮಯ ತೆಗೆದುಕೊಳ್ಳುತ್ತಿತ್ತು, ಸಚಿವ ಎಚ್.ಕೆ. ಪಾಟೀಲ ಸಮಿತಿ ನೀಡಿರುವ ಶಿಫಾರಸುಗಳು ಆಶಾದಾಯಕವಾಗಿವೆ. ರಾಷ್ಟ್ರಪತಿಗಳ ಅಂಗೀಕಾರಮುದ್ರೆಯೊಂದಿಗೆ ಈ ಕಾಯಿದೆ ಜಾರಿಯಾಗಿರುವುದು ಶುಭಸೂಚನೆ. ಅಲ್ಲದೆ ರಾಜ್ಯಪಾಲರು ಅಧಿಸೂಚನೆಗಳಿಗೆ ಸಹಿ ಹಾಕಿದ್ದು ಗೆಜೆಟ್‌ನಲ್ಲೂ ಪ್ರಕಟವಾಗಿದೆ. ಆದ್ದರಿಂದ ಕಲ್ಯಾಣ ಕರ್ನಾಟಕ ಇನ್ನು ಮುಂದೆ ಸ್ವಾಭಿಮಾನದಿಂದ ಬದುಕು ಸಾಗಿಸಬಹುದು. ಕಾದು ನೋಡೋಣ.




• ಕುಂ.ವೀರಭದ್ರಪ್ಪ

ಹೈದರಾಬಾದ್ ಕರ್ನಾಟಕ ವಿಶೇಷಾಂಕ

ಹುಲಿ ಅಂದ್ರ ನಮ್ಮಂಥ ಮಂದಿಯಂಥ. ಒರಟು, ಸಿಟ್ಟು, ದುಡಿಯೋ ಶಕ್ತಿ, ಪ್ರಾಮಾಣಿಕತೆ, ನಿಷ್ಠೆ, ಸ್ವಾಭಿಮಾನ ಎಲ್ಲ ಒಳ್ಳೆ ಗುಣ ಇರೋ ಹೊಲೇರು ಇದ್ದಂಗ. ಹುಲಿ ಹಸ್ದುಕಾಸಿ ಎಂದನ ಹುಲ್ಲು ತಿಂದಿದ್ದು ಕೇಳಿರೇನು? ಇಲ್ಲಲ. ಹಂಗ ಹಸಿದವನ ಮುಂದ ಸತ್ಯ, ನಿಷ್ಠೆ, ಪ್ರಾಮಾಣಿಕತೆ ಅಂತ ಉಪದೇಶ ಮಾಡಿದ ಆಕಳ ಅದು ಹಾರವರು ಇದ್ದಂಗಂತ. ತನ್ನ ಚಾಣಾಕ್ಷತನದಿಂದನ ಹುಲಿಯಂಥ ಹುಲೀನ ಸಾಯ್ಸಿಬುಡ್ತೆಲ್ಲಪ ಹಸುವಿನಂಥ ಹಸು!

ಕಥೆ: ಧರಣಿ ಮಂಡಲ ಮಧ್ಯದ ಹೊರಗೆ



ಮೂರು ತಾಳ ಬುಟ್ಟಿ ನೆತ್ತಿ ಮ್ಯಾಲ ಇತ್ತು. ಹೊರಗ ಹೊರಸಿನ ಮ್ಯಾಲ ಮಲಗಿದ್ದ ಹರಳಯ್ಯಗ ನಿದ್ದಿ ಅಂಬದು ಬಂದಿರಲಿಲ್ಲ. ಆದೆಷ್ಟು ಸಲಿ ಕಣ್ಣು ಮುಚ್ಚಿದರೂ ನಿದ್ದಿ ಹುಳಿಯಲಿಲ್ಲ. ಎದ್ದು ಕೆಳಗ ನೋಡಿದ. ಈಚಲಚಾಪೆಯ ಮೇಲೆ ಮಡದಿ ಕಲ್ಯಾಣಮ್ಮ, ಮಗ ಶೀಲವಂತ ಮಲಗಿದ್ರು. ಬ್ಯಾಸಿಗಿ ಅಂತ ಗುಡಿಸಲಿಯ ಅಂಗಳಲ್ಲೇ ಹಾಸಿ ಮಲಗುವುದು ರೂಢಿಯಾಗಿತ್ತು. ಬಾಯಾರಿದಂತೆನಿಸಿತು. ನೀರಿಗಾಗಿ ಹುಡುಕಾಡಿದ. 'ಕಲ್ಯಾಣೆ...' ತುಟಿಯಾಚೆ ಹೊರಡಲಿದ್ದ ಶಬ್ದವನ್ನು ಹಾಗೆ ಅವುಡುಗಚ್ಚಿದ. ಮಕ್ಕಂಡು ಒಂದೆಲ್ಲು ತಾಸು ಆಗಿಲ್ಲ, ದಿನವಿಡೀ ಕಾಯಕದಲ್ಲೇ ಜೀವ ತೇಯಬೇಕು. ಪಾಪ ಮಕ್ಕಲ್ಲಿ ಬುಡು... ತನ್ನಷ್ಟಕ್ಕೆ ತಾನು ಅಂದುಕೊಂಡ. ದಕ್ಷಿಣ ದಿಕ್ಕಿನತ್ತ ಕಣ್ಣು ಹಾಯಿಸಿದ. ಎರಡು ಉಲ್ಕೆಗಳು ಫಳ್ ಅಂತ ಹೊಳೆದು ಜೋಡಿಯಾಗಿಯೇ ಉದುರಿದವು. ಹರಳಯ್ಯ ಎದ್ದುದನ್ನ ಕಂಡ ಚೆನ್ನ ಬಾಲ ಅಲ್ಲಾಡಿಸಿ, ಮುಂಗಾಲಿನಿಂದ ಮೋತಿ ತಿಕ್ಕಿಕೊಂಡ. ಮುದುರಿಕೊಂಡು ಮಲಗಿ, ಹರಳಯ್ಯನನ್ನೇ ದಿಟ್ಟಿಸಿ ನೋಡಿದ. 'ಇಷ್ಟೊತ್ತಿಗನ ಎದ್ದು ಎಲ್ಲಿಗೆ ಹೊಂಟಾನ ನಮ್ ಶರಣ. ಇನ್ನಾ ಬೆಳಕು ಹರಿಯಾಕ ಭಾಳ ಹೊತ್ತು ಬೇಕು. ಇಷ್ಟು ತಿಳಿಯಂಗಿಲ್ಲನು ಈತಗ' ಚೆನ್ನ ನೆಲಕ್ಕೆ ಮೋತಿ ತಿಕ್ಕಿ ಮುಂಗಾಲು ಹಿಂಗಾಲು ಮೇಲಕ್ಕೆತ್ತಿ ಆಸನವೊಂದನ್ನ ಹಾಕಿದ. ನೆಲಕ್ಕೆ ಬೆನ್ನು ಉಜ್ಜೆ ಕೀರಲು ದನಿಯಲ್ಲಿ 'ಕುಂಯ್...' ಅಂತ ಎರಡ್ಮೂರು ಸಲ ರಾಗ ತೆಗೆದ.

'ನಿನ್ನಿ ಸಂಜಿಕಿ ಕಾಯಕ ಮುಗಿಸಿ ಬರೊತ್ನಾಗ ಅವು ನನಗ ಕಾಣದ ಹೋಗಿದ್ರ ಚಲೋ ಇತ್ತು' ಹರಳಯ್ಯ ಮೈಯೆಲ್ಲ ಬೆವರಿ, ಕ್ಷಣ ನಡುಗಿದ. 'ಅದು ಸರಿಯಲ್ಲ, ನಾ ನನ್ನ ಮನಸ್ಸನ್ನ ಬದಲಿಸ್ತಿರೋದು ಸರಿಯಲ್ಲ' ಹೊರಸಿನ ಮುಂದ ಕಾಲಗಂಬದಂತೆ ನಿಂತು ಆಕಾಶದ ಚುಕ್ಕಿಗಳನ್ನೇ ಎಣಿಸುವ ಹಟದಂತೆ ದಿಟ್ಟಿಸಿದ. 'ನಾವೇನು ಬುದ್ಧನ ಕಾಲ್ದಾಗ ಅದೀವೇನು? ಎಲ್ರೂ ಸಮಾನಂತ ತಿಳಕಳ್ಳಾಕ. ಒಂದಾಗಿ ಬದುಕಾಕ? ಬುದ್ಧನ ನಂತ್ರ ಬಸವಣ್ಣ ಹುಟ್ಟಿ ಬಂದ. ಮುಂದನೂ ಇಂಥ ಮಹಾತ್ಮರು ಹುಟ್ಟಿ ಬರ್ತಾರ. ಇಡೀ ಸಮಾಜನ ಬದ್ಲಾಗೋದು ಕನಸಿನ ಮಾತುಬುಡು. ಶರಣ್ರು ಅಂತ ಕರೆಸಿಕೊಳ್ಳೋರ ಮನಸಿನ್ಯಾಗಷ್ಟ ನಾವೆಲ್ಲ ಒಂದು. ಆದ್ರ ಅರಸರ ಕಣ್ಣಾಗ, ಸಮಾಜದ ಉಳದ ಜನರ ಕಣ್ಣಾಗ ನಮ್ಮಂಥೋರು ಇನ್ನಾ ಕೀಳು ಕುಲದವರು! ಛೀ! ನನ್ನಂಥ ಶರಣ್ರಿಗೆ ಯಾವ ಕುಲ?' ನಾಲ್ಕಾರು ಹೆಜ್ಜೆ ಅಂಗಳದಲ್ಲಿ ನಡೆದ. ಚೆನ್ನ ದಿಗ್ಗನೆ ಎದ್ದು ಎರಡ್ಮೂರು ಸಲ ಉತ್ತರ-ದಕ್ಷಿಣಕ್ಕೂ, ಮೈಬಗ್ಗಿಸಿ ಪಟಾಪಟಾ ಜಾಡಿಸಿಕೊಂಡ. ನೆಲವನ್ನೇ ಮೂಸುತ್ತ ಹರಳಯ್ಯನ ಹಿಂಬಾಲಿಸಿದ. 'ನಾ ಕಾಲ್ಮಡಿಯಾಕಂತ ಹೋದ್ರೂ ನೀ ನನ್ನ ಜತಿ ಬರ್ಬಕು. ನನ್ನ ನೆಳ್ಳಿ ನೀ ಆಗಿನೋದು ಚೆನ್ನ' ಎದೆಯ ಮಟವಿದ್ದ ಗುಂಡಿನ ಮರೆಗೆ ತುದಿಗುಂಡಲೆ ಕುಂತು ಕಾಲ್ಮಡದು ಎದ್ದು ಮತ್ತೆ ಹೊರಸಿನ ಮ್ಯಾಲ ಅಡ್ಡಾದ. ಜಾಲಿಗಿಡದ ಬೊಡ್ಡೆಗೆ ಚೆನ್ನ ಕಾಲೆತ್ತಿ ಉಚ್ಚೆ ಹೊಯ್ದು ಮತ್ತೆ ಮೊದ್ಲು ಮಕ್ಕಂಡಿದ್ದ ಜಾಗದಾಗ ಬಂದು ಮಕ್ಕಂಡ.

'ಬಸ್ವಣ್ಣಪ್ಪನೋರು ನಮ್ಮಂಥವರ್‍ನ ತಮ್ಮಷ್ಟ ಸರಿಸಮಾನ ಅಂತ ತಿಳಿತಾರ. ಆದ್ರ ನಿನ್ನಿ ಯಾಕ ಅವ್ರು ನನ್ನನ್ನ ದೊಡ್ಡವ ಅಂತ ತಿಳಿಬಕು. ನಾ ಶರಣೆಂದು ಅಂದಿದ್ದಕ್ಕ, ಅವ್ರು 'ಶರಣು ಶರಣಾರ್ಥಿ ಹರಳಯ್ಯ' ಅಂತ ಹೇಳಿದ್ದು ಯಾಕ? ಇದೆಲ್ಲ ಕಲ್ಯಾಣಿ, ಶೀಲವಂತಗ ಜಲ್ದಿ ತಿಳಿಯೋ ವಿಷಯ ಅಲ್ಲ, ಬಸ್ವಣ್ಣಪ್ಪ ಹೊರಿಸಿದ ಭಾರಾನ ಹೆಂಗ ಇಳಿಸಿಕಬಕು ಅಂತ ಕೇಳಿದ್ರ ತಾಯಿ, ಮಗ ಕೋಡು ಮಾಡ್ತಾರ. 'ನಿನಗ ಬಸ್ವಣ್ಣಪ್ನೋರು ಶರಣು-ಶರಣಾರ್ಥಿ ಅಂದಿದ್ದು ಅವ್ರು ದೊಡ್ಡಗುಣ. ನಿನ್ನ ಮನಸಿಗಿ ಯಾಕ ಹಚ್ಕೊಂಡಿ. ಹೀಂಗ ಜಗ್ಗ ವಿಚಾರ ಮಾಡಿಕೆಂತ ಕುಂತ್ರ ಮಾಡೋ ಕಾಯಕ ಬುಟ್ಟುಕಾಸಿ ಹುಚ್ಚು ಹಿಡಿದೋರಗತೆ ಎಲ್ಲಿಬೇಕಲ್ಲಿ ತಿರುಗ್ತಿರೋದು' ಅಂತ ಕಲ್ಯಾಣೀನ ಕಡ್ಡಿ ಮುರ್ದಂಗ ಅಂತಾಳಂದ್ರ? ನಾ ಯಾರ್‍ತಲ್ಲಿ ಕೇಳ್ಬಕು? ಮಗ ಶೀಲವಂತ ಕರಾವಿದ. ನನ್ನ ಮನಸ್ಸನ್ನ ಒಂದೀಟು ಅರ್ಥಮಾಡಿಕೊಳ್ತಾನ. ಭಾವನೆಗಳನ್ನ ಚಿತ್ರಗಳಲ್ಲಿ ಮೂಡಿಸೋ ಆತಗ ನನ್ನ ಭಾವನೆಗಳು ಅರ್ಥ ಆಗ್ತಾವಂತ ಕೇಳಿದ್ರ್ಯ ಹೊರಸಿನ ಮ್ಯಾಲ ಮಕ್ಕಂಡಿದ್ದ ಹರಳಯ್ಯಗ ಮಗನ ಮಾತುಗಳು ಮನಸಿನ್ಯಾಗ ಎಲ್ಲಿಬೇಕಲ್ಲಿ ಕರಿಜಾಲಿ ಮುಳ್ಳು ಚುಚ್ಚಿದಂಗ ಅನಿಸಿದವ್ರ.

'ಇಲ್ಲಿ ಕೇಳಪ, ನಿನ್ನ ಕಥಿ ಕೇಳಿದ ಮ್ಯಾಲ ನನಗ ಧರಣಿ ಮಂಡಲದ ಹಾಡು ನೆಪ್ಪಾತಿ. ಧರಣಿ ಮಂಡಲದ ಮಧ್ಯದೊಳಗ ಕಾಳಿಂಗ ಅಂಬ ಗೊಲ್ಲ ಇದ್ನಂತ. ಒಂದು ಆಕಳ ಮೇಯಾಕ ಅಡಿವ್ಯಾಗ ಓಡಿ ಬಂತಂತ...' ಶೀಲವಂತ ಕಥಿ ಹೇಳಿಕಂತ ಹೊಂಟಿದ್ದ. 'ಆ ಕಥಿ ನನಗ ಗೊತ್ತಿಲ್ಲನು ಶೀಲವಂತ? ಬ್ಯಾರೆ ಏನನ ಇದ್ರ ಹೇಳು?' ಹರಳಯ್ಯ ಮುಖ ಸಪ್ಪಗ ಮಾಡಿ ಕೇಳಿದ್ದ. 'ಅಡಿವ್ಯಾಗ ಹುಲಿ ಬಂತಂತ. ಕರುವಿಗಿ ಹಾಲುಕುಡಿಸಿ ಮತ್ಯ ಬರ್ತೀನಿ ಅಂತ ಆಕಳ ವಚ್ನಾ ಕೊಟ್ರಂತ. ಕೊಟ್ಟ ವಚ್ನಾ ಪಾಲಿಸದಕ ಆಕಳ, ಹುಲಿ ಇದ್ದಲ್ಲಿಗಿ ಬಂತಂತ. ಇದನ್ನ ಮೆಚ್ಚಿದ ಹುಲಿ ಹಸಿವಾಗಿದ್ರೂ ಆಕಳನ್ನ ತಿನ್ನಿಲ್ಲಂತ. ತಾನಾ ಬೆಟ್ಟದ ಮ್ಯಾಲಿಂದ ಬಿದ್ದು ಪ್ರಾಣ ಕಳಕಂಡಬುಡ್ತಿ ಅಂತ ನಿನ್ನ ಕಥಿ ಹೌದಲ್ಲ ಶೀಲವಂತ?' ತಾಯಿ ಕಲ್ಯಾಣಮ್ಮ ಮಗನ ಕಥಿ ಪೂರ್ಣಗೊಳಿಸಿದ್ದಳು. ತಾಯಿ, ಮಗನನ್ನೇ ಹುಳ್ಳಗೆ ನೋಡಿ ನಕ್ಕಿದ್ದ ಹರಳಯ್ಯ.

'ಹಂಗಲ್ಲಪ ಅದು. ಹುಲಿ ಅಂದ್ರ ನಮ್ಮಂಥ ಮಂದಿಯಂಥ. ಒರಟು, ಸಿಟ್ಟು, ದುಡಿಯೋ ಶಕ್ತಿ, ಪ್ರಾಮಾಣಿಕತೆ, ನಿಷ್ಠೆ, ಸ್ವಾಭಿಮಾನ ಎಲ್ಲ ಒಳ್ಳೆ ಗುಣ ಇರೋ ಹೊಲೇರು ಇದ್ದಂಗ. ಹುಲಿ ಹಸ್ದುಕಾಸಿ ಎಂದನ ಹುಲ್ಲು ತಿಂದಿದ್ದು ಕೇಳಿರೇನು? ಇಲ್ಲಲ. ಹಂಗ ಹಸಿದವನ ಮುಂದ ಸತ್ಯ, ನಿಷ್ಠೆ, ಪ್ರಾಮಾಣಿಕತೆ ಅಂತ ಉಪದೇಶ ಮಾಡಿದ ಆಕಳ ಅದು ಹಾರವರು ಇದ್ದಂಗಂತ. ತನ್ನ ಚಾಣಾಕ್ಷತನದಿಂದನ ಹುಲಿಯಂಥ ಹುಲೀನ ಸಾಯ್ಸಿಬುಡ್ತೆಲ್ಲಪ ಹಸುವಿನಂಥ ಹಸು! ಅದ್ರಂಗ ನಿಂದು ಆದೀತು ಅಂಬ ಬುಗುಲಿಗೆ ನಾ ಹಂಗ ಹೇಳಿದ್ನಪ. ಅರ್ಥಮಾಡಿಕಳ್ಳದು ಬುಡದು ನಿನಗ ಬುಟ್ಟಿದ್ದು' ಶೀಲವಂತ ಇಷ್ಟು ಅಂದಾತನೆ ಸಿಡಿಮಿಡಿಗೊಂಡು ಹೊರಗ ಹೋಗಿದ್ದ.

'ನಿನ್ನ ಮ್ಯಾಲ ಬಸ್ವಣ್ಣಪ್ನೋರು ಹೊರಿಸಿದ ವಿನಮ್ರತೆಯ ಭಾರಾನ ಬ್ಯಾರೆ ರೀತಿಲಿಂದ ತೀರಿಸಾಕ ಬರುತ್ಯ, ನಮ್ಮ ತೊಡಿಯಾಗಿನ ಚರ್ಮ ಕಿತ್ತಿ ಚಮ್ಮಾವುಗೆ ಮಾಡಿಕೊಟ್ರ, ಬಸ್ವಣ್ಣಪ್ಪ ಮೆಟ್ಟಗಂತಾರನು? ನೋಡು ಮಾರಾಯ, ಸುಮ್ಮ ದುಡುಕಬ್ಯಾಡ. ಮೈಮ್ಯಾಲಿನ ಚರ್ಮ ಸುಲ್ಕಂಡು ಚಮ್ಮಾವ್ರಗೆ ಮಾಡೋದು ಅಂದ್ರ, ಮೈಮ್ಯಾಲಿನ ಬಟ್ಟಿ ಬಿಚ್ಚಿ ತೊಟ್ಗಂಡಂಗ ಅಲ್ಲ. ನಿನಗ ಕೈಮುಗ್ದು ಬೇಡಿಕಂತೀನಿ ಪುಣ್ಯಾತ್ಮ, ಬಸ್ವಣ್ಣಪ್ಪಗ ನಾಳಿ ನಾವಿಬ್ರೂ ಹೋಗಿ ತಪ್ಪಾತಿ ಅಂತ ಕೇಳಮು. ನಾವಾ ಮೊದ್ಲು ಅವ್ರಿಗೆ ಶರಣು-ಶರಣಾರ್ಥಿ ಅಂತ ಅಂದು ಆ ಭಾರಾನ ತೀರ್‍ಸಿಬುಡಾಮು' ಕಲ್ಯಾಣಮ್ಮ ಕರುಳಿನ ಮಾತನ್ನೇ ಗಂಡಗ ಹೇಳಿದಳು. 'ಹಂಗಲ್ಲ ಕಲ್ಯಾಣಿ ಅದು. ಶರಣರ ನುಡಿ ಅಂದ್ರ ಬಾಯಿ ಉಪಚಾರದ ಮಾತಲ್ಲ, ಜ್ಞಾನದ ಶಿಖರ ಬಸವಣ್ಣ, ಅಂತಾತ ನನಗ ಶರಣು ಶರಣಾರ್ಥಿ ಅಂತ ಹೇಳೋದು ಅಂದ್ರ? ಇಲ್ಲ ನಾ ಇದಕ್ಕ ಪ್ರಾಯಶ್ಚಿತ್ತ ಮಾಡಿಕ್ಯಬಕು. ನನ್ನ ತೊಡೆಯ ಚರ್ಮ ಸುಲ್ದು, ನನ್ನ ಕೈಯಾರೆ ಚಮ್ಮಾವುಗೆ ಮಾಡಿ ಬಸ್ವಣ್ಣಪ್ಪಗ ಕೊಡ್ತೀನಿ' ಹರಳಯ್ಯನ ಕಣ್ಣುಗಳಲ್ಲಿ ಮಿಂಚಿನ ಬೆಳಕು ಸೆಳೆಯಿತು.

'ಕೇಳಿದೋರು ನಿನಗ ಬುದ್ಧಿಗೇಡಿ ಅಂತಾರ. ಒಳ್ಳೆ ಚರ್ಮ ತಂದು ಭಕ್ತಿಯಿಂದ, ತನು, ಮನ ಶುದ್ಧಿಯಿಂದ ಬೇಕಾದ್ರ ಚಮ್ಮಾವುಗೆ ಮಾಡಿಕೊಡಾನ. ಆದ್ರ ಮನ್ಸೇರ ಚರ್ಮ ಬ್ಯಾಡ. ಮಹಾಭಾರತ ಪುರಾಣದ ಕಥಿ ಕೇಳಿಯೋ ಇಲ್ಲೊ? ದ್ರೋಣಾಚಾರ್ಯರು ತಾವು ಕಲಿಸದ ವಿದ್ಯೆಗೆ ಏಕಲವ್ಯನಿಂದ ಬಲಗೈ ಹೆಬ್ಬೆರಳು ಪಡದಂಗ, ನಿನ್ನ ಕಾಲನ್ನ ಇವ್ರು ಬಲಿ ತಗಂತಾರ. ಉಗುರಲ್ಲ, ಕತ್ತರಿಸಿದ್ರ ಚರ್ಮ ಬೆಳ್ದು ಬುಡುತ್ತ ಅಂಬಾಕ. ನೋಡು ವಿಚಾರಮಾಡು. ಶೀಲವಂತಗನೂ ಬಸವಣ್ಣಪ್ಪ ಅಂದ್ರ ಸಾಕ್ಷಾತ್ ಕೂಡಲ ಸಂಗಮನಾಥ ಇದ್ದಂಗ. ಆದ್ರ ಇಂಥ ಹರಕಿ, ಪರಕಿ ಹೊತಗಬ್ಯಾಡ. ಕೊಲುವವನೆ ಮಾದಿಗ ಅಂತ ಶರಣ್ರು ಹೇಳ್ಯಾರ. ನಿನ್ನನ್ನ ನೀನ ಕೊಲ್ಲಿಕೊಳ್ಳೋದು ಬ್ಯಾಡ. ನಿನ್ನ ಕಾಲು ಹಿಡಕಂಡು ಬೇಡಿಕೊಂತೀನಿ' ಕಲ್ಯಾಣಮ್ಮ ಹರಳಯ್ಯನತ್ತ ಬಾಗಿ ನಮಸ್ಕರಿಸಿದ್ದಳು. 'ಸಾಯೋ ಮಾತು ಯಾಕ ಆಡ್ತಿ ಕಲ್ಯಾಣಿ. ತೊಡಿಮ್ಯಾಲಿನ ಚರ್ಮ ಸುಲ್ಕಂಡು ಬುಟ್ರ ಜೀವ ಪಟ್ಕಂತ ಹೋಗಿಬುಡುತ್ತನು? ನನಗ ನಿನ್ನ ಉಪದೇಶ ಬ್ಯಾಡ. ನನಗ ನನ್ನ ಅಂಗದ ದೇವರು, ಲಿಂಗದ ದೇವರು, ಕಾಯಕದ ದೇವರು, ಜಂಗಮದ ದೇವರು ಬಸ್ವಣ್ಣಪ್ಪ, ಆತಗ ನಾ ಜೀವ ಬೇಕಾದ್ರೂ ಕೊಡ್ತೀನಿ' ಎದಿಯಿಂದ ಉಕ್ಕಿಬಂದ ಮಾತುಗಳನ್ನ ತುಂಡರಿಸುತ್ತ ತಡವರಿಸುತ್ತ ಹೇಳಿದ್ದ. 'ಪ್ರಭುದೇವ್ರಿಗೆ, ಇಲ್ಲ ಚನ್ನಬಸ್ವಣ್ಣಗ, ಇಲ್ಲ ಅಕ್ಕಮ್ಮಗನ ಈ ವಿಷಯ ತಿಳಿಸ್ಬೌ. ಈತಗ ಒಂದೀಟು ಬುದ್ಧಿ ಹೇಳಸ್ಬೌ. ಹರಕೆ ಬೇಡೋ ದೇವ್ರು ದೇವ್ರಲ್ಲ, ಹರಕೆ ಕೊಡೋ ಭಕ್ತ ಶರಣ ಅಲ್ಲ' ಕಲ್ಯಾಣಮ್ಮನ ಮಾತು ಇನ್ನಾ ಈಗನ ಹೇಳಿ ಮಕ್ಕಂಡಾಳ ಅನಿಸಿತು. ಹರಳಯ್ಯ ಹೊರಸಿನ ಮ್ಯಾಲ ಮಗ್ಗಲು ಬದಲಿಸಿ ಮಕ್ಕಂಡ.

...ಬಸ್ವಣ್ಣಪ್ಪ ಆಸ್ಥಾನದ ಕಡೆ ಅವಸರ ಅವಸರ ಹೊಂಟಿದ್ರು. ಹೃದಯನ ಕೈಯಾಗ ಹಿಡಕಂಡಂಗ ಚಮ್ಮಾವುಗೆ ಹಿಡಕಂಡು ಅವ್ರ ಹಿಂದ ಹಿಂದ ಹೊಂಟೆ. ನನ್ನ ಹೆಜ್ಜೆ ಸಪ್ಪಳಕ್ಕ ಬಸ್ವಣ್ಣಪ್ಪ ಹಿಂದಕ್ಕ ತಿರುಗಿನೋಡಿದ್ರು. ಅವ್ರು ಮೊದ್ಲು ಶರಣು ಅನ್ನಾಕಿನ ಮೊದ್ಲಾ ಶರಣು ಶರಣಾರ್ಥಿ ಅಂದುಬುಟ್ಟೆ. ಬಸವಣ್ಣ ಮುಗಳ್ನಕ್ಕು, ಶರಣು ಶರಣಾರ್ಥಿ ಹರಳಯ್ಯನವರೆ ಅಂದ್ರು. ಮನಸು ಮತ್ತೆ ಮುದುಡಿ ಹಿಡಿಯಾದ್ರೂ ನಾನ ಈ ಸಲ ಮೊದ್ಲು ಶರಣು ಶರಣಾರ್ಥಿ ಅಂದಿದ್ದಕ್ಕ ಸೊಲುಪು ಸಮಾಧಾನ ಆಯ್ತು. 'ಯಪ್ಪಾ ಭಾಗ್ಯದ ಬಸವರಾಜ, ಬೆಳಕಾದ ಬಸವೇಶ. ನನ್ನ ತೊಡೆಯ ಚರ್ಮ ಸುಲ್ದು ಮಾಡಿದ ಚಮ್ಮಾವುಗೆ ನಿನಗಾಗಿ ತಂದೀನಿ ತಂದೆ' ಬಸವಣ್ಣನತ್ತ ಚಮ್ಮಾವುಗೆ ಹಿಡಿದೆ. ಜಗದ ಗಾಬರಿಯೆಲ್ಲ ಬಸವಣ್ಣನ ಮಂದಸ್ಮಿತ ಮುಖದಾಗ ತೇಲಿತು. ಹೊಳೆವ ಕಣ್ಣುಗಳಿಂದ ನನ್ನ ಚಮ್ಮಾವುಗೆಗಳನ್ನ ದಿಟ್ಟಿಸಿದರು. 'ಕಲ್ಯಾಣಮ್ಮ ತಾಯಿ ಎಲ್ಲಿ?' ಅಂತ ಕೇಳಿದ್ರು. 'ಮಗನ ಜತಿ ಚರ್ಮ ಹದ ಮಾಡಾಕ ಹಚ್ಯಾಳ, ಗುರುಬಸವ ತಂದೆ'. 'ಈ ಚಮ್ಮಾವುಗೆ ನನಗ ಸಲ್ಲಂಗಿಲ್ಲ ಹರಳರಸ. ನಿನ್ನ ಬ್ರಹ್ಮಾಂಡ ಭಕುತಿಗೆ ನನ್ನ ವಿಭ್ರಾಂತಿಯ ಕಳೆಯಿತ್ತು ನೋಡಾ ಕಾಯಕದರಸ. ನಿನ್ನ ಚರ್ಮವನೇ ಮೈಯೆಲ್ಲ ಹೊದ್ದ ನನಗ, ಮತ್ತ ನಿನ್ನದೇ ಚರ್ಮದ ಚಮ್ಮಾವುಗೆ ಕೂಡದು. ಕೂಡದು. ಕೂಡಲಸಂಗನ ಶರಣರು ಜರಿಯುವರಯ್ಯ, ಸಂಗಮನಾಥಗೆ ಅರ್ಪಿಸಿಬುಡು. ಎನ್ನ ಮನದ ಮಲಿನ ಕಳೆದ ಕೂಡಲಸಂಗಯ್ಯ ಸ್ವರೂಪಿ ಹರಳಯ್ಯ ತಂದೆ...' ಬಸವಣ್ಣ ಕಣ್ಣಂಚಿಗೆ ತುದಿಬಳ್ಳು ಮುಟ್ಟಿಕೊಂಡರು. ಹೆಗಲಮ್ಯಾಲ ಕೈಯಿಟ್ಟು, ಮೈದಡವಿದರು. ಚಮ್ಮಾವುಗೆಗಳನ್ನ ತಮ್ಮ ಕಂಗಳಿಗೆ ಲಿಂಗದಂತೆ ಮುಟ್ಟಿಸಿದರು. ಉರಿಯ ಮುಂದ ನಿಂತ ಮಗುವಿನಂಗ ನಾ ಅವ್ರನ್ನ ಬೆಕ್ಕಸ ಬೆರಗಾಗಿ ನೋಡುತ್ತ ನಿಂತೆ. ಚಮ್ಮಾವುಗೆಗಳನ್ನ ತಲಿಮ್ಯಾಲ ಹೊತ್ತ ಬಸವಣ್ಣ, ನನ್ನ ಸುತ್ತ ಪ್ರದಕ್ಷಿಣೆ ಹಾಕಿದರು. 'ಹೋಗಯ್ಯ ಹರಳರಸ, ಸಂಗಮನಾಥನೊಬ್ಬನೆ ಈ ಚಮ್ಮಾವುಗೆ ಧರಿಸಲು ಯೋಗ್ಯನಯ್ಯ. ಭಕ್ತಿಯ ಬಯಲಾದ ಹರಳಯ್ಯ ತಂದೆ' ಬಸವಣ್ಣ ಆಸ್ಥಾನದತ್ತ ತಲೆತಗ್ಗಿಸಿಕೊಂಡು ಹೊಂಟರು...

ಸಂಗಮನಾಥನತ್ತ ಹೊಂಟೆ. ಅದೆಲ್ಲಿದ್ದನೋ ಮಾದರಸ ಎದುರಾದ. ಚಮ್ಮಾವುಗೆ ಕಣ್ಣುಕುಕ್ಕಿದವು. 'ಅಬ್ಬಾ ಎಂಥ ಅದ್ಭುತ ಚಮ್ಮಾವುಗೆ ಹರಳಯ್ಯ? ಕೊಡಯ್ಯ ನನ್ನ ಕಾಲಿಗಿ ಸರಿಹೊಂದ್ತಾವ' ಕಸಿದುಕೊಳ್ಳಲು ಕೈಚಾಚಿದ. ನಾ ಹಿಂದಕ್ಕ ಸರಿದು ನಿಂತೆ. 'ಬ್ಯಾಡ ಮಾದರಸ. ಎನ್ನ ಮನದ ಮಹಾದೇವ ಬಸ್ವಣ್ಣಪ್ನೋರಿಗಂತ ಈ ಚಮ್ಮಾವುಗೆ ಮಾಡಿ ತಂದಿದ್ಯ ಸಂಗಮನಾಥನೊಬ್ಬನೇ ಈ ಚಮ್ಮಾವುಗೆ ಧರಿಸಾಕ ಯೋಗ್ಯ ಅಂತ ಅವ್ರು ಹಾಕ್ಕಳದ ಕಳಿಸಿದ್ರು. ಸಂಗಮನಾಥ ಬುಟ್ರ ಬ್ಯಾರೆ ಯಾರೂ ಈ ಚಮ್ಮಾವುಗೆ ಧರಿಸಬಾರ್‍ದು ಮಾದರಸ...' 'ನಾ ಸೇನಾಪತಿ. ನನಗ ಎದುರುತ್ತರ. ಶರಣ್ರಿಗೆ ಒಪ್ಪದು. ತಾ ಇಲ್ಲಿ' ಮಾದರಸ ಚಮ್ಮಾವುಗೆ ಕಸಿದುಕೊಂಡರು. 'ಬ್ಯಾಡ... ಬ್ಯಾಡ... ಕೇಡು... ಕೇಡು...' ಚೀಟಾರನೆ ಚೀರಿದೆ.

ದಿಗ್ಗನ ಎದ್ದುಕುಂತ ಕಲ್ಯಾಣಮ್ಮ, ಶೀಲವಂತ, 'ಏನಾಯ್ತು ಶರಣ. ಕೆಟ್ಟ ದನೀಲೆ ಚೀರಿದಂಗ ಕೇಳಿಸ್ತು, ಬ್ಯಾಡ, ಕೇಡು ಅಂತ ಬಡಬಡಿಸಿದಂಗ ಆತು' ಚುಕ್ಕಿಗಳ ಬೆಳಕಲ್ಲಿ ಕಂಡ ಹರಳಯ್ಯನ ಮುಖದ ಆಕಾರದತ್ತ ದಿಟ್ಟಿಸಿನೋಡಿದರು. ಹರಳಯ್ಯ ಕಣ್ಣು ತಿಕ್ಕಿಕೊಳ್ಳುತ್ತ ಎದ್ದುಕುಂತ.

ಎದ್ದುಕುಂತ ರಭಸಕ್ಕೆ ಹೊರಸಿನ ಕಾಲುಗಳು ಕಿರ್‍ರುಗುಟ್ಟಿದವು. ನೆಲದ ಮ್ಯಾಲ ಪಕ್ಕದಾಗ ಮಲಗಿದ್ದ ಚೆನ್ನ ಮೈಮ್ಯಾಲ ಏನೋ ಬಿದ್ದಿತಂಬಂಗ ಮೈಜಾಡಿಸುತ್ತ ಎದ್ದು 'ಕುಂಯ್, ಕುಂಯ್' ಅಂದ. ಹರಳಯ್ಯನ ಮುಂದ ನಿಂತು ಮೋತಿಯನ್ನು ದಿಟ್ಟಿಸಿದ. ಒಂದೆರಡು ಸಲ ಬಾಲ ಅಲ್ಲಾಡಿಸುತ್ತ ಸಣ್ಣಹುಡ್ರು ಲೋಡ್ ಲೋಡ್ ತಿಮ್ಮಯ್ಯ ಅನ್ನುವಂತೆ ಹರಳಯ್ಯನನ್ನೇ ಸುತ್ತಿದ. 'ಕೆಟ್ಟ ಕನ್ಸು, ಗಿನ್ಸು ಏನನ ಬಿತ್ತನು? ಎಷ್ಟು ಬೆವರಾಕ ಹತ್ತೀಯಲ್ಲ ಮಾರಾಯ?' ಕಲ್ಯಾಣಮ್ಮ ದಿಡಗ್ಗನೆ ಎದ್ದು ತನ್ನ ಸೆರಗಿನ ತುದಿಯಿಂದ ಕುತ್ಗಿ, ಕಪಾಳ ಒರೆಸಿದಳು. 'ಏನಪ ಅದು ಕನ್ಸು? ಅದ ಬಸ್ವಣ್ಣಪ್ಪಗ ಚಮ್ಮಾವುಗೆ ಕೊಡೊ ಕನ್ಸು ಬಿದ್ದಿರ್‍ಬಕಲ್ಲ?' ಶೀಲವಂತ ಅರೆನಿದ್ದೆಯಲ್ಲೇ ಕಣ್ಣು ತಿಕ್ಕಿಕೊಂಡು ಆಕಳಿಸಿದ. 'ಇಂಥ ಹೊತ್ತಿನ್ಯಾಗನೂ ನಿನಗ ಚ್ಯಾಷ್ಟಿ ಮಾಡದ ಉದ್ಯೋಗ. ನಿಮ್ಮಪ್ಪ ಹೇಳೋತನ್ಕ ಸೊಲುಪು ತಡಕ್ ಬೆದರುಗೊಂಬಿಗತೆ ನಿಂತಿದ್ದ ಹರಳಯ್ಯನನ್ನೇ ನೋಡುತ್ತ ಕಲ್ಯಾಣಮ್ಮ ರಮಿಸಿದಳು. 'ಬಸ್ವಣ್ಣಪ್ಪಗ ನನ್ನ ತೊಡೆಯ ಚರ್ಮದಿಂದ ಮಾಡಿದ ಚಮ್ಮಾವುಗೆ ಕೊಡಾಕಂತ ಹೋದೆ' ಕನಸಿನ ಕುಡಿಯನ್ನು ಹರಳಯ್ಯ ಜಗ್ಗತೊಡಗಿದ. ಇನ್ನೂ ಮುಖದಾಗ ಗಾಬರಿಯಿತ್ತು, ಚೆನ್ನ ಹರಳಯ್ಯನ ಕಾಲಿಗೆ ಮೂತಿ ತಿಕ್ಕಿದ. ತನಗೂ ಕನಸಿನ ಕಥಿ ಹೇಳ್ಬಕು ಅಂಬಂಗ 'ಕುಂಯ್'ಗುಟ್ಟಿದ.

'ಚಮ್ಮಾವುಗೆ ಕೊಡಾಕ ಹೋಗಿದ್ದು ಕನಸಿನ್ಯಾಗ ಅಂಬದನ್ನ ನೆನಪಿಟಗಪ. ಇಲ್ಲ ಇನ್ನ ಕನಸಿನ್ಯಾಗನ ಅದಿಯನು ಮತ್ತ?' ಅಪ್ಪನ ಎಡತೋಳು ಮುಟ್ಟಿ ಶೀಲವಂತ ಮಾತಾಡಿಸಿದ. 'ನಿನಗ ಎಲ್ಲದು ತಮಾಷಿಗತೆ ಕಾಣುತ್ತ, ಎಲ್ಲದಕ್ಕ ಕೋಡು ಮಾಡ್ತೀದಿ' ಹರಳಯ್ಯ ಮತ್ತೆ ಹೊರಸಿನ ಮ್ಯಾಲ ಕುಂತು ನಿಟ್ಟುಸಿರುಬಿಟ್ಟ. 'ಆಯ್ ಆ ಹುಡುಗನ ಮಾತು ಏನ್ ಕೇಳ್ತಿ, ಅದು ಹಂಗನ. ನಿನ್ನ ಕನಸಿನ ಕಥಿ ಹೇಳು. ಬಸ್ವಣ್ಣಪ್ಪನೋರು ನನ್ನ ಕೇಳಿರ್‍ಬಕಲ್ಲ?' ಕಲ್ಯಾಣಮ್ಮ ಗಂಡನ ಬಾಜು ಕುಂತು ಕೇಳಿದಳು. 'ಕೇಳ್ದ ಯೇನಬೆ. ಇಡೀ ಕಲ್ಯಾಣಕ್ಕ ಗೊತ್ತೈತಿ. ನೀವಿಬ್ರು ಎಂಥ ಶರಣಜೋಡಿ ಅಂತ. ನೀ ಅಪ್ಪನ ನೆರಳಾದ್ರ, ಅಪ್ಪ ನಿನ್ನ ನೆರಳು. ಒಂದಕ್ಕೊಂದು ಹೆಂಗ ಬಿಟ್ಟಿರ್‍ತಾವ. ಕೇಳಿರ್‍ತಾರ ಬುಡಬೇ. ಆತ ಮುಂದ ಹೇಳ್ಲಿ' ಶೀಲವಂತ ಮತ್ತೊಮ್ಮೆ ನಿದ್ದಿ ತಡಿಯಾಕ ಆಗವಲ್ತು ಅಂಬಂಗ ದೀರ್ಘವಾಗಿ ಆಕಳಿಸಿದ. ಮುಖದ ಮ್ಯಾಲ ಎರಡೂ ಅಂಗೈಗಳಿಂದ ತಿಕ್ಕಿಕೊಂಡ. 'ಬಸ್ವಣ್ಣಪ್ಪ ನಿನ್ನ ಹೆಂಗ ಕೇಳಲ್ಲ, ಕೇಳಿದ್ರು. ನಾ ತಗೊಂಡ ಚಮ್ಮಾವುಗೆಗಳನ್ನ ಅವ್ರು ಹಾಕ್ಕಳ್ಳಿಲ್ಲ. ತಲಿಮ್ಯಾಲ ಇಟಗಂಡು ಮೆರವಣಿಗೆ ಮಾಡಿದ್ರು. ಸಂಗಮನಾಥಗ ಅವ್ರನ್ನ ಕೊಟ್ಟು

ಹೈದರಾಬಾದ್ ಕರ್ನಾಟಕ ವಿಶೇಷಾಂಕ

...ಕ ಹೇಳಿದ್ರು. ನಾ ಹಂಗ ಹೊಂಟಿದ್ದ. ಮಾದರಸ ಬಂದ...' ಹರಳಯ್ಯ ನಿಧಾನವಾಗಿ ಬಿದ್ದ ಕನಸಿನ ...ು ಹಿಡಿದಿದ್ದ. ಶೀಲವಂತ ನಡುವ ಬಾಯಿಹಾಕಿದ. ...ಮ್ಯಾಲ ಮಾದರಸ ನಿನ್ನ ಚಮ್ಮಾವುಗೆಗಳನ್ನ ಕಸ್ಗಂಡು ...ಾಗ ಹಾಕ್ಕೊಂಡ. ಮೈಯಲ್ಲಿ ಉರಿ ಉರಿ ಅಂತ ...ದಾಡಿದ. ಅದ್ಕ ನೀ ಬ್ಯಾಡ, ಬ್ಯಾಡ... ಕೇಡು ಅಂತ ...ದಿ.' 'ಹೇ ಮುದೇವ, ನಿಮ್ಮಪ್ಪ ಹೇಳ್ಲಿ ತಡಿ. ಆತನ ನಿನಗ ಬದ್ದಿತುಂಬಂಗ ಹೇಳಾಕ ಹತ್ತೀಯಲ್ಲ' ಕಲ್ಯಾಣಮ್ಮ ನಿದ್ದೆಗೆ ಜಾರಿದ್ದ ಚೆನ್ನನ ಮೈಮ್ಯಾಲ ಕೈಯಾಡಿಸುತ್ತ ...ದಳು. 'ಬೇ ಯವ್ವಾ, ಅಪ್ಪ ಎಂಥ ಕನ್ಸು ಬದ್ದಿರುತ್ತ ...ದು ನನಗಷ್ಟ ಅಲ್ಲ, ಇಡೀ ಕಲ್ಯಾಣದ ಮಂದಿಗೆಲ್ಲ ...ಾಗುತ್ತ ಆಮ್ಯಾಲ ಮಾದರಸ ಬಸ್ವಣ್ಣಪ್ಪನತಲ್ಲಿ ಹೋತಾನ. ...' ಮನ್ಯಾಗಿನ ಚರ್ಮ ಹದ ಮಾಡಿದ ನೀರನ್ನ ...ಮ್ಯಾಲ ಚುಮುಕಿಸಿದ್ರ ಉರಿ ಕಡಿಮಿ ಆಗುತ್ತಂತ ...ಪ್ಪ ಹೇಳ್ತಾರ. ನೀರು ಚುಮುಕಿಸಿದ ಮ್ಯಾಲ ಮಾದರಸನ ...ಯುರಿ ಕಡಿಮಿ ಆಗುತ್ತ! ಅಬ್ಬಾ ಶರಣರ ಪವಾಡ. ...ಕಾಲಕ್ಕ ಇದನ್ನ ನೆಪ್ಪು ಇಟಗಬಕು. ಕಲ್ಯಾಣದ ಶರಣ್ರು ...ಡ ಮಾಡ್ತಾರಂದ್ರ ಇಡೀ ಲೋಕಾನ ಕೊಕಾಸಿ ನಗುತ್ತ. ...ಡ, ಗಿವಾಡ ನಂಬೋದು, ಮಾಡೋದು ಶರಣ್ರಿಗೆ ...ಗಿಲ್ಲ. ಮಾಟ, ಮಂತ್ರ, ತಂತ್ರ ಧಿಕ್ಕರಿಸಿದ ಶರಣ್ರಿಗೆ ...ವೆಲ್ಲ ಅಪವಾದ' ಆಕಾಶದತ್ತ ಮುಖಮಾಡಿ ಹೊಳೆವ ...ಗಳನ್ನ ದಿಟ್ಟಿಸಿದ. ಶೀಲವಂತನ ಮಾತು ಕೇಳಿದ ...ಯ್ಯಗ ಏನ್ ಹೇಳ್ಬಕು ಅಂಬದ ಮರ್ತುಹೋಯ್ತು.

ಕನಸು ನಿಧಾನವಾಗಿ ಅಸ್ಪಷ್ಟವಾಯಿತು. 'ಹೇ ...ಾಯ್ರು, ಇಬ್ರೂ ಹೀಂಗ ಕಥಿ ಹೇಳಿಕಂತ ಬೆಳಕು ...ರೇನು ಇವತ್ತು? ನಾನಂತು ಅಡ್ಡ ಆಗ್ತೀನಿ. ಮುಂಜಾನಿ ...ಕಾಸಿ ಜಗ್ಗ ಕೆಲ್ಸ ಅದ್ಯಾವ ಮಾಡಾಕ. ನೀನೂ ...ಡುಬುಡು. ಇನ್ನೊಂದೆಲ್ಡು ತಾಸಿಗಿ ಬೆಳಕು ಹರಿತೈತಿ. ಮರ್ತು ತುಂಬ ಹೊದ್ಕಂಡು ಮಕ್ಕಂಡುಬುಡು.' ...ಯ್ಯ ಹೊರಸಿನ ಮ್ಯಾಲ ಮತ್ತೆ ಅಡ್ಡ ಆದ. ಶೀಲವಂತ ...ಂದು ಬಡ್ಕೊಂಡು ಕಾಲು ಇಟಗಂತ ಮೊದ್ಲು ...ಡಿದ್ದ ಚಾಪಿ ಸಮೀಪ ಬಂದ. ಹಣೆಮ್ಯಾಲ ಮುಂಗೈ ಹಿಡ್ಕಂಡು ಮಕ್ಕಂಡ. ಗಂಡಗ ಕೌದಿ ಹೊದಿಸಿದ ...ಣಮ್ಮ, ಜಾಲಿಗಿಡದ ಸಮೀಪ ಹೋಗಿ ಕಾಲ್ಮಡುದು ...ು ಮಕ್ಕಂಡ್ಲು.

...ಹರಳಯ್ಯ ಹೊರಸಿನ ಮ್ಯಾಲ ಎಡಕ್ಕೊಮ್ಮೆ, ...ಕ್ಕೊಮ್ಮೆ ಉರುಳ್ಯಾಡಿ ಮಕ್ಕಂಡ.

...ಬಸವ ನೆನಪಾದ. ನಿನ್ನಿ ಬೆಳಿಗ್ಗೆ ಚರ್ಮ ಕೊಯ್ಯುತ್ತ ...ಾಗ ಓಡೋಡಿ ಬಂದು ತೊಡಿಮ್ಯಾಲನ ಕುಂತ್ಗಂಡಿತ್ತು, ...ಮೂತಿಲಿಂದ ನೆಕ್ಕಿತ್ತು. ಬಾಲದಿಂದ ಮುಂಗೈ ಮ್ಯಾಲ ...ುಳಿ ಇಟ್ಟಿತ್ತು. ಇನ್ನಾ ಈಗನ ನಡದೈತನು ಅಂಬಂಗ ...ಂದ ತೇಲಿ, ನೆನಪಿನ ಸುರುಳಿ ಬಿಚ್ಚಿತು. ಬಸವನಂದ್ರ ...ನ. ಒಂದಿಷ್ಟೂ ಗರ್ವ ಇಲ್ಲ, ಮನೀ ಮಗಳಂಗ ... ಬೆಳಗ್ಗಿ ಹಾಕಿದ್ದ ಹಾಲು, ಅನ್ನ ಅರ್ಧದಷ್ಟ ತಿಂದು ಅರ್ಧ ಮಧ್ಯಾಹ್ನ ತಿಂತೀನಿ ಅಂತ ಮೀಸಿಯಲ್ಲೇ ...ಾಚಿ ಹೇಳಿತ್ತು. ಹೊರಗೋಗಿ ಆಡಿಬರ್ತೀನಿ ಅಂತ ...ಗೈಗಿ ಮುತ್ತಿಟ್ಟುಹೋಗಿತ್ತು. ಅದೆಂಥ ಕೆಟ್ಟ ದನಿ. ...ವ್...' ಅಂತ ಚೀರಿತ್ತು. ನೆಲಕ್ಕ ಮಾಂಸದ ಮುದ್ದಿ ...ವಂಗ ಆಗಿತ್ತು. ಸೇನಾಧಿಕಾರಿಯ ಕುದುರಿಗಾಡಿ ಗಾಲಿಗೆ ...ಕಿ ಬಸವ ಬಯಲಾಗಿಬುಡ್ತಿ. 'ಬಸವಾ, ಬಸವಾ, ...ಗಿ ಹೋದಿ ನನ್ನವ್ವ. ನಿತ್ಯ ನನ್ನ ತಲೆದಿಂಬಿನ ಮ್ಯಾಲನ ...ತಿದ್ದಿ. ಬಸವಾ' ಅಂತ ಮೈಮರ್ತು, ತಲೆದಿಂಬು ...ದ. ಬರಿಗೈ ತಲೆದಿಂಬಿನ ಮ್ಯಾಲ ಆಡಿತು. ...ವಾ, ಬಸವಾ...' ಅಂತ ಹತ್ತಾರು ಸಲ ಕನವರಿಸುತ್ತ ...ಯ್ಯ ನಿದ್ದೆಹೋದ.

...ಹರಳಯ್ಯ ತಂದೆ, ನಿಂತ್ಗಳ್ಳಪ. ಬಸವರಸರ ದನಿ. ...ವರಾಜ ಶರಣು ಶರಣಾರ್ಥಿ'. 'ಎನ್ನ ಕಾಯದ ನೆಳಲಾದ ...ಯ್ಯ ತಂದೆ ನಿನಗ ಶರಣು ಶರಣಾರ್ಥಿ. ಯಾವ ಹೊಂಟಿ ಶರಣುಪ್ರಭು? ಇಂಥ ಉರಿಬಿಸ್ಲಾಗ ...ಾಲಿಲೆ ಹೊಂಟಿಯಲ್ಲ ಹರಳರಸ? ಸುಡೋ ಕಾಲನ್ನ ...ಡು ಬಾಯಾಗ ಇಟಗಳಂಗ ಆಗೈತಿ. ಕಾದ ಹಂಚಿನ ...ಳ ನೆಡದಂಗ ಆಗೈತಿ. ಇಡೀ ಕಲ್ಯಾಣದ ಮಂದಿಗೆ ...ಮ್ಮಾವುಗೆ ಮಾಡಿ, ಅವ್ರ ಪಾದ ರಕ್ಷಿಸೋ ತಂದಿ ನೀನು. ...ತ್ತಿ ಕಣ್ಣಗ ಇಲ್ಲಿ ಅಂತ ಹರಸೋ ತಾಯಿ ನೀನು. ...ರ ಬಂಧು ನೀನು, ಬಳಗ ನೀನು! ನಿನ್ನಾಂಥಾತನೇ ...ವ ಕೆಂಡದ ಮ್ಯಾಲ ನೆಡಕಂತ ಹೊಂಟಿಯಲ್ಲ ತಂದೆ. ...ಾ ನಿನ್ನ ಈ... ಅಲ್ಲ ನಿನ್ನ ಈ ಚಮ್ಮಾವುಗೆ ತಗಾ. ನಾ ...ಗಾಲಿಲೆ ಹೋಗ್ತೀನಿ.' ಕಾಲಲ್ಲಿದ್ದ ಚಮ್ಮಾವುಗೆಗಳನ್ನ ...ಲ್ಲಿ ಹಿಡಿದ ಬಸವಣ್ಣ, ಬರಿಗಾಲಲ್ಲಿ ಮುಂದ ಮುಂದ ...ಬಂದ. 'ತಗಾ ಹರಳರಸ, ಈ ಚಮ್ಮಾವುಗೆ ನಿನ್ನ ...ಗ ಇಲ್ಲಿ, ನಿನ್ನ ಮಾಗಿನ ಕೋರಿಕೆ ಈಡೇರಿಸು ಹಡದಪ್ಪ...' ...ಲಾಚಿ ಚಾಚಿದ. 'ಬ್ಯಾಡ ಬಸವ. ನಾ ಕಾಯಕದವನು. ...ಕ ಆಡಂಬರ? ನಾ ಬಡವ. ಚಮ್ಮಾರ. ಬ್ಯಾಡ ...ನುಭವ. ನನಗ ನಿನ್ನ ಚಮ್ಮಾವುಗೆ ಬ್ಯಾಡ'. 'ನೀ ...ಲ್ಲಿ ಹರಳರಸ. ಭಕ್ತರು ಬೆರಗು. ಕಾಯಕದ ಕಾರುಣ್ಯ ...ವಾದ ಹಾಗೆಲ್ಲ, ಈ ಚಮ್ಮಾವುಗೆ ಬ್ಯಾಡ ಅಂದ್ರ ...ಗ ನಿನ್ನ ಮೈಮ್ಯಾಲಿನ ಚರ್ಮದಿಂದಲೇ ನಿನಗ ...ಮ್ಮಾವುಗೆ ಮಾಡುತೀನು. ಆದಾಗ್ಯೂ 'ಒಮ್ಮೆ ಹರಳರಸ,

'ಅಪವಾದ, ಅಪವಾದ. ಈ ಮಾತುಗಳನ್ನ ಕೇಳದ್ಕಂತ ನಾ ಕಿವುಡನ ಆಗಿದ್ರ ಚಲೋ ಇತ್ತು, ಬರಿಗಾಲ ನೋದಿ ಕರಗಿದ ಬಸವರಸನ ಮುಂದ ನಾ ಹೆಳವನಾಗಿದ್ರೂ ಚಲೋ ಇತ್ತು, ಬ್ಯಾಡ ಬಸವರಸ ನೀ ಈ ಲೋಕದ ಒಡೆಯ. ನಿನ್ನ ಚಮ್ಮಾವುಗೆ ನನ್ನ ತಲಿಮ್ಯಾಲ ಹೊತ್ತು ಕುಣದಾಡ್ತೀನಿ. ಆದ್ರ ನಿನ್ನ ಚಮ್ಮಾವುಗೆಗಳನ್ನ ಮಾತ್ರ ನಾ ಹಾಕಿಕೊಳ್ಳಲ್ಲ, ಚಮ್ಮಾವುಗೆ ಹಾಕಿಕೊಳ್ಳಂಗ ಮನಸು ಬಂದ ದಿನನ ಈ ಕಾಲುಗಳು ಸೆಟೆದುಹೋಗ್ಲಿ, ಜೀವ ನಿರ್ಜೀವವಾಗ್ಲಿ, ಸಂಗಮನಾಥನ ಸೇರಲಿ ಈ ಒಡಲು...' 'ಯಾಕ ಹಟಮಾಡ್ತಿ ಹರಳರಸ. ನಿನ್ನ ಮನೆಯವರೆಗೆ ಆದ್ರೂ ಹಾಕಿಕೊಂಡು ಹೋಗು. ಸಂಗಮನಾಥನ ಮ್ಯಾಲಾಣೆ...' 'ಬಸವರಸನ ಬಾಯಲ್ಲಿ ಆಣೆ, ಪ್ರಮಾಣ! ಬ್ಯಾಡ ಬಸವ, ನಾ ಚಮ್ಮಾವುಗೆ ಹಾಕ್ಕಳಲ್ಲ, ನನಗ ನೀ ಒತ್ತಾಯಮಾಡಬ್ಯಾಡ ಬಸವರಾಜ'. 'ನಿಂತಗ ಹರಳರಸ. ತಗೊ ಈ ಚಮ್ಮಾವುಗೆ...' 'ಬ್ಯಾಡ ಬಸವ. ನನಗ ಬ್ಯಾಡ. ನಾ ಓಡಿಹೋಗ್ತೀನಿ...

ಹೊರಸಿನ ಕೆಳಗ ಮಕ್ಕಂಡಿದ್ದ ಚೆನ್ನ ಸತ್ತೆನೋ ಕೆಟ್ಟೆನೋ ಅಂತ ಕುಂಯ್ಗುಟ್ಟಿ, ದಿಡಗ್ಗನೆ ಎದ್ದು ಮೈಜಾಡಿಸಿಕೊಂಡ. ಆಕಾಶಕ್ಕೆ ಮುಖಮಾಡಿ ಚುಕ್ಕೆಗಳೆಲ್ಲ ಉದುರುವಂಗ 'ಬೌಂವ್ವೋ...' ಅಂತ ಒದರಿದ.

'ಯಾಕ, ನಿನ್ನಂಗ ಆತ ತನ್ನ ಮೈಮ್ಯಾಲಿನ ಚರ್ಮ ಸುಲ್ದು ಚಮ್ಮಾವುಗೆ ಮಾಡಿಕೊಡ್ತೀನಿ ಅಂತ ನಿನಗ ಅನ್ನಿಲ್ಲೇನು?' ಶೀಲವಂತ ಅಪ್ಪನನ್ನು ನೋಡಿ ಒಳಗೊಳಗೆ ನಕ್ಕ. 'ಅದ್ನೂ ಅಂದ. ನಿನಗೆಂಗ ಗೊತ್ತಾತಿ, ಶೀಲವಂತ? ನನಗ ನಿನ್ನ ಮಾತು ಕೇಳಿದ್ರ ಆಶ್ಚರ್ಯ ಆಗತ್ತ, ನನ್ನ ಮನ್ಸಿನ್ಯಾಗಿರೋ, ಕನಸಿನ್ಯಾಗಿರೋ ಮಾತುಗಳೆಲ್ಲ ನಿನಗ ಕೇಳಿಸಿಬುಡ್ತಾವ. ಈ ಚಮ್ಮಾವುಗೆ ಬ್ಯಾಡಂದ್ರ, ನನ್ನ ಮೈಮ್ಯಾಲ ಇರೋ ಚರ್ಮನ ನಿಂದು. ಇದ ಚರ್ಮದಾಗ ನಿನಗ ಚಮ್ಮಾವುಗೆ ಮಾಡ್ಸಿ ಕೊಡ್ತೀನಿ. ಆವಾಗನ ಹಾಕ್ಕಂತಿಯಲ್ಲ ಅಂತ ಕೇಳಿದ, ನನ್ ತಂದಿ. ಥೋ ಥೋ ನನ್ ದೇವ್ರಿಗೆ ನಾ ಬ್ಯಾಡ ಆದ್ನ್ಯೋ ಏನೋ? ಬಸವರಸನ ಬಾಯಾಗ ಅಂಥ ಮಾತು?' ಆಕಾಶದತ್ತ ಮುಖಮಾಡಿ, ಒಂದೊಂದೆ ಮರೆಯಾಗುತ್ತಿದ್ದ ಚುಕ್ಕೆಗಳನ್ನು ದಿಟ್ಟಿಸಿನೋಡಿದ. 'ಇಡೀ ಕಲ್ಯಾಣದ ಮಂದಿಗಿ ಚಮ್ಮಾವುಗೆ ಮಾಡಿಕೊಡೋ ನೀನ ಬರಿಗಾಲಿಲೆ ತಿರುಗಾಡ್ತಿ ಅಂತ ಬಸ್ವಣ್ಣಪ್ಪ ಹಂಗ ಅಂದಿರ್ಬಕು. ಅದು ಅವ್ರ ದೊಡ್ಡಗುಣ. ಆದ್ರ ಅವ್ರ ಮಕ್ಳು ಬಸ್ವಣ್ಣಪ್ಪನಂಗ ಇಲ್ಲ. ತಮ್ಮಪ್ಪ ಭಕ್ತಿಭಂಡಾರಿ. ಬಿಜ್ಜಳನ ಮಂತ್ರಿ ಅಂತ ಧಿಮಾಕು ಮಾಡ್ತಾರ. ಮೊನ್ನಿ ನಾ ಹರ್ಕಂಡು ಬಂದ ಮಾವಿನ ಹಣ್ಣನ್ನ ಕೊಡಾಕ

'ಈ ಚಮ್ಮಾವುಗೆ ನನಗ ಸಲ್ಲಂಗಿಲ್ಲ ಹರಳರಸ. ನಿನ್ನ ಬ್ರಹ್ಮಾಂಡ ಭಕುತಿಗೆ ನನ್ನ ನಿಭ್ರಾಂತಿಯ ಕಳೆಯಿತ್ತು ನೋಡಾ ಕಾಯಕದರಸ. ನಿನ್ನ ಚರ್ಮವನೇ ಮೈಯೆಲ್ಲ ಹೊದ್ದ ನನಗ, ಮತ್ತ ನಿನ್ನದೇ ಚರ್ಮದ ಚಮ್ಮಾವುಗೆ ಕೂಡದು, ಕೂಡದು. ಕೂಡಲಸಂಗನ ಶರಣರು ಜರಿಯುವರಯ್ಯ. ಸಂಗಮನಾಥಗೆ ಅರ್ಪಿಸಿಬುಡು. ಎನ್ನ ಮನದ ಮಲಿನ ಕಳೆದ ಕೂಡಲಸಂಗಯ್ಯ ಸ್ವರೂಪಿ ಹರಳಯ್ಯ ತಂದೆ...'

'ಶರಣ್ರಿಗೆ ಇದು ಅಪವಾದ. ಬ್ಯಾರೆ ಜೀವಿಗಳನ್ನ ಹಿಂಸಿಸುವುದು ಎಷ್ಟು ಕೆಟ್ಟದ್ದೋ, ನಮ್ ಜೀವ ಹಿಂಸಿಸಿಕೊಳ್ಳೋದು ಅದಕ್ಕಿಂತ ಕೆಟ್ಟದು. ಹೀಂಗ ಮಾಡಿದ್ರ ಶರಣ ಸಂಪ್ರದಾಯನ ಮುರಿದಂಗ...'



ಕಲ್ಯಾಣಮ್ಮ, ಶೀಲವಂತ ದಿಗ್ಗನೆ ಎದ್ದು ಕುಂತರು. ಆಗ್ಲೆ ಮೂರುತಾಳ ಚುಕ್ಕಿ ಪಶ್ಚಿಮ ದಿಕ್ಕಿನ ಮೂಲಿ ಸೇರ್ತಿತ್ತು, ಸುತ್ತಮುತ್ತಲಿನ ಗಿಡಗಳಲ್ಲಿದ್ದ ಹಕ್ಕಿಪಕ್ಷಿಗಳು ರೆಕ್ಕಿ ಬಡಿಯುತಿದ್ವು. ಚೆನ್ನ ಹಿಂಗಾಲನ್ನ ಮೂತಿಲಿಂದ ನೆಕ್ಕಿಕೊಂಡ. 'ನಾಯಿ ಮ್ಯಾಲ ಕಾಲು ಇಟ್ಟು ಇಳದ್ರ ಹೆಂಗ? ಏದ್ದಿ ಗಣ್ಣಾಗೂ ಶರಣ್ರು ಎಚ್ಚರ ಇರ್ಬಕು. ಪಾಪ ಚೆನ್ನ ಆದದಕಲೆ ತಡಕಂಡ. ನಮ್ ಬಸವನ ಮ್ಯಾಲ ಏನನ ಕಾಲು ಇಟ್ಟಿದ್ದಿ ಅಂದ್ರ...' ಕಲ್ಯಾಣಮ್ಮ ಸೆರಗು ಮುಟಗಿಮಾಡಿಕೊಂಡು ಬಾಯಿಗಿ ಹಿಡಿದಳು. ಶೀಲವಂತ, ಹರಳಯ್ಯನ ಕಣ್ಣಂಚು ತೇವಗೊಂಡು ಮಿಂಚುಹುಳುಗಳಂಗ ಮಿಂಚಿದವು. 'ಬಸವ ನಿನ್ನಿಯನ ನಮ್ಮನ್ನ ಬುಟ್ಟು ಹೋದ್ನಲ್ಲೋ ಕಲ್ಯಾಣಿ...' ಹೆಂಡತಿಯ ಮುಂಗೈಗೆ ನಮಸ್ಕರಿಸುವಂಗ ಬಗ್ಗಿದ. 'ಮತ್ತೆ ಏನನ ಕೆಟ್ಟ ಕನ್ಸು ಬಿತ್ತನಪ? ಬೆಳಗಾ ಮುಂಜಾಲಿ ಬಿದ್ದ ಕನ್ಸು ಖರೇವು ಆತಾವ ಅಂತ ಮಂದಿ ನಂಬ್ತಾರ. ಬಸ್ವಣ್ಣಪ್ಪ ಬಂದು ಏನಂದ ಈ ಸಲ?' 'ನಾ ಆತನ ಕೈಗಿ ಸಿಗ್ಲಿಲ್ಲ ಈ ಸಲ. ಓಡಿ ಬಂದ್ಬುಟ್ಟ...' ಹರಳಯ್ಯಗ ಮತ್ತೆ ಕನಸ ಕೊನೆ ನೆನಪಾಗಿ ಸುಳಿವ ತಂಗಾಳಿಯಾಗೂ ಮೈಯೆಂಬೊ ಮೈಯಿಂದ ಬೆವರು ಸೆಲೆಯೊಡೆಯಿತು. 'ಓಡಿ ಬರೋದು ಬಂದಿ, ಅಲ್ಲೆ ಕಾಲ್ಬಸಿಗೆ ಮಕ್ಕಂಡಿದ್ದ ಚೆನ್ನ ಕಾಣ್ಲಿಲ್ಲೇನು ನಿನ್ನ ಕಣ್ಣಿಗೆ?' ಕಲ್ಯಾಣಮ್ಮ ಗಂಡನ ಮುಖವನ್ನೊಮ್ಮೆ, ಚೆನ್ನನ ಮೂತಿಯನ್ನೊಮ್ಮೆ ನೋಡಿದಳು. 'ಯವ್ವಾಬೇ ಅಪ್ಪನ ಕಣ್ತುಂಬ ಬಸ್ವಣ್ಣಪ್ಪನೇ ತುಂಬಿಕೊಂಡಾನ. ಚೆನ್ನ ಹೆಂಗ ಕಾಣ್ತಾನ?' 'ಹಡದಪ್ಪ ಶೀಲವಂತ, ಕೋಡುಮಾಡ ಹೊತ್ತಲ್ಲ, ಗೊತ್ತಲ್ಲ ಇದು. ಸೊಲುಪು ಮೆಲ್ಲ ಮಾತಾಡು. ಸಮೀಪದ ಶರಣ್ರು ನಮ್ಮ ಕಲಾಪುಲಿ ಕೇಳಿ ಎದ್ದು ಬುಟ್ಟಾರು' ಕಲ್ಯಾಣಮ್ಮ ಪಿಸುಗುಟ್ಟಿದಳು. 'ಬಸ್ವಣ್ಣಪ್ಪ ತನ್ನ ಕಾಲಾಗಿನ ಚಮ್ಮಾವುಗೆಗಳನ್ನ ನನಗ ಕೊಡಾಕ ಬಂದ. ಬರಿಗಾಲಿಲೆ ಹೊಂಟಿದ್ದ ನನ್ನ ಕಂಡು ಕನಿಕರಪಟ್ಟ. ನಾ ಎಂಥ ಶರಣ ಅಂಬದು ನಿಮಗ ಗೊತ್ತೈತಲ್ಲ? ಅದ್ಕ ನಾ ಆತನ ಚಮ್ಮಾವುಗೆ ಇಸ್ಕಳ್ಳಲಾರ್ದ ಓಡಿಬಂದ್ಯ...' ನೆನಪಾದ ಕನಸ ಬುಟ ತೆರೆದ.

ಹೋದ್ರ ದೂರ ಸರದ್ರು. ಹಣ್ಣನ್ನ ಕೈಲಿಂದ ಮುಟ್ಲಿಲ್ಲ, ಅವ್ರ ವೇಷ, ಭೂಷಣ ನೋಡ್ಬಕು. ಎಲ್ಡು ಕಣ್ಣು ಸಾಲಂಗಿಲ್ಲ! ನಮ್ಮಂಥೋರ ಜತಿ ಆಡಾಕು ಹಿಂದಮುಂದ ನೋಡ್ತಾರ. ಅರಸರ ಮಕ್ಕಳ ಕುಡನ ಅವ್ರ ಆಟ, ಪಾಠ. ಅದ್ಕ ನನಗ ನೀನ ಗುರು. ನೀನ ತಂದಿ, ನೀನ ಕೂಡಲಸಂಗಯ್ಯ...' ಶೀಲವಂತ ನೆಲದ ಮ್ಯಾಲ ಮಕ್ಕಂಡಿದ್ದ ಚೆನ್ನನ ಮ್ಯಾಲ ಕೈಯಾಡಿಸುತ್ತ ನೆಲದ ಮ್ಯಾಲ ಕೈಯ ಬೆರಳಿಂದಲೇ ಕಾಣದ ಚಿತ್ರ ಬರೆಯತೊಡಗಿದ. 'ಅಯ್ ಹಡದಪ್ಪ ನಿನ್ನಿ ಮಧ್ಯಾಹ್ನ ಚಿತ್ರ ಬರಿದಿದ್ದೆಲ್ಲ. ಆ ಚಿತ್ರದಾಗ ಎಲ್ಡು ಹುಡಗ್ರು ದೂರ ನಿಂತಿದ್ರಲ್ಲ, ಮತ್ತೊಂದು ಹುಡುಗ ಹಣ್ಣು ಕೊಡಾಕ ಹೋಗಿದ್ನಲ್ಲ, ಅದ್ಕ ಆ ಚಿತ್ರ ಬರ್ದೇನು? ಆದ್ರೂ ಅವ್ರು ದೊಡ್ಡೋರ ಮಕ್ಳು. ಅಂಥವರ ಬಗ್ಗಿ ಹೀಂಗ ಮಾತಾಡಬಾರ್ದು...' ಕಲ್ಯಾಣಮ್ಮ ಹೊರಸಿನ ಮ್ಯಾಲಿಂದ ಬಗ್ಗಿ ಮಗನ ತಲೆ ನೇವರಿಸಿದಳು. 'ನಮ್ಗ ಬಸ್ವಣ್ಣಪ್ಪನೋರಲ್ಲನು ಇಷ್ಟು ಗೌರವದಿಂದ ಬದುಕಾಕ ಕಲ್ಸಿಕೊಟ್ಟೋರು? ಕಾಯಕವೇ ಕೈಲಾಸ ಅಂತ ಹೇಳಿದೋರು? ಎಲ್ಲ ಶರಣ್ರು ಸಂಗಮನಾಥನ ಸಮಾನ್ರು ಅಂತ ಹೇಳಿದ್ದು. ಅವ್ರು ನಮ್ಮಂಥೋರ ಬಾಳ ಬೆಳಗಿದ ದಿವ್ಯ ಜ್ಯೋತಿ...' ಹರಳಯ್ಯ ಮಗನತ್ತ ನೋಡುತ್ತ ಹೇಳಿದ.

'ಅಷ್ಟ ಅಲ್ಲ, ಹೆಣ್ಮಕ್ಳು-ಗಣಮಕ್ಳು ಸಮಾನ ಅಂತ ಹೇಳ್ಯಾನ ಬಸ್ವಣ್ಣಪ್ಪ, ಸಮಾನತೆಯ ಕ್ರಾಂತಿ ಮಾಡ್ಯಾನ. ನುಡಿದಂಗ ನಡದಾನ. ಅಂಥೋರ ಬಗ್ಗಿ ಹಂಗ ಮಾತಾಡಬಾರ್ದು, ತಪ್ಪಾತಿ ಅಂತ ಬೇಡಿಕೊಂಡು ಬುಡು ಹಡದಪ್ಪ...' ಕಲ್ಯಾಣಮ್ಮ ಮಗನಿಗೆ ಆನಿಕೊಂಡೇ ಕೆಳಗ ಕುಂತಳು. ಶೀಲವಂತ ತಲಿ ಎತ್ತಿ ಮಾತಾಡ್ಲಿಲ್ಲ, ತಾಯಿಯ ತೊಡಿಮ್ಯಾಲ ತಲಿಯಿಟ್ಟು ತಿಳಿ ಕಪ್ಪನು ಬಟ್ಟ ಹಾಸಿದಂತೆ ಕಂಡ ಆಕಾಶದತ್ತ ನೋಡಿದ. 'ಇನ್ನೊಂದು ಅರ್ಧ ತಾಸಿಗೆ ಬೆಳಕು ಹರಿಯುತ್ತ, ಸೊಲುಪು ಅದ್ಯಾಗು ಮಾರಾಯ. ಬೇಸನಕ ಬರೀ ಹಿರೇಸಾಟಗ ಆತಿ. ನಿದ್ದಿ ಮಾಡಿಲ್ಲ ನೀ' ಕಲ್ಯಾಣಮ್ಮ ಗಂಡನನ್ನೇ ದುರುಗುಟ್ಟಿ ನೋಡಿದಳು. 'ಹಂಗಲ್ಲ ಕಲ್ಯಾಣಿ, ಬಸ್ವಣ್ಣಪ್ಪ ನಾ ಏನಾದ್ರೂ ಸೇವಾ ಮಾಡ್ಬಕು. ನಾ

ಅಂದುಕೊಂಡಿದ್ದನ್ನ ಮಾಡ್ಬಕು' ಹರಳಯ್ಯ ಮತ್ತೆ ಬಡಬಡಿಸುತ್ತ ಹೊರಸಿನ ಮ್ಯಾಲ ಉದ್ದೂಕ ಕಾಲುಚಾಚಿದ. ಚೆನ್ನಗ ಇವ್ರ ಕಾಟ ತಡಿಯಾಕ ಆಗ್ಲಿಲ್ಲೊ ಮೈಜಾಡಿಸುತ್ತ ಎದ್ದು ಜಾಲಿಗಿಡದ ಬುಡದಲ್ಲಿ ಮಕ್ಕಂಡ. ಕಲ್ಯಾಣಮ್ಮ ಮಗನ ಹೆಗಲಮ್ಯಾಲ ಕೈಹಾಕ್ಕೊಂಡು ಹೋಗಿ ಚಾಪೆ ಮ್ಯಾಲ ಮಕ್ಕಂಡಳು.

ಚೆನ್ನ ಕಾಲುಸುಟ್ಟ ಬೆಕ್ಕಿನಗತೆ ಅಕ್ಕದಿ ಇಕ್ಕದಿ ತಿರುಗಾಡುತ್ತ ಒಂದೇ ಸಮನ ಬೊಗಳತೊಡಗಿದ. ಹೊರಸಿನ ಸಮೀಪ ಬಂದು ಕುಂಯ್ಗುಟ್ಟಿದ. ಚಾಪೆ ಸನೇಕ ಹೋಗಿ 'ಬೌಂವ್' ಅಂತ ಒದರಿದ. ಪೂರ್ವದ ಕಡೆ ಆಗ್ಲೆ ಸೂರ್ಯ ಹುಟ್ಟಾಕಹತ್ತಿದ್ದ. ಜಾಲಿಗಿಡದಾಗಿನ ಗುಬ್ಬಿ, ಗೊರವಂಕ, ಕಾಗೆಗಳು ಮುಂಜಾನೆಯ ಸುಪ್ರಭಾತ ಹಾಡುತಿದ್ವು. ಮೂವರು ದಿಗ್ಗನೆ ಎದ್ದು ಕುಂತು ಕಣ್ಣು ತಿಕ್ಕಿಕೊಂಡ್ರು. 'ಇಷ್ಟು ತಡಮಾಡಿ ಎಂದೂ ಎದ್ದಿರ್ಲಿಲ್ಲ' ಅಂತ ಮನಸ್ಸಿನಲ್ಲೇ ತಮ್ಮನ್ನು ತಾವು ಬೈಯ್ಕೊಂಡ್ರು. ಕೈಯಲ್ಲಿ ಏನೋ ಹಿಡಿದು ರಾಜಭಟರು ಗುಡಿಸಲ ಸಮೀಪದ ಜಾಲಿಯ ಗಿಡದ ಮರೆಗೆ ಬರುವುದು ಕಾಣಿಸಿತು. ಹರಳಯ್ಯ ಕಲ್ಯಾಣಮ್ಮ ಗಾಬರಿಯಲ್ಲೇ ಹಾಸಿದ ಹಾಸಿಗೆಗಳನ್ನ ಕೈಯಿಂದಲೇ ಉಂಡೆಮಾಡಿ ಹೊರಸಿನ ಕೆಳಗೆ ದಬ್ಬಿದರು. 'ಬಸವರಸ ಏನ ಕಳಿಸಿರ್ಬಕು? ನನ್ನ ಕನಸಿನ್ಯಾಗ ಕಂಡಿದ್ದು ನಿಜವಾಗಿ ಬುಡ್ತದೋ ಏನೋ? ಬಸವರಸ ತಂದಿ...' ಹರಳಯ್ಯ ಎಲ್ಡೂ ಕೈಮುಗ್ದು ನಿಂತ. ಕಲ್ಯಾಣಮ್ಮ, ಶೀಲವಂತ ರಾಜಭಟರು ಸಮೀಪ ಬರುತ್ತಿದ್ದುದನ್ನೇ ತದೇಕ ಚಿತ್ತದಿಂದ ದಿಟ್ಟಿಸಿದರು. ಸೂರ್ಯನ ಬಂಗಾರದ ಕಿರಣಗಳು ಅಂಗಳದ ಮ್ಯಾಲ ರೇಷ್ಮೆ ಸೀರೆ ಹಾಸಿದವು. 'ಶರಣ ಹರಳಯ್ಯ ಬಿಜ್ಜಳ ಮಹಾಪ್ರಭುಗಳ ಅರಮನ್ಯಾಗ ಇದ ಬರೋ ಹುಣ್ಣಿಮಿಗಿ ಮಂಗಳ ಕಾರ್ಯ ನಡಿತೈತಂತ. ಮಧುಮಕ್ಕಳಿಗೆ ಭಾಳ ಚೆಂದದ ಚಮ್ಮಾವುಗೆ ಮಾಡಿಕೊಡ್ಬಕು ಅಂತ ರಾಜರ ಅಪ್ಪಣೆ ಆಗೈತಿ...' ಹೊರಸಿನ ಮ್ಯಾಲ ತಾವು ತಂದಿದ್ದ ಬಟ್ಟೆ, ಬರೆ, ಪಡಿ ಪದಾರ್ಥ ಇಟ್ಟು ಮತ್ತೆ ಅರಮನೆಯತ್ತ ನಡೆದರು. ಹರಳಯ್ಯಗ ಹೋದ ಜೀವ ಸಟಕ್ಕನ ಬಂದಂಗ ಅನಿಸಿತು.

ಬೆಳಗಿನ ಮುಖ ಮಜ್ಜನ ಮುಗಿಸಿದ ಹರಳಯ್ಯ ಹಣೆಮ್ಯಾಲ ಢಾಳಾಗಿ ಮೂರು ಬಳ್ಳು ವಿಭೂತಿ ಹಚ್ಚಿದ. 'ಬಸವ... ಬಸವ...' ಎನ್ನುತ್ತಲೇ ಬಂದ. ಚೆನ್ನ ಬಾಲ ಅಲ್ಲಾಡಿಸುತ್ತ ಈಶ್ವರಲಿಂಗದ ಎದುರು ಬಸ್ವಣ್ಣನಗತೆ ಉದ್ದೂಕ ನಾಲಿಗೆ ಚಾಚಿ ಮುಂಗಾಲು ಊರಿ ಕುಂತ. 'ಅಯ್ಯ ನನ ಹಡದ ಚೆನ್ನ, ನಿನಗ ಏನನ ತಿನ್ನಾಕ ಹಾಕೋದನ್ನ ಇವತ್ತು ಮರ್ತುಬುಟ್ಟೆ' ತನ್ನಷ್ಟಕ್ಕೆ ಅಂದೆ ಅಂತ ತಿಳಕಂಡ. ಶೀಲವಂತನ ಕಿವಿಗೆ ಅದ್ದೆಂಗ ಬಿತ್ತೊ, ಕೈಯಲ್ಲಿ ಹಿಡಿದ ಕುಂಚವನ್ನ ಕೆಂಪು ಬಣ್ಣದಲ್ಲಿ ಅದ್ದುತ್ತ ಮಾತಾಡಿದ. 'ನಿನಗ ಬಿಜ್ಜಳನ ಆಜ್ಞೆ ಆದಮ್ಯಾಲ, ಆತನ ಪಡಿ ಪದಾರ್ಥ ಬಂದ ಮ್ಯಾಲ ಮುಗೀತಿ. ನನ್ನ ಅವ್ವನ್ನ ಮರ್ತುಬುಡ್ತಿ ಇನ್ನ ಈ ಮೂಕಪ್ರಾಣಿ ಯಾವ ಲೆಕ್ಕ?' ಕಾಲು ಹಿಂದಕ್ಕ ಚಾಚಿ, ಬೆನ್ನು ಬಗ್ಗಿಸಿ ಚಿತ್ರ ಬರೆಯತೊಡಗಿದ್ದ. 'ಚೆನ್ನನಿಗೆ ಹಾಕಲೆಂದು ಕಲ್ಯಾಣಮ್ಮನೇ ನವಣೆ ಅನ್ನದ ಕಣ್ಣೆಯನ್ನು ಹಿಡಿದು ಹೊರಬಂದಳು. ಕುರುಪಿ, ಇಕ್ಕ, ಮೊಳೆ, ಕೊಡತಿ, ಮಸೆಗಲ್ಲು ಕಟ್ಟಿಗಿ, ಚರ್ಮದ ನಾಲ್ಕಾರು ತುಣುಕುಗಳ ಮಧ್ಯೆ ಎದ್ದೇಳುವಂಗ ತುದಿಗುಂಡಿಲೆ ಕುಂತ ಗಂಡನನ್ನ ನೋಡಿದಳು. 'ಅಯ್ ಮಾರಾಯ, ರಾಜನ ಮನ್ಯಾಗ ಲಗ್ನ ಇರೋದು ಇನ್ನಾ ಹದಿನೈದು ದಿನಕ್ಕ. ಇವತ್ತು ಮಧ್ಯಾಹ್ನನ ತಾಳಿ ಕಟ್ತಾರ ಅಂಬಂಗ ಕುಂಡಿ ನೆಲಕ್ಕ ಹಚ್ಚಕುಂತ್ರ ಎಲ್ಲಿ ತಡ ಆಗುತ್ತಂತ ತುದಿಗುಂಡಿಲೆ ಕುಂತೀಯಲ್ಲ? ಅವಸರ ಮಾಡ್ಬಾಡ. ಮೊದ್ಲಾ ಮಾರಾಜ್ರು ಅಂದಚೆಂದದ ಚಮ್ಮಾವುಗೆ ಬೇಕಂತ ಹೇಳಿ ಕಳಿಸ್ಯಾರ. ಮೈಮ್ಯಾಲ ಗ್ನಾನ ಇಟಗಂಡು ಚಮ್ಮಾವುಗೆ ಮಾಡು' ಚೆನ್ನನಿಗೆಂದೇ ಇಟ್ಟಿದ್ದ ಬಟ್ಟಲಲ್ಲಿ ಅನ್ನದ ಕಣ್ಣೆಹಾಕಿ, 'ಕುರ್ರ್ಯೋ... ಕುರ್ರ್ಯೋ... ಚೆನ್ನ ಬಾ...' ಅಂತ ಕರೆದಳು. 'ಹಿಂದಾಗಡೆ ಹೋಗಿ ಬಸ್ವಣ್ಣಪ್ಪಗ ಶರಣು ಶರಣಾರ್ಥಿ ಅಂತ ಹೇಳಿ ಆತನ ಭಾರಾನ ಇಳಿಸಿಬುಡಮು. ನೀ ಚಿಂತಿ ಮಾಡಬ್ಯಾಡ ಮಾರಾಯ' ಗಂಡನಿಗೆ ಎಚ್ಚರಿಸುತ್ತ ಒಳಹೋದಳು.

ಶೀಲವಂತ ಅಪ್ಪನನ್ನೇ ಕೆಲ ಹೊತ್ತು ದಿಟ್ಟಿಸಿನೋಡಿ, ತಲೆತಗ್ಗಿಸಿ ಚಿತ್ರ ಬರೆಯುವಲ್ಲೇ ತಲ್ಲೀನನಾದ. ಚೆನ್ನ ಅರ್ಧಮರ್ಧ ತಿಂದು ಜಾಲಿಗಿಡದತ್ತ ಓಡಿದ. ಹಮ್ಮೊಂದು ಗುಬ್ಬೀನ ಕಚ್ಚಿಹಿಡಿಯಲು ಹೋಗಿ ಕೊಸ್ಕಿ ಜಾರಿ ಕೆಳಗ ಬೀಳಿಸಿತು. ತನ್ನ ಮುಂಗಾಲಿನಿಂದ ಗುಬ್ಬೀನ ಚೆನ್ನ ಅತ್ತಿತ್ತ ತೊರಳಿಸಿದ. ಅದರ ಎದಿಗಿ ಮೂತಿ ಇಟ್ಟು ರಮಿಸಿದ. ಗುಬ್ಬಿ ಹಿಂದು ಕಟಾಕಟಾ ...

▶▶ 12

ಹೈದರಾಬಾದ್ ಕರ್ನಾಟಕ ವಿಶೇಷಾಂಕ

371 (ಜೆ) ಮಸೂದೆಗೆ ರಾಷ್ಟ್ರಪತಿ ಅಂಗೀಕಾರ ದೊರೆತ ತಕ್ಷಣ ಹೈ-ಕದ ಕೆಲವೆಡೆ ಸಂಭ್ರಮಾಚರಣೆ ನಡೆಯಿತು. ಹೀಗೆ ಸಂಭ್ರಮಿಸಿದವರಲ್ಲಿ ಸ್ಥಳೀಯ ರಾಜಕಾರಣಿಗಳು ಮತ್ತು ಪ್ರಭಾವಿ ರಾಜಕೀಯ ನಾಯಕರ ಹಿಂಬಾಲಕರು, ಕಾಂಟ್ರಾಕ್ಟ್‌ದಾರ ಎಂಜಿನಿಯರುಗಳು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು, ಮಧ್ಯಮವರ್ಗದವರು, 371 (ಜೆ) ಮಸೂದೆ ಜಾರಿಗಾಗಿ ಹೋರಾಟ ನಡೆಸಿದ ಕೆಲವರಿದ್ದರು. ಗ್ರಾಮೀಣ ಪ್ರದೇಶದ ರೈತರು, ಅನಕ್ಷರಸ್ಥರು, ಮಹಿಳೆಯರು, ಬಡ ಜನರು, ಕೃಷಿಕರು, ಕೂಲಿಗಳು, ಅಲ್ಪಸಂಖ್ಯಾತ ಧರ್ಮೀಯರು, ಕೆಳವರ್ಗ ಮತ್ತು ದಲಿತರು ಹೆಚ್ಚಾಗಿ ಈ ಸಂಭ್ರಮದಲ್ಲಿ ಪಾಲ್ಗೊಂಡಂತೆ ಕಾಣುತ್ತಿರಲಿಲ್ಲ.

371(ಜೆ)ಎಂಬ ಮಂತ್ರದಂಡದ ಭ್ರಮೆ ಮತ್ತು ವಾಸ್ತವ

ಈಚೆಗೆ 371 (ಜೆ) ಸಂವಿಧಾನದ ಮಾನ್ಯತೆ ದೊರೆತ ನಂತರ ಹೈದರಾಬಾದ್ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿಯೂ ವಿಚಿತ್ರ ತೆರನಾದ ಕಥೆಗಳು ಹುಟ್ಟುತ್ತಿವೆ. ಇದು ಒಂದು ಬಗೆಯ ಜಾನಪದದ ಸ್ವರೂಪವನ್ನು ಪಡೆಯುತ್ತಿದೆ. ಈ ಮಾತುಕತೆಗಳನ್ನು ನೋಡಿದರೆ ಜನಪದ ಕಥೆಯಗಳಲ್ಲಿ ಘಟಿಸುವಂತೆ, ದೇವಲೋಕದಿಂದ 371 (ಜೆ) ಎಂಬ ಮಂತ್ರದಂಡವೊಂದು ಉದುರಿಬಿಟ್ಟಿದೆ, ಆ ಮಂತ್ರದಂಡದಿಂದ ನಾವು ಮುಟ್ಟಿದ್ದೆಲ್ಲಾ ಬಂಗಾರವಾಗುತ್ತದೆ ಎನ್ನುವ ಭ್ರಮೆಗಳು ತೇಲಾಡುತ್ತಿವೆ. ಈ ಭಾಗದಲ್ಲಿ ಓದಿದವರಿಗೆಲ್ಲಾ ಕೆಲಸ ಸಿಗುತ್ತಂತೆ, ಇನ್ನು ಮುಂದೆ ಕಷ್ಟವೇ ಇರುವುದಿಲ್ಲವಂತೆ, ರೈತರಿಗೆ ಲಕ್ಷಗಟ್ಟಲೆ ಸಾಲ ಸಿಗುತ್ತಂತೆ, ಹೀಗೆ ಸಾಲುಗಟ್ಟುವ ಮಾತುಗಳು ಹೈದರಾಬಾದ್ ಕರ್ನಾಟಕ ಸ್ವರ್ಗದ ಸಿದ್ಧತೆಯಲ್ಲಿದೆ ಎನ್ನುವಲ್ಲಿಗೆ ಮುಟ್ಟುತ್ತವೆ. ಅನಕ್ಷರಸ್ಥರೂ 'ಅದೇನೋ ಬಂದಾತಂತೆ, ನಾವೆಲ್ಲಾ ಉದ್ಧಾರಾಗ್ತೀವಂತೆ' ಮುಂತಾಗಿ ಮಾತನಾಡತೊಡಗಿದ್ದಾರೆ. ಅರೆವಿದ್ಯಾವಂತರೂ ಕೂಡ ನಮಗೂ ಕೆಲಸ ಸಿಕ್ಕೀತು ಎನ್ನುವ ಆಸೆಗಣ್ಣುಗಳಿಂದ ನೋಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎಂದರೆ ಶಾಲೆ ಬಿಡಿಸಿ ಮನೆ ಕೆಲಸಕ್ಕೆ ತೊಡಗಿಸಿಕೊಂಡ ಕೆಲವು ಮಕ್ಕಳನ್ನು ಮತ್ತೆ ಶಾಲೆಗೆ ಕಳಿಸತೊಡಗಿದ್ದಾರೆ.


371 (ಜೆ) ಮಸೂದೆಗೆ ರಾಷ್ಟ್ರಪತಿ ಅಂಗೀಕಾರ ದೊರೆತ ತಕ್ಷಣ ಹೈ-ಕದ ಕೆಲವೆಡೆ ಸಂಭ್ರಮಾಚರಣೆ ನಡೆಯಿತು. ಈ ಸಂಭ್ರಮಾಚರಣೆಯ ಟಿ.ವಿಯ ದೃಶ್ಯಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ಚಿತ್ರಗಳನ್ನು ಗಮನಿಸಿದರೆ ಒಂದಂಶ ಸ್ಪಷ್ಟವಾಗುತ್ತಿತ್ತು, ಹೀಗೆ ಸಂಭ್ರಮಿಸಿದವರಲ್ಲಿ ಸ್ಥಳೀಯ ರಾಜಕಾರಣಿಗಳು ಮತ್ತು ಪ್ರಭಾವಿ ರಾಜಕೀಯ ನಾಯಕರ ಹಿಂಬಾಲಕರು, ಕಾಂಟ್ರಾಕ್ಟ್‌ದಾರ ಎಂಜಿನಿಯರುಗಳು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು, ಮಧ್ಯಮವರ್ಗದವರು, 371 (ಜೆ) ಮಸೂದೆ ಜಾರಿಗಾಗಿ ಹೋರಾಟ ನಡೆಸಿದ ಕೆಲವರಿದ್ದರು. ಇವರಲ್ಲಿ ಬಹುಪಾಲು ಶಿಕ್ಷಿತರು ಮತ್ತು ಪುರುಷರು. ಅಂತೆಯೇ ನಗರ ಕೇಂದ್ರಿತ ಜನರು. ಉಳಿದಂತೆ ಗ್ರಾಮೀಣ ಪ್ರದೇಶದ ರೈತರು, ಅನಕ್ಷರಸ್ಥರು, ಮಹಿಳೆಯರು, ಬಡ ಜನರು, ಕೃಷಿಕರು, ಕೂಲಿಗಳು, ಅಲ್ಪಸಂಖ್ಯಾತ ಧರ್ಮೀಯರು, ಕೆಳವರ್ಗ ಮತ್ತು ದಲಿತರು ಹೆಚ್ಚಾಗಿ ಈ ಸಂಭ್ರಮದಲ್ಲಿ ಪಾಲ್ಗೊಂಡಂತೆ ಕಾಣುತ್ತಿರಲಿಲ್ಲ, ಹಾಗೆ ನೋಡಿದರೆ ನಿಜಕ್ಕೂ ಸಂಭ್ರಮ ಪಡಬೇಕಾದವರು ಇವರೇ ಆಗಿದ್ದರೂ ಅದೇಕೋ ಸಂಭ್ರಮದಿಂದ ದೂರವಿದ್ದರು. ಇಂತಹದ್ದೊಂದು ಚಿತ್ರ 371 (ಜೆ) ಯಾರಿಗೆ ಹೆಚ್ಚು ಲಾಭ? ಯಾರಿಗೆ ನಿಲುಕದ ನಕ್ಷತ್ರ ಎನ್ನುವುದರ ಭವಿಷ್ಯ ನುಡಿವ ರೂಪಕದಂತೆ ಕಾಣುತ್ತದೆ.

371 (ಜೆ) ಸೌಲಭ್ಯದ ಪರಿಣಾಮಕಾರಿ ಉಪಯೋಗ ಪಡೆಯಲು, ಅನುಷ್ಠಾನದ ವೈಜ್ಞಾನಿಕ ಚೌಕಟ್ಟನ್ನು ರೂಪಿಸಲು ಆರಂಭದಲ್ಲಿ ಮೂರು ಬಗೆಯ ಅಧ್ಯಯನಗಳು ಅಗತ್ಯವಾಗಿ ನಡೆಯಬೇಕಾಗಿದೆ. ಮೊದಲನೆಯದಾಗಿ, ಸಂವಿಧಾನದ 371ನೇ ಕಲಂ ತಿದ್ದುಪಡಿ ಮಾಡಿ ಮೊದಲ ಬಾರಿಗೆ ವಿಶೇಷ ಸೌಲಭ್ಯ ಪಡೆದ ಮಹಾರಾಷ್ಟ್ರದ ಮರಾಠವಾಡಾ-ವಿದರ್ಭ ಮತ್ತು ಗುಜರಾತಿನ ಸೌರಾಷ್ಟ್ರ-ಕಚ್ ಪ್ರದೇಶಗಳನ್ನು ಅಧ್ಯಯನ ಮಾಡಬೇಕಾಗಿದೆ. ಅಂತೆಯೇ ಈ ನೆಲೆಯಲ್ಲಿ ವಿಶೇಷ ಸೌಲಭ್ಯಗಳನ್ನು ಪಡೆದ ನಾಗಾಲ್ಯಾಂಡ್ 371 (ಎ), ಅಸ್ಸಾಂ 371 (ಬಿ), ಮಣಿಪುರ 371 (ಸಿ), ಆಂಧ್ರಪ್ರದೇಶ 371 (ಡಿ) (ಇ), ಸಿಕ್ಕಿಂ 371 (ಎಫ್), ಮಿಜೋರಾಂ 371 (ಜಿ), ಅರುಣಾಚಲ ಪ್ರದೇಶ 371 (ಎಚ್), ಗೋವಾ 371 (ಐ) ಪ್ರದೇಶಗಳನ್ನು ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ.

ಈ ಪ್ರದೇಶಗಳೂ ನಮ್ಮ ಹಾಗೆಯೇ ವಿಶೇಷ ಸೌಲಭ್ಯ ಸಿಕ್ಕ ಬಗ್ಗೆ ಸಂಭ್ರಮಿಸಿದ್ದವು. ಆದರೆ ಆ ಯೋಜನೆಯ ಭಾಗವಾಗಿ, ನೂರಾರು ಕೋಟಿಗಳು ಹರಿದು ಬಂದಿರುವುದನ್ನು ಬಿಟ್ಟರೆ, ಅದಕ್ಕೆ ಪೂರಕವಾಗಿ ಅಭಿವೃದ್ಧಿಯಾಗದೆ ಮೂಲ ಸ್ಥಿತಿ ಒಂದಷ್ಟು ಬದಲಾವಣೆಯೊಂದಿಗೆ ಮುಂದುವರಿಯುತ್ತಿದೆ. 371 (ಡಿ) (ಇ) ವಿಶೇಷ ಸೌಲಭ್ಯ ಸಿಕ್ಕಾಗಲೂ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಿದ್ದರೆ, ಆಂಧ್ರ ಪ್ರದೇಶದ ತೆಲಂಗಾಣ ಪ್ರತ್ಯೇಕ ರಾಜ್ಯದ ಅಗತ್ಯವಾದರೂ ಏನಿತ್ತು? ಹಾಗಾಗಿ ವಿಶೇಷ ಸೌಲಭ್ಯಕ್ಕಿಂತ ಮುಂಚೆ ಈ ಪ್ರದೇಶಗಳ ಅಭಿವೃದ್ಧಿ ಸೂಚ್ಯಾಂಕಕ್ಕೂ ಈಗಿನ ಅಭಿವೃದ್ಧಿ ಸೂಚ್ಯಾಂಕಕ್ಕೂ ಇರುವ ಅಂತರವನ್ನು ಗಮನಿಸಬೇಕಾಗಿದೆ. ಇಲ್ಲಿ ಯಾವ ಯೋಜನೆಗಳು ಫಲಕಂಡಿವೆ, ನಿಜಕ್ಕೂ ಈ ವಿಶೇಷ ಸೌಲಭ್ಯಗಳಿಂದ ವಾಸ್ತವದಲ್ಲಿ ಲಾಭ ಪಡೆದವರಾರು, ಸರಕಾರಿ ಅಂಕಿಅಂಶಗಳಲ್ಲಿ ಕೋರೈಸುವ ಅಭಿವೃದ್ಧಿಗಿಂತ, ವಾಸ್ತವದಲ್ಲಿ ಆ ಅಭಿವೃದ್ಧಿಯ ಚಿತ್ರ ಹೇಗಿದೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ. ವಿಶೇಷ ಸೌಲಭ್ಯದ ಉಪಯೋಗದ ಬಗ್ಗೆ ಜನಾಭಿಪ್ರಾಯಗಳನ್ನು ಸಂಗ್ರಹಿಸಬೇಕಿದೆ.

ಎರಡನೆಯದಾಗಿ ಹೈ-ಕ ಪ್ರದೇಶಾಭಿವೃದ್ಧಿ ಮಂಡಳಿಯು ಈ ಭಾಗದ ಅಭಿವೃದ್ಧಿಗಾಗಿ ಏನೇನು ಮಾಡಿದೆ? ಅದರ ಫಲಿತಗಳೇನು? ಅದರ ಸ್ವರೂಪದಲ್ಲಿರುವ ತೊಡಕುಗಳಾವುವು? ಮುಂತಾದವುಗಳ ಬಗ್ಗೆ ಅಧ್ಯಯನ ಮಾಡಬೇಕಿದೆ. ಗುಲ್ಬರ್ಗಾದಿಂದ ಲೋಕಸಭೆಗೆ ಗೆದ್ದು ಬಂದ ಕೇರಳದ ಸ್ಟೀಫನ್ ಅವರು ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದಾಗ, ಧರ್ಮಸಿಂಗ್ ನೇತೃತ್ವದಲ್ಲಿ 1991ರಲ್ಲಿ ಹೈ-ಕ ಪ್ರದೇಶಾಭಿವೃದ್ಧಿ ಮಂಡಳಿ ರಚನೆಯಾಗಲು ಕಾರಣವಾದರು. ಈ ಮಂಡಳಿ ರಚನೆಯಾಗಿ 23 ವರ್ಷಗಳಾಗುತ್ತಿವೆ. ಈತನಕ 992 ಕೋಟಿ ರೂಪಾಯಿಗಳನ್ನು ಸರಕಾರ ಈ ಮಂಡಳಿಗೆ ಒದಗಿಸಿದೆ. ಮಂಡಳಿಯೂ ಅಭಿವೃದ್ಧಿಯ ಹೆಸರಲ್ಲಿ ಈ ಹಣದ ಖರ್ಚನ್ನು ತೋರಿಸುತ್ತಿದೆ. ಆದಾಗ್ಯೂ ಈ ಮಂಡಳಿಯು ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವಲ್ಲಿ ವಿಫಲವಾದ ಕಾರಣ 2000ರಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮಾನತೆಯ ಅಧ್ಯಯನಕ್ಕಾಗಿ ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು 2002 ರಲ್ಲಿ ವರದಿಯನ್ನು ಸಲ್ಲಿಸಿದ್ದು, ಈ ವರದಿಯ ಪ್ರಮುಖ ಶಿಫಾರಸ್ಸುಗಳನ್ನು ಒಪ್ಪಿ 2007-08 ರಲ್ಲಿ ಸರಕಾರ ಜಾರಿಗೊಳಿಸಿದ್ದನ್ನು ಗಮನಿಸಬೇಕು.

ವಸ್ತು ಸ್ಥಿತಿ ಹೀಗಿರುವಾಗ ಹೈ-ಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಬಗೆಗೆ ಜನಾಭಿಪ್ರಾಯವೇನಿದೆ? ಮಂಡಳಿಯ ಹಣ ಸದುಪಯೋಗವಾಗಿದೆಯೇ? ಈ ಹಣ ಖರ್ಚು ಮಾಡಲು ಮಂಡಳಿ ರೂಪಿಸಿದ ಯೋಜನೆಗಳ ಸ್ವರೂಪ ಯಾವುದು? ಈ ಸ್ವರೂಪ ಹೈದರಾಬಾದ್ ಕರ್ನಾಟಕದ ಸಮಸ್ಯೆಗಳ ಒಡಲೊಳಗಿಂದ ರೂಪುಗೊಂಡಿದೆಯೇ? ಈ ಮಂಡಳಿಗೆ ಸ್ವಾಯತ್ತ ಅಧಿಕಾರವಿದೆಯೇ? ಮುಂತಾದವುಗಳ ಬಗ್ಗೆ ವಿಮರ್ಶಾತ್ಮಕವಾದ ಅಧ್ಯಯನ ಮಾಡಬೇಕಿದೆ. ಕಾರಣ ಈ ಮಂಡಳಿಯಲ್ಲಿರುವ ಮಿತಿಗಳೇ 371 (ಜೆ) ಅನುಷ್ಠಾನದಲ್ಲೂ ಮುಂದುವರೆಯುವ ಅಪಾಯವೂ ಇದೆ.



ಮೂರನೆಯದಾಗಿ ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳನ್ನು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಈ ಅಧ್ಯಯನದಲ್ಲಿ ಮೂಲಭೂತ ಸೌಕರ್ಯಗಳ ಸ್ಥಿತಿಗತಿ, ಜಾತಿಗಣನೆ, ಶಿಕ್ಷಣದ ಪ್ರಮಾಣ, ಕೃಷಿಯ ವಾಸ್ತವ ಸ್ಥಿತಿ, ಸಂಪತ್ತಿನ ಅಸಮಾನ ಹಂಚಿಕೆಯ ಸ್ವರೂಪ, ಶೈಕ್ಷಣಿಕ ಸಂಸ್ಥೆಗಳ ಸ್ಥಿತಿಗತಿ, ಗ್ರಾಮೀಣ ಭಾಗದ ಸಮಸ್ಯೆಯ ಹೊಸ ರೂಪಗಳು, ನಿರುದ್ಯೋಗ ಸಮಸ್ಯೆ, ಕೆಳಜಾತಿಗಳ ಮತ್ತು ದಲಿತ ಸಮುದಾಯಗಳ ವರ್ತಮಾನದ ಸ್ಥಿತಿ, ಮಹಿಳೆಯರ ಮಕ್ಕಳ ಸಮಸ್ಯೆಗಳ ಸ್ವರೂಪ. ಮುಂತಾದ ಸೂಕ್ಷ್ಮ ಸಂಗತಿಗಳನ್ನು ಕುರಿತು ಅಧ್ಯಯನ ಮಾಡಬೇಕಾಗಿದೆ. ಈ ಅಧ್ಯಯನದ ಫಲಿತಗಳನ್ನು ಈ ಭಾಗದ ಜನಪ್ರತಿನಿಧಿಗಳಿಗೆ ಅರ್ಥಮಾಡಿಸಬೇಕಾಗಿದೆ. ಅಂತೆಯೇ ನಂಜುಂಡಪ್ಪ ಅವರ ವರದಿಗೆ 12 ವರ್ಷವಾಗುತ್ತಿದೆ. ಒಂದು ದಶಕದ ಬದಲಾವಣೆಗಳು ಈ ವರದಿಯಿಂದ ಹೊರಗಿವೆ. ಹಾಗಾಗಿ ಈ ವರದಿಯನ್ನು ಆಧರಿಸಿ ಪುನರ್ ಅಧ್ಯಯನ ಮಾಡುವುದು ಕೂಡ ಅವಶ್ಯಕವಾಗಿದೆ. ಕಾರಣ ನಂಜುಂಡಪ್ಪ ವರದಿಗೆ ನಿಷ್ಠವಾಗಿ 371 (ಜೆ)ಯನ್ನು ಜಾರಿಗೊಳಿಸಿದಾಗಲೂ ಅದು ಒಂದು ದಶಕದ ಹಿಂದಿನ ಹೈ-ಕವನ್ನು ಪ್ರತಿನಿಧಿಸುತ್ತದೆಯೇ ವಿನಃ ಸದ್ಯದ ಹೈ-ಕವನ್ನಲ್ಲ ಎನ್ನುವ ಸೂಕ್ಷ್ಮತೆಯನ್ನು ಅರಿಯಬೇಕಿದೆ.

ಮೊದಲನೆ ಅಧ್ಯಯನದ ಫಲಿತಗಳನ್ನಿಟ್ಟುಕೊಂಡು ಹೈ-ಕ ಸಂದರ್ಭದಲ್ಲಿ 371 (ಜೆ) ಸೌಲಭ್ಯವನ್ನು ಹೇಗೆ ವಿಸ್ತರಿಸಬೇಕು? ಹೈ-ಕ ಪ್ರದೇಶಕ್ಕೆ ವಿಶಿಷ್ಟವಾಗಿರುವ ಸಮಸ್ಯೆಗಳಾವುವು? ಈ ಸಮಸ್ಯೆಗಳನ್ನು ಬಗೆಹರಿಸಲು 371 (ಜೆ) ಕಾಲಂ ಸ್ವರೂಪದಲ್ಲಿ ಮಾಡಬೇಕಾದ ಬದಲಾವಣೆಗಳಾವುವು? ಮುಂತಾದವುಗಳ ಬಗ್ಗೆ ಖಚಿತಪಡಿಸಿಕೊಳ್ಳಬೇಕಾಗಿದೆ. ಎರಡನೆಯ ಅಧ್ಯಯನದ ಫಲಿತಗಳ ಆಧಾರದಲ್ಲಿ ಹೈ-ಕ ಅಭಿವೃದ್ಧಿ ಮಂಡಳಿಗಿಂತ ಭಿನ್ನವಾಗಿ 371 (ಜೆ) ಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಚಿಂತನೆ ಮಾಡಬೇಕಿದೆ. ಮೂರನೆಯ ಅಧ್ಯಯನದ ಫಲಿತಗಳನ್ನು ಆಧರಿಸಿ ಜನಸಾಮಾನ್ಯರಿಗೆ 371 (ಜೆ) ಬಗೆಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕಾಗಿದೆ. ಈ ಮೂರು ಅಧ್ಯಯನಗಳ ಫಲಿತಗಳನ್ನಾಧರಿಸಿ 371 (ಜೆ) ಅನುಷ್ಠಾನದ ಯೋಜನೆಗಳನ್ನು ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹೈ-ಕದ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವೊಂದನ್ನು ಶಾಶ್ವತವಾಗಿ ಸ್ಥಾಪಿಸಬೇಕಿದೆ. ಆರಂಭದಲ್ಲಿ ಈ ಜವಾಬ್ದಾರಿಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಿದರೂ ಆಗುತ್ತದೆ. ಈ ಸಂಸ್ಥೆ ಮಾಡುವ ಶಿಫಾರಸ್ಸಿನ ಅನ್ವಯವಾಗಿ 371 (ಜೆ) ಸೌಲಭ್ಯದ ಯೋಜನೆಗಳನ್ನು ರೂಪಿಸಬೇಕಾಗಿದೆ.

371 (ಜೆ) ಕಲಮಿನನ್ವಯ ಅಸ್ತಿತ್ವಕ್ಕೆ ಬರಲಿರುವ ಹೈ-ಕ ವಿಶೇಷ ಅಭಿವೃದ್ಧಿ ಮಂಡಳಿ ಮಹಾರಾಷ್ಟ್ರ ಮಾದರಿಯದು, ರಾಜ್ಯ ಸರಕಾರದ ಹುದ್ದೆಗಳ ಒಂದು ಭಾಗದ ಮೀಸಲಾತಿಯು ತೆಲಂಗಾಣ ಮಾದರಿಯಿಂದ ಪ್ರೇರಿತವಾದುದು. ಇವುಗಳನ್ನು ಮೂಲದಂತೆಯೇ ಜಾರಿಗೊಳಿಸದೆ ಹೈ-ಕದ ಅಗತ್ಯಗಳಿಗೆ ಪೂರಕವಾಗಿ ಪುನರ್ ರಚನೆ ಮಾಡಬೇಕಿದೆ. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 371 (ಜೆ)ಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಾಗಿದೆ. ಈ ಮೂಲಕ 371 (ಜೆ) ಎಂಬ ಮಂತ್ರದಂಡವು ಹೈ-ಕ ಭಾಗದ ಜನಸಾಮಾನ್ಯರ ಸಮಸ್ಯೆಗಳನ್ನು ಆಲಿಸುವ ಹೃದಯವನ್ನು ಒಳಗೊಳ್ಳಬೇಕಾಗಿದೆ. ಹೀಗಲ್ಲದೆ ಹೋದರೆ 371 (ಜೆ) ಎನ್ನುವುದು ರಾಜಕಾರಣಿಗಳಿಗೆ, ಕಾಂಟ್ರಾಕ್ಟುದಾರರು ಮತ್ತು ಎಂಜಿನಿಯರುಗಳಿಗೆ, ಯೋಜನೆಗಳನ್ನು ಪೂರೈಸುವ ಸರಕಾರಿ ಇಲಾಖೆಗಳ ಅಧಿಕಾರಿಗಳಿಗೆ ಕಲ್ಪವೃಕ್ಷ ಕಾಮಧೇನುವಾಗುವುದರಲ್ಲಿ ಸಂಶಯವಿಲ್ಲ.



ಡಾ.ಅರುಣ್
ಜೋಳದಕೂಡ್ಲಿಗಿ

---

11 ⏮

ಧರಣಿ ಮಂಡಲ

ಮುತ್ತುಕೊಡುವಂಗ ಬಗ್ಗಿ ಮತ್ತೆ ಎರಡ್ಮೂರು ಸಲ ಅತ್ತಿತ್ತ ಹೊರಳಿಸಿದ. ಗುಬ್ಬಿ ನೆಲಬಟ್ಟು ಏಳಲಿಲ್ಲ, ಮೇಲಕ್ಕೆ ಹಾರಲಿಲ್ಲ, ತಲೆತಗ್ಗಿಸಿದ ಚೆನ್ನ ಬಾಲ ಮುದುರಿಕೊಂಡು ಕುಂಯ್ ಕುಂಯ್ ಅನ್ನುತ್ತ ಬಂದು ಹರಳಯ್ಯನ ಮುಂದ ಕುಂತ. ಸೂರ್ಯ ನಿಧಾನವಾಗಿ ಮೇಲೇರುತ್ತಿದ್ದ. ಹತ್ತಾರು ಶರಣರು ತಮ್ಮ ತಮ್ಮ ಕಾಯಕಕ್ಕೆ ಹೊಂಟಿದ್ರು. ಜಾಲಿಗಿಡದ ನೆರಳು ಕಿರಿದಾಗುತ್ತಿತ್ತು, ಸತ್ತ ಒಂಟಿ ಗುಬ್ಬಿಯ ಸಮೀಪ ಒಂದೆರಡು ಗುಬ್ಬಿಗಳು ಇನ್ನಾ ಕುಂತು ಅಡಿ ಅಡಿ ಅಳ್ತಿದ್ವು. ಕಲ್ಯಾಣಮ್ಮ ಮುಸುರಿ ನೀರನ್ನ ಚೆಲ್ಲಲು ಹೊರಬಂದಳು. ಮಗ, ಗಂಡನತ್ತ ಕಣ್ಣು ಕಿರಿದುಮಾಡಿ ನೋಡುತ್ತ ಕೈಯಲ್ಲಿದ್ದ ಮುಸುರಿ ನೀರಿದ್ದ ಪಾತ್ರೆಯೊಂದಿಗೆ ಗುಂಡಿನ ಕಡೆ ನಡೆದಳು. ನೀರು ಚೆಲ್ಲಿ ಗುಡಿಸಲಿನತ್ತ ಬಂದಳು. ಬಿಜ್ಜಳ ಮಹಾರಾಜ ಹೇಳಿದ್ದ ಚಮ್ಮಾವುಗೆ ಮಾಡಲು ತೊಗಲು ಕತ್ತರಿಸುತ್ತ ಹರಳಯ್ಯ ಕುಂತಿದ್ದ 'ಶರಣ್ರು ಅಂದ್ರನ ಹೀಂಗ. ಕಾಯಕದಾಗ ನಿರತರಾದ್ರ ಸಾಕು ಗುರು, ಲಿಂಗ, ಜಂಗಮದ ಹಂಗು ತೊರ್‍ದುಬಿಡ್ತಾರ...' ಪಿಸಿಪಿಸಿ ಅನ್ನುತ್ತ ಒಳಹೊರಟವಳ ಕಿವಿಗೆ 'ಬಸವಾ, ಬಸವಾ...' ದನಿ ಕೇಳಿ ಹೊರಳಿ ನೋಡಿದಳು. 'ಯಪ್ಪಾ ಅಪ್ಪ ನಿನ್ನಿ ಸತ್ತ ಬೆಕ್ಕು ಬಸವ ಭಾಳ ಕಾಡಾಕ ಹತ್ತೈತಿ. ಕೆಲಸ ಮಾಡ ಹೊತ್ನ್ಯಾಗ ಆತನ ತೊಡಿಮ್ಯಾಲಿನ ಬಂದು ಮಕ್ಕಂಡು ಬುದ್ತಿತ್ತು, ನಾ ಚಿತ್ರ ಬರೆಯೋ ಈ ಬಟ್ಟ ಮ್ಯಾಲಿನ ಬಂದು ಕುಂತ್ಗಂಡು ಸುದ್ದಿ ಹೇಳೋರಗತೆ ನನ್ನ ನೋಡ್ತಿತ್ತು...' ಶೀಲವಂತ ಕೈಯಲ್ಲಿದ್ದ ಬ್ರಷ್‌ನ್ನ ಜ್ವಾಪಾನದಿಂದ ಮುಂದ್ಕ ಹಿಡಿದು ಅವ್ವನತ್ತ ನೋಡಿದ. 'ನಾ ಹೊರಗ ಬರಾಕ ಕಳ್ಳಿ ಆಗಿದ್ಯ. ಕಾಲು ಕಾಲಾಗ ಬರ್‍ತಿದ್ಲು' ಕಲ್ಯಾಣಮ್ಮ ಚೆನ್ನನತ್ತ ಕರುಣೆಯಿಂದ ನೋಡಿದಳು. ಚೆನ್ನ ಮೂತಿಲಿಂದ ಕುತ್ಗೆ ಕೆಳಭಾಗ ನೆಕ್ಕಿಕೊಳ್ಳುತ್ತಿದ್ದ.

'ನನಗ ಬಸ್ವಣ್ಣಪ್ಪ ನೆಪ್ಪಾದ. ಅದ್ಕ ಬಸವಾ, ಬಸವಾ ಅಂದ್ಯ. ಬಸ್ವಣ್ಣಪ್ಪಗ ನಾ ನನ್ನ ಮನಸಿನ್ಯಾಗ ವಚ್ನಾ ಕೊಟ್ಟುಬುಟ್ಟೇನಿ. ಕೊಟ್ಟ ವಚನ ಪಾಲಿಸೋದು ಶರಣರ ಧರ್ಮ' ಹರಳಯ್ಯ ಕುರುಪಿಲಿಂದ ಚರ್ಮದ ತುಣುಕು ಕತ್ತರಿಸುತ್ತ ಹೇಳಿದ. 'ಸದಾ ಸಿವ್ನಗ ಅದ ಧ್ಯಾನಂತ. ನೀ ಏನು ಬಸ್ವಣ್ಣಪ್ಪನ ಮುಂದ ಹೇಳಿಯನು? ನನ್ನ ತೊಡೆಯ ಚರ್ಮದಿಂದನ ಚಮ್ಮಾವುಗೆ ಮಾಡಿಕೊಡ್ತೀನಿ ಅಂತ. ಆಗ್ಲೇ ಹೇಳಿನಲ್ಲ, ಹಿಂದಾಗಡೆ ಹೋಗಿ, ಅವ್ರಿಗೆ ನಾವಾ ಮೊದ್ಲು 'ಶರಣು-ಶರಣಾರ್ಥಿ' ಹೇಳಿಬರಾಣಂತ. ಸುಮ್ಕ ಇಲ್ಲದ ವಿಚಾರಮಾಡಿ ತಲಿ ಕೆಡಿಸಿಗಬ್ಯಾಡ ಮಾರಾಯ' ಕಲ್ಯಾಣಮ್ಮ ಗುಡಿಸಿಲ ಒಳಗ ಹೋಗುತ್ತ ಪಿಸಿಪಿಸಿ ವಟಗುಟ್ಟಿದಳು ಕೈಯಲ್ಲಿದ್ದ ಪಾತ್ರೆ ಗುಡಿಸಲ ಗೋಡೆಗೆ ಬಡಿಯಿತೋ 'ಜಣ್' ಅಂತ ಗಂಟೆ ಬಾರಿಸಿದಂತ ಶಬ್ದ ಕೇಳಿಬಂತು. ಶೀಲವಂತ ತಾನು ಬರೆಯುತ್ತಿದ್ದ ಚಿತ್ರವನ್ನೊಮ್ಮೆ ಎದ್ದು ನಿಂತು ಆ ಕಡೆ ಈ ಕಡೆ ಹೊರಳಿ ನೋಡಿದ. ಮತ್ತೆ ಚಿತ್ರಕ್ಕೆ ರೂಪ ನೀಡತೊಡಗಿದ. ಚೆನ್ನನಿಗೆ ಚೊಣಚಿ ಕಡಿಯಿತೋ, ಕೀರಲು ದನಿಯಲ್ಲಿ ಕುಂಯ್-ಕುಂಯ್ ಅನ್ನುತ್ತ ಎದ್ದು ಮೈ ಜಾಡಿಸಿಕೊಂಡ. ಚೆನ್ನಿಗೆ ಮೂತಿಲಿಂದ ಏಕರ್ನಾಡಿ ತಿಕ್ಕಿಕೊಂಡ.

ಹರಳಯ್ಯ 'ಬಸವಾ...' ಅಂತ ಕೆಟ್ಟ ದನೀಲೆ ಚೀರಿದ. ಕೈಯಲ್ಲಿದ್ದ ಕುರುಪಿ ಕೆಳಗ ಬಿತ್ತು, ಅದರ ತುದಿಗೆ ರಕ್ತ ಮೆತ್ತಿತ್ತು, ತೊಡೆಯ ಭಾಗದಲ್ಲಿ ಚೋಟುದ್ದ ಧೋತರ ಹರಿದಿತ್ತು, ದಳದಳ ರಕ್ತ ಸುರಿಯುತ್ತಿತ್ತು, ಚೆನ್ನ ಅಬ್ಬರಿಸಿ ಬಂದು ಹರಳಯ್ಯನ ನೆಕ್ಕಿದ. ಕುರುಪಿಯ ಮೇಲೂ ನಾಲಿಗಿ ಆಡಿಸಿದ. ಹರಳಯ್ಯನನ್ನೇ ಅಳುವ ಕಂಗಳಲ್ಲಿ ದಿಟ್ಟಿಸಿ ನೋಡಿದ. ಶೀಲವಂತ ದಿಗ್ಗನೆ ಎದ್ದು ಅಪ್ಪನತ್ತ ಓಡಿಬಂದ. ಕಲ್ಯಾಣಮ್ಮ ಕೈಯಲ್ಲಿ ಸೌಟು ಹಿಡಿದೇ ಹೊರಬಂದಳು. 'ಅಯ್ ಮಾರಾಯ, ಎಂಥ ಅನಾಹುತ ಮಾಡಿಕೊಂಡಿ. ನೋಡಿದ ಶರಣ್ರು ನಿನಗ ಎಂಥ ಬುದ್ಧಿಗೇಡಿ ಅಂತ ಬಾಯಿಗಿ ಬಂದಂಗ ಬೈಯ್ತಾರ. ಕೆಲಸದಾಗನ ನೀ ಮುಳುಗಿರ್‍ಬೇಕು ಅಂತ ತಿಳಕಂಡಿದ್ಯ, ಆದ್ರ ನಿಂದ ಯೋಚ್ನೆ ಬ್ಯಾರೆನ ಐತಿ' ಕೈಯಲ್ಲಿದ್ದ ಸೌಟನ್ನ ಕೆಳಗ ಒಗೆದ ಕಲ್ಯಾಣಮ್ಮ, ಗಂಡನ ತೊಡೆಯಿಂದ ಇಳಿಯುತ್ತಿದ್ದ ರಕ್ತವನ್ನು ಸೆರಗಿನಿಂದ ಒತ್ತಿಹಿಡಿದಳು. ಬೆರಳು ಗಾತ್ರದ ಗಾಯಕಂಡು ಹೌಹಾರಿದಳು. 'ಶರಣ್ರಿಗೆ ಇದು ಅಪವಾದ. ಬ್ಯಾರೆ ಜೀವಿಗಳನ್ನ ಹಿಂಸಿಸುವುದು ಎಷ್ಟು ಕೆಟ್ಟದ್ದೋ, ನಮ್ ಜೀವ ಹಿಂಸಿಸಿಕೊಳ್ಳೋದು ಅದಕ್ಕಿಂತ ಕೆಟ್ಟದು. ಹೀಂಗ ಮಾಡಿದ್ರ, ಶರಣ ಸಂಪ್ರದಾಯನ ಮುರಿದಂಗ...' ಶೀಲವಂತ ಅಪ್ಪನ ಮುಖದ ಮ್ಯಾಲ ತನ್ನ ಅಂಗೈಯಿಂದ ಒರೆಸಿದ. 'ಗಂಡನೆಂಬ ಮಮಕಾರ ಬುಟ್ಟು ಹೇಳ್ತೀನಿ ಕೇಳಿಲ್ಲಿ, ನಿನ್ನ ಮೈ ಚರ್ಮದಿಂದ ಬಸ್ವಣ್ಣಪ್ಪಗ ಚಮ್ಮಾವುಗೆ ಮಾಡಿಕೊಟ್ಟೆ ಅಂದ್ರ ಅದು ಕಲ್ಯಾಣದ ಕೇಡು ನೋಡಯ್ಯ. ಶರಣರ ಅರಿವಿನ ತಮಂಧ ಕೇಳಯ್ಯ; ಬಯಲಾದ ಬಸವಗೆ ದೇಹ ಏಕಯ್ಯ. ನಿನ್ನ ದೇಹವ ಅರ್ಪಿಸಲೇಕಯ್ಯ, ನನ್ನಾಣೆ, ಕಲ್ಯಾಣದ ಶರಣರಾಣೆ. ಬಸವನಾಣೆ. ಅರಿವಿನ ಬುತ್ತಿ ವಚನದ ಮೇಲಾಣೆ. ನಿಮ್ಮ ಮೈ ಚರ್ಮ ಮತ್ತೊಮ್ಮೆ ಕೊಯ್ದರೆ ಕಲ್ಯಾಣದ ಮರಣ ನೋಡಾ...' ಕಲ್ಯಾಣಮ್ಮ ಗಂಡನ ಕಾಲಿಗೆ ಹಣೆಹಚ್ಚಿ ಬೋರಾಡಿ ಅತ್ತಳು. ಚೆನ್ನ ಆಕಾಶದತ್ತ ಮೂತಿಮಾಡಿ 'ಬೌಂವ್' ಅಂತ ಕೆಟ್ಟ ದನಿಲೆ ಒದರಿದ. ಈ ದನಿಗೆ ಬೆದರಿದ ಸೂರ್ಯ ಆಕಾಶದ ಏಣಿಯ ಬೇಗ ಬೇಗನೆ ಹತ್ತತೊಡಗಿದ. ಉರಿಯ ಗಾಳಿ ಬೀಸಿತು. ಶೀಲವಂತ ಬರೆದ ಚಿತ್ರದ ಬಟ್ಟೆ ಹಾರಿ ಬಂದು ಹರಳಯ್ಯನ ಮುಂದ ಅಂಗಾತ ಬಿತ್ತು. ಮೈಮ್ಯಾಲ ಒಂದಿಂಚೂ ಬಿಡದಂಗ ಸುಲಿದ ಚರ್ಮ. ರಕ್ತ ಸುರಿಯುತ್ತಿದ್ದ ದೇಹ ಹೊತ್ತ ವ್ಯಕ್ತಿ, ಆತನ ಮುಂದ ಹತ್ತಾರು, ನೂರಾರು ಕೆಂಪು, ಕೆಂಪನು ಚಮ್ಮಾವುಗೆಗಳು. ಬಟ್ಟೆ ತುಂಬ ಕೆಂಪು ಬಣ್ಣ ಚೆಲ್ಲಿ ಅಲ್ಲಲ್ಲಿ ಬಿಳಿ, ಕರಿ ಬಣ್ಣದಾಗ ಗೆರೆ ಕೊರದಂಗ ಚಿತ್ರ ಕಂಡಿತು. ಹರಳಯ್ಯನ ಬಾಯಿಲಿಂದ ಮಾತು ಹೊರಡಲಿಲ್ಲ, ಅಷ್ಟು ತ್ರಾಸಿನಾಗನೂ ಮೆಲ್ಲ ಮುಂದಕ್ಕ ಬಗ್ಗಿದ. ಚಿತ್ರವನ್ನ ಕೈಗೆತ್ತಿಕೊಂಡ. ಕಣ್ಣ ಮುಂದ ಹಿಡಿದು ಕ್ಷಣ ತದೇಕಚಿತ್ತದಿಂದ ನೋಡಿದ. ಕಣ್ಣಿಗೆ ಒತ್ತಿಕೊಂಡ. ಎದಿಮ್ಯಾಲ ಆ ಚಿತ್ರವಿದ್ದ ಬಟ್ಟೆಯನ ಹಾಸಿಕೊಂಡ. ಮಗ, ಹೆಂಡತಿಯನ್ನೇ ನೋಡುತ್ತ ಕುಂತ. ಜಾಲಿಗಿಡದ ಕೆಳಗ, ಒಂದೆರಡು ಗುಬ್ಬಿಗಳು, ಸತ್ತ ಗುಬ್ಬಿಯನ್ನು ಇನ್ನೂ ಅತ್ತಿತ್ತ ಹೊರಳಿಸುತಿದ್ವು...



ಕಲಿಗಣನಾಥ ಗುಡದೂರು,
ಸಿಂಧನೂರು, ರಾಯಚೂರು ಜಿಲ್ಲೆ

ಮಧುವರಸರ ಸ್ವಗತ

ಜಗತ್ತಿನಲ್ಲಿ ಅನೇಕ ಕ್ರಾಂತಿ ಮತ್ತು ಕ್ಷಿಪ್ರಕ್ರಾಂತಿಗಳಾಗಿವೆ. ಅವೆಲ್ಲ ...ಸತ್ತೆಯನ್ನು ಪಡೆಯುವುದಕ್ಕಾಗಿ ಅಥವಾ ಉಳಿಸಿಕೊಳ್ಳುವುದಕ್ಕಾಗಿ ನಡೆದಂಥವು. ...ರೆ 12ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಶರಣ ಹತ್ಯಾಕಾಂಡ ...ಿನೆ ವಿಶಿಷ್ಟವಾಗಿದೆ. ಇದು ನಿಜವಾದ ಅರ್ಥದಲ್ಲಿ ಶರಣರು ಮಾಡಿದ ...ಪ್ಲಾ ಕ್ರಾಂತಿ ಅಲ್ಲ, ಶರಣರು ಪರಿಪೂರ್ಣಗೊಳಿಸಲಿದ್ದ ಸಮಾಜೋಧಾರ್ಮಿಕ ...ತಿಯನ್ನು ತಡೆಗಟ್ಟಲು ಪುರೋಹಿತಶಾಹಿಗಳು ಬಿಜ್ಜಳ ರಾಜನ ಮೇಲೆ ...ಡ ತಂದು ಮಾಡಿದ ಕ್ಷಿಪ್ರಕ್ರಾಂತಿಯಾಗಿದೆ.

ಬಿಜ್ಜಳನ ಕಲ್ಯಾಣದೊಳಗೇ ಶರಣಸಂಕುಲವೆಂಬ ಕಲ್ಯಾಣದ ಸೃಷ್ಟಿಯಾಗಿತ್ತು. ...ರು ತಮ್ಮದೇ ಆದ ಸಾಮಾಜಿಕ, ಧಾರ್ಮಿಕ, ಆರ್ಥಿಕನೀತಿಯನ್ನು ...ಸರಿಸುತ್ತಿದ್ದರು. ಶರಣರ ಕಲ್ಯಾಣ ಜಾತಿ, ವರ್ಣ, ವರ್ಗ ಮತ್ತು ...ಗಭೇದಗಳಿಂದ ಮುಕ್ತವಾಗಿತ್ತು. ಹೀಗಾಗಿ ಹೆಣ್ಣು-ಗಂಡುಗಳ ಮಧ್ಯೆ ...ತರಭಾವವಿತ್ತು. ಇಷ್ಟಲಿಂಗ ದೀಕ್ಷೆಯಿಂದಾಗಿ ದಾಸೀಪುತ್ರರು, ವೇಶ್ಯಾಪುತ್ರರು, ...ಪುತ್ರರು ವಿವಿಧ ಜಾತಿ ಮತ್ತು ವರ್ಣದವರು ತಮ್ಮ ಮೊದಲಿನ ಜೀವನ ...ನವನ್ನು ತ್ಯಜಿಸಿ ಸರ್ವಸಮ್ಮತದ ಬದುಕನ್ನು ಸ್ವೀಕರಿಸಿದ್ದರು.

ಬಸವಣ್ಣನವರು 'ಶಿವನಿಧಿ' ಅಥವಾ 'ಶಿವನಸೊಮ್ಮು' ಎಂದು ಕರೆಯಲಾಗುವ ...ಮಾಜಿಕ ನಿಧಿಯನ್ನು ಸ್ಥಾಪಿಸಿದ್ದರು. ಶರಣಸಂಕುಲ ಸೇರಿದವರಲ್ಲಿ ಹೆಚ್ಚಿನ ...ತ್ತಿದ್ದರೆ ಅದನ್ನು ಶಿವನಿಧಿಗೆ ಅರ್ಪಿಸುತ್ತಿದ್ದರು. ಆವಶ್ಯಕತೆಯಿದ್ದವರು ಆ ...ಯ ಬಳಕೆ ಮಾಡುತ್ತಿದ್ದರು. ಶರಣರು ಕಾಯಕಜೀವಿಗಳಾಗಿದ್ದರಿಂದ 'ಕಲ್ಯಾಣದಲ್ಲಿ ...ಡುವವರುಂಟು ಬೇಡುವವರಿಲ್ಲ' ಎಂದು ಬಸವಣ್ಣನವರೇ ಹೇಳಿದ್ದಾರೆ. ...ಾಗಿ ಆ ಸಾಮಾಜಿಕನಿಧಿ ಆರ್ಥಿಕ ಸಮಾನತೆಯ ಪ್ರತೀಕವಾಗಿದ್ದರೂ ...ರು ಕಾಯಕದ ಮೂಲಕವೇ ಬದುಕಲಿಚ್ಛಿಸುತ್ತಿದ್ದರು. ಐಹಿಕ ವಸ್ತುಗಳ ...ೆ ಗಮನ ಹರಿಸದ ಅವರು ಶ್ರೀಮಂತ ಸಮಾಜವನ್ನು ನಿರ್ಮಿಸಿದ್ದರು. ...ತನವನ್ನು ಆಹ್ವಾನಿಸುವುದರ ಮೂಲಕ ಶ್ರೀಮಂತ ಸಮಾಜ ನಿರ್ಮಿಸಿದ ...ನ್ಯ ಸಾಧನೆಯನ್ನು ನಮ್ಮ ಶರಣರು ಮಾಡಿದರು.

ಬಸವಾದಿ ಶರಣರ ಈ ವ್ಯವಸ್ಥೆ ವೈದಿಕ ಸಂಪ್ರದಾಯಕ್ಕೆ ವಿರುದ್ಧವಾಗಿತ್ತು. ...ಸಿದ್ಧಾಂತದ ಮೂಲಕ ಮಾನವರಲ್ಲಿ ಮೇಲುಕೀಳನ್ನು ಮತ್ತು ಹಿಂದಣ ...ದಣ ಜನ್ಮಗಳಿವೆ ಎಂಬ ಭಯವನ್ನು ಸೃಷ್ಟಿಸಿದ್ದ ಪುರೋಹಿತಶಾಹಿಗಳು ...ನವರನ್ನು ಮೂಢನಂಬಿಕೆಗಳ ಜಾಲದಲ್ಲೇ ಬಂಧಿಸಿಡುವಲ್ಲಿ ತಲ್ಲೀನರಾಗಿದ್ದರು. ಕೆಳಜಾತಿಗಳಲ್ಲಿ ಹುಟ್ಟಿದವರು, ಬಡವರು ಮತ್ತು ಹೆಣ್ಣುಮಕ್ಕಳು ಈ ಜನ್ಮದಲ್ಲಿ ಕಷ್ಟಪಡುತ್ತಿರುವುದು ಹಿಂದಣ ಜನ್ಮದಲ್ಲಿ ಮಾಡಿದ ಪಾಪಕರ್ಮಗಳೇ ಕಾರಣ ಎಂದು ಜನರಲ್ಲಿ ಭ್ರಮೆಗಳನ್ನು ಹುಟ್ಟುಹಾಕುತ್ತಿದ್ದರು. ಯಾರ ಎದೆಯ ಮೇಲೆ ಇಷ್ಟಲಿಂಗವಿದೆಯೋ ಅವರು ಕಾಯಕದಲ್ಲಿ ನಂಬಿಕೆಯುಳ್ಳವರು; ಜಾತಿಗಳನ್ನು ಮತ್ತು ಶ್ರೀಮಂತಿಕೆಯನ್ನು ತಿರಸ್ಕರಿಸಿದವರು ಮತ್ತು ಗಂಡುಹೆಣ್ಣಿನ ಮಧ್ಯದ ವ್ಯತ್ಯಾಸವನ್ನು ಅಲ್ಲಗಳೆದವರು ಎಂಬುದು ಜನಜನಿತವಾಯಿತು.

ಸಮಗಾರ ಹರಳಯ್ಯನವರ ಮಗ ಶೀಲವಂತ ಮತ್ತು ಬ್ರಾಹ್ಮಣ ಮೂಲದ ಮಧುವರಸರ ಮಗಳು ಲಾವಣ್ಯ ಕೂಡ ತಮ್ಮ ಪಾಲಕರ ಜೊತೆ ಇಷ್ಟಲಿಂಗ ದೀಕ್ಷೆ ಪಡೆದು ಶರಣಸಂಕುಲದ ಸದಸ್ಯರಾಗಿದ್ದರು. ಬಸವಧರ್ಮದ ಈ ನವಸಮಾಜ ಎಲ್ಲ ಭೇದಗಳಿಂದ ಮುಕ್ತವಾಗಿದ್ದ ಕಾರಣ ಇಲ್ಲಿ ಮನುಧರ್ಮದ ಜಾತಿಗಳು ಕೂಡ ನಿರ್ನಾಮವಾಗಿದ್ದವು. ಹೀಗಾಗಿ ಅವರ ಮಧ್ಯೆ ಯಾವುದೇ ಭೇದಭಾವವಿರಲಿಲ್ಲ. ಲಾವಣ್ಯ ಮತ್ತು ಶೀಲವಂತರ ಮದುವೆ ಲಿಂಗವಂತರ ಮದುವೆಯಾಗಿತ್ತು. ಆದರೆ ಮನುಧರ್ಮದ ಪ್ರಕಾರ ಇದು ವಿಲೋಮಪದ್ಧತಿಯ ವಿವಾಹವಾಗಿತ್ತು. ಅಂದರೆ ಮೇಲ್ಜಾತಿಯ ಹೆಣ್ಣು ಮತ್ತು ಕೆಳಜಾತಿಯ ಗಂಡು ಮದುವೆಯಾಗುವುದು ಮನುಧರ್ಮಕ್ಕೆ ವಿರುದ್ಧವಾಗಿತ್ತು.

ಇಂಥ ಮದುವೆ ಮಾಡುವವರಿಗೆ ಆನೆಯ ಕಾಲಿಗೆ ಕಟ್ಟಿ ಎಳೆಯುವ 'ಎಳೆಹೂಟೆ' ಶಿಕ್ಷೆ ನೀಡಬೇಕು ಎಂದು ವೈದಿಕರು ಬಿಜ್ಜಳ ರಾಜನಿಗೆ ಒತ್ತಾಯಿಸಿದರು. ವೈದಿಕರ ಶಾಸ್ತ್ರಗಳು ಹೇಳಿದಂತೆ ಬಿಜ್ಜಳನ ಶಸ್ತ್ರಗಳು ಕೇಳಿದವು. ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆ ವಿಧಿಸಲಾಯಿತು. ಅವರಿಬ್ಬರೂ ಹುತಾತ್ಮರಾದರು. ತದನಂತರ ಕಲ್ಯಾಣದಲ್ಲಿ ನಡೆದ ದಂಗೆಯಲ್ಲಿ ಶರಣರ ಕಗ್ಗೊಲೆಯಾಯಿತು. ಅವರ ವಚನಕಟ್ಟುಗಳನ್ನು ಪಟ್ಟಭದ್ರಹಿತಾಸಕ್ತಿಗಳು ಸುಟ್ಟುಹಾಕಿದವು. ನವಸಮಾಜವೊಂದು ಪರಿಪೂರ್ಣಗೊಳ್ಳುವ ಕ್ರಾಂತಿಕಾರಿ ಕ್ರಿಯೆಯನ್ನು ಸನಾತನಿಗಳು ಹೀಗೆ ಕ್ಷಿಪ್ರಕ್ರಾಂತಿ ಮಾಡುವ ಮೂಲಕ ತಡೆಗಟ್ಟಿದರು. ಶರಣರಿಗೆ ಇದೆಲ್ಲ ಗೊತ್ತಿತ್ತು. ಅವರು ತಮ್ಮ ನಡೆ-ನುಡಿ ಸಿದ್ಧಾಂತವನ್ನು ಜಾರಿಗೊಳಿಸುವ ಉದ್ದೇಶದಿಂದಲೇ ಈ ವಿವಾಹವನ್ನು ಏರ್ಪಡಿಸಿದ್ದರು.

ಇದಕ್ಕೂ ಮೊದಲು ನಟುವರ ಜನಾಂಗದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಅನುಭವ ಮಂಟಪದ ಶೂನ್ಯಸಿಂಹಾಸನಾಧೀಶ್ವರರನ್ನಾಗಿಸಿದ್ದಾಗಲೇ ಮನುಧರ್ಮದ ಸಿಂಹಾಸನ ಅಲುಗಾಡತೊಡಗಿತ್ತು. ಶರಣರ ಕ್ರಾಂತಿಕಾರಿ ನಿಲುವುಗಳಿಂದಾಗಿ ರಾಜಸಿಂಹಾಸನಕ್ಕೂ ಕುತ್ತು ಬರುವುದು ಎಂದು ಸನಾತನಿಗಳು ಬಿಜ್ಜಳ ರಾಜನ ಕಿವಿಯೂದಿದರು. ಹರಳಯ್ಯ ಮಧುವರಸರ ಮಕ್ಕಳ ಮದುವೆ ಅವರಿಗೊಂದು ದೊಡ್ಡ ನೆಪವಾಗಿ ಸಿಕ್ಕ ಕಾರಣ ಅವರು ಬಿಜ್ಜಳನ ಮೇಲೆ ಒತ್ತಡ ತರುವಲ್ಲಿ ಯಶಸ್ವಿಯಾದರು.

ಮದುವೆಯ ನಂತರ ನಡೆಯುವ ಹತ್ಯಾಕಾಂಡದ ಬಗ್ಗೆ ಮಧುವರಸರ ಮಗಳು ಲಾವಣ್ಯಳಿಗೂ ಗೊತ್ತಿತ್ತು. ಆದರೆ ನವಸಮಾಜದ ಕನಸುಹೊತ್ತಿದ್ದ ಶರಣರ ಸರ್ವಸಮ್ಮತದ ಘನ ಉದ್ದೇಶ ಅವಳ ಮನದಲ್ಲಿ ತುಂಬಿಕೊಂಡಿತ್ತು. ಅವಳು ಎಲ್ಲವನ್ನು ಎದುರಿಸಲು ಸಿದ್ಧವಾದಳು. ಅವಳ ತ್ಯಾಗದಿಂದಾಗಿ ಕಲ್ಯಾಣದ ಕನಸು ನಮ್ಮೊಳಗೆ ಇನ್ನೂ ಜೀವಂತವಾಗಿದೆ. ಮದುವೆಯ ಹಿಂದಿನ ರಾತ್ರಿ ಲಾವಣ್ಯಳ ತಂದೆ ಮಧುವರಸರ ಮಾನಸಿಕ ಸ್ಥಿತಿಯ ಹಿನ್ನೆಲೆ ಈ ಕವನದ ವಸ್ತು.

ಬೆಳಗಾದರೆ ನಿನ್ನ ಮದುವೆಯ ಸಂಭ್ರಮ ಮಗಳೆ
ರಾತ್ರಿಯೇ ಶುರುವಾಗಿದೆಯಲ್ಲಾ ಹಾರವರ ರಗಳೆ.

ಬಿಜ್ಜಳನ ಶಸ್ತ್ರಗಳಿಗೆ ಶಾಸ್ತ್ರಗಳ ಸಾಣೆ ಹಿಡಿಯುವರು
ಸೈನಿಕರು ಸೇರಿ ಕಂಡಕಂಡಲ್ಲಿ ಶರಣರ ಕಡಿಯುವರು.


ಜಾತಿವಿಜಾತಿಗಳೆಲ್ಲ ಅಳಿದು ಉಳಿಯಲಿ ಮಾನವತೆ
ಈ ಕಾರ್ಯ ಧರ್ಮಬಾಹಿರ ಎನ್ನುವುದು ದಾನವತೆ.

ಮಗಳೆ ಮನುವಿನ ಕುಲದಲ್ಲಿ ಜನಿಸಿದರೂ ನಾನು
ಬಸವರಸರ ಭಕ್ತಿಪಥವನೇ ಹಿಡಿದು ಸಾಗಿದೆ ನೀನು.

ಕುಲದ ಕತ್ತಲೆಯಿಂದೆಳೆದ ನೀ ಸಮತೆಯ ಬೆಳಕು
ಈ ದಾರಿ ನಾ ಹಿಡಿಯದಿದ್ದರೆ ಬದುಕೆಲ್ಲ ಕೊಳಕು.

ಬ್ರಹ್ಮನ ಬಾಯಲ್ಲಿ ಕುಳಿತು ಕೊಳೆಯುತ್ತಿದ್ದೆವು ನಾವು
ಉಳಿಯುತ್ತಿದ್ದೆವು ಅರಿವಿಲ್ಲದೆ, ಬರುವವರೆಗೆ ಸಾವು.

ಮಹಾಮನೆ ಅರಮನೆಗಳ ಮಧ್ಯದ ಅಂತರ ನೋಡು
ಇದು ದಯೆಯ ಬೀಡು, ಅದು ಅಮಾನುಷರ ಕಾಡು.




ಈ ಮದುವೆ ನಡುಗಿಸಿದೆ ವೇದಶಾಸ್ತ್ರ ಅರಮನೆಯನ್ನು
ನಾಳೆ ಕತ್ತಲರಾತ್ರಿ, ಕಾಣಬಹುದು ಜವನ ಮನೆಯನ್ನು.

ಅಷ್ಟಾವರಣ ಸಂಪನ್ನೆ ದಿಟ್ಟೆ ನೀನು; ಬೆರಗಾದೆ ನಾನು
ರಕ್ಷಾವರಣಗಳೇ ಇಲ್ಲದ ಸ್ಥಿತಿಯಲ್ಲಿ ಸಿದ್ಧಳಾದೆ ನೀನು.

ಈ ಮದುವೆ ಪಡೆಯುವುದು ಕೀಳಿಲ್ಲದ ಬದುಕನ್ನು
ಶರಣರೆಲ್ಲ ಸಿದ್ಧರಾದರು ಎದುರಿಸಲು ಬರುವುದನ್ನು.

ಹರಳಯ್ಯ, ಚನ್ನಯ್ಯ, ಕಕ್ಕಯ್ಯ, ನಾಗಿದೇವ ಕುಲಜರು
ಜಾತಿ ಕುಲಗೋತ್ರಗಳಲ್ಲಿ ಸಿಕ್ಕವರೇ ಹೊಲೆ ಮಾದಿಗರು.

ಎಂಥ ದುಗುಡ ಸಂಭ್ರಮ, ಎಂಥ ಅಚಲ ನಿರ್ಧಾರ!
ಶರಣಸಂಕುಲದ ಸಂಕಲ್ಪವೇ ಮಾನವತೆಗೆಲ್ಲ ಆಧಾರ.



ರಂಜಾನ್ ದರ್ಗಾ

...ಹೆಂಗ ಹೇಳಲೋ ಮಣ್ಣಿನಾ ಮಹಿಮೆ

...ಣ್ಣೇ ಮಣ್ಣು ಮಣ್ಣೇ ಮಣ್ಣು ಮಣ್ಣೇ ಮಣ್ಣು
... ಮಣ್ಣೇ ಮಣ್ಣು ಮಣ್ಣೇ ಮಣ್ಣು ಮಣ್ಣೇ ಮಣ್ಣು
... ಮಣ್ಣೇ ಮಣ್ಣು ಮಣ್ಣೇ ಮಣ್ಣು ಮಣ್ಣೇ ಮಣ್ಣು//


...ನಾಗ ನೀರು ಹೊಯ್ದು ಕೆಸರು ತುಳಿದ್ಯಲ್ಲೋ
... ತುಳಿದು ಗಡಿಗೆ ಮಾಡಿ ಕುಂಬಾರ ಎನಿಸಿಕೊಂಡ್ಯಲ್ಲೋ
... ಕೋಟಿ ಕೋಟಿ ಗಳಿಸಲಿಲ್ಲಲ್ಲೋ//

...ನಾಗ ಕಬ್ಬಿಣ ತೆಗೆದು ಕಾಸಾಕಿಟ್ಯಲ್ಲೋ
...ಟ್ಟಿ ಕೊಡಲಿ ಮಾಡಿ ಕಮ್ಮಾರ ಎನಿಸಿಕೊಂಡ್ಯಲ್ಲೋ
... ಕೋಟಿ ಕೋಟಿ ಗಳಿಸಲಿಲ್ಲಲ್ಲೋ//

...ನಾಗ ಬಿಗಾಟಿ ಹೊಡೆದು ಸಸ್ಯ ನಲಿದಲ್ಲೋ
... ಜನರ ನೂಲಿ ದೊಂಬರಾಟ ಎನಿಸಿಕೊಂಡ್ಯಲ್ಲೋ
... ಕೋಟಿ ಕೋಟಿ ಗಳಿಸಲಿಲ್ಲಲ್ಲೋ//

...ನಾಗ ...
...
... ಕೋಟಿ ಕೋಟಿ ...//

ಮಣ್ಣಿನಾಗ ಮೊಳವ ಹಾಕಿ ಅಳತೆ ಮಾಡಿದರಲ್ಲೋ
ಮನೆ ಮಠ ಪ್ಲಾಟು ಅಂತ 'ರಿಯಲು ಎಸ್ಟೇಟು' ಮಾಡಿಬಿಟ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ//




ಮಣ್ಣಿನಾಗ ಒಡಲು ಕೆದರಿ ಅದಿರು ತೆಗೆದ್ರಲ್ಲೋ
ಟ್ರಕ್ಕು ರೈಲು ಹಡಗು ತುಂಬಿ 'ಗಣಿಧಣಿ'ಗಳು ಎನಿಸಿಕೊಂಡ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ//

ಮಣ್ಣಿನಾಗ ಹುಟ್ಟಿದಂಗೆ ಮಣ್ಣ ಮಕ್ಳು ಎನಿಸಿಕೊಂಡ್ರಲ್ಲೋ
ಹಳ್ಳಿ ದಿಲ್ಲಿ ಗದ್ದುಗೆ ಹಿಡಿದು ರಾಜರಂಗೆ ಮೆರೆಯುತವ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ//


ಮಣ್ಣೇ ತಾಯಿ ಮಣ್ಣೇ ತಂದೆ ಮಣ್ಣೇ ದೈವ ಎಂದುಕೊಂಡ್ಯಲ್ಲೋ
ಕನಸು ಕಾಣುತ ಮಣ್ಣಾಗ ಮಣ್ಣಾಗಿ ಕೊಳೆತು ಹೋದ್ಯಲ್ಲೋ
ನೀನು ಕೋಟಿ ಕೋಟಿ ಗಳಿಸಲಿಲ್ಲಲ್ಲೋ//

ಮಣ್ಣೇ ಚಿನ್ನ ಮಣ್ಣೇ ರನ್ನ ಮಣ್ಣೇ ವಜ್ರ ಎಂದವರಲ್ಲೋ
ಮಣ್ಣ ಮೆಟ್ಟಿ ಮುಗಿಲತನಕ ದೆವ್ವದಂಗ ಬೆಳೆದು ನಿಂತ್ರಲ್ಲೋ
ಅವರು ಕೋಟಿ ಕೋಟಿ ಗಳಿಸಿಬಿಟ್ರಲ್ಲೋ//

ನೀನು ನಾನು ಎಲ್ಲಾ ಮಣ್ಣು ವಿಟು ಬಿತ್ತಲ್ಲೋ
ಕಣ್ಣುತುಂಬಾ ಮಣ್ಣು ಬಿತ್ತಲ್ಲೋ, ಎಂಥಾ ವಿಟಲ್ಲೋ
ಬಾಯಿತುಂಬಾ ಮಣ್ಣು ಬಿತ್ತಲ್ಲೋ, ವಿಳಲಾಗದಂಥ ವಿಟಲ್ಲೋ.



ವಿ.ಹರಿನಾಥ ಬಾಬು



ಸಂವಿಧಾನದ 37(ಜೆ) ಮತ್ತು ಪ್ರಾದೇಶಿಕ ಅಸಮತೋಲನ

1956ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದಾಗ ಹೈದ್ರಾಬಾದ ರಾಜ್ಯವನ್ನು ಮೂರು ಭಾಗಗಳಾಗಿ ತೆಲಂಗಾಣ ವನ್ನು ಆಂಧ್ರಪ್ರದೇಶಕ್ಕೆ, ಮರಾಠಾವಾಡವನ್ನು ಮಹಾರಾಷ್ಟ್ರಕ್ಕೆ ಹಾಗೂ ಈಗಿನ ಹೈದ್ರಾಬಾದ-ಕರ್ನಾಟಕ ಪ್ರದೇಶವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಆ ಸಂದರ್ಭದಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಾದ ತೆಲಂಗಾಣ ಮತ್ತು ಮರಾಠಾವಾಡ ಪ್ರಾಂತಕ್ಕೆ 371ನೇ ಕಲಂ ತಿದ್ದುಪಡಿ ಮಾಡಿ ವಿಶೇಷ ಸ್ಥಾನಮಾನ ನೀಡಲಾಯಿತು ಮತ್ತು ಇಂದಿನವರೆಗೂ ತೆಲಂಗಾಣದಲ್ಲಿ ಮುಲ್ಕಿ ಕಾನೂನು ಜಾರಿಯಲ್ಲಿದೆ. ಅಂದಿನ ಸಂದರ್ಭದಲ್ಲಿ ಇಡೀ ದೇಶದಲ್ಲೇ ಅತ್ಯಂತ ಮುಂದುವರೆದ ರಾಜ್ಯ ಮೈಸೂರು ರಾಜ್ಯವೆಂದು ಪರಿಗಣಿಸಲ್ಪಡುತಿತ್ತು, ಹೈದ್ರಾಬಾದ-ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ಮೈಸೂರು ರಾಜ್ಯವೇ ಮಾಡುತ್ತದೆ ಎಂದು ಹೇಳಲಾಗಿತ್ತು ಮತ್ತು ಇದನ್ನು ಈ ಭಾಗದ ಜನ ನಂಬಿದ್ದು ಇತಿಹಾಸ. ಆದರೆ 1956 ರಿಂದ ಇಲ್ಲಿಯವರೆಗೆ ಮೈಸೂರು/ಕರ್ನಾಟಕ ರಾಜ್ಯವನ್ನಾಳಿದ ಎಲ್ಲ ಸರಕಾರಗಳು ಈ ಭಾಗಕ್ಕೆ ಅಭಿವೃದ್ಧಿ ವಿಷಯದಲ್ಲಿ ಭಾರಿ ತಾರತಮ್ಯ ಮಾಡಿರುವುದು ಮತ್ತು ಇವತ್ತೂ ಕೂಡ ಮಾಡುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

. ಹೈದ್ರಾಬಾದ-ಕರ್ನಾಟಕ ಭಾಗವೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶ ಎಂದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೆ ಪೂರಕವಾಗಿ ಈ ಹಿಂದೆ ಸರಕಾರ ನೇಮಿಸಿದ ಹಲವಾರು ಸಮಿತಿಗಳು ವರದಿ ನೀಡಿವೆ. 1980ರಲ್ಲಿ ಗುಂಡೂರಾವ್ ಅವರ ಸರಕಾರ ನೇಮಿಸಿದ ಎನ್. ಧರ್ಮಸಿಂಗ್ ಸಮಿತಿಯು ಹೈದ್ರಾಬಾದ-ಕರ್ನಾಟಕ ಪ್ರದೇಶದ ಅಭಿವೃದ್ಧಿಯಲ್ಲಿನ ಅಸಮತೋಲನವನ್ನು ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಿ, ಈ ಭಾಗದ ಅಭಿವೃದ್ಧಿಗಾಗಿ ಒಂದು ವಿಶೇಷ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಅಗತ್ಯವಿದೆ ಎಂದು ಹೇಳಿತ್ತು, ಈ ಸಮಿತಿಯ ಶಿಫಾರಸ್ಸಿನಂತೆ 1992 ರಲ್ಲಿ ರಾಜ್ಯ ಸರಕಾರ ಹೈದ್ರಾಬಾದ -ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಿ ವರ್ಷಕ್ಕೆ 10 ರಿಂದ 50 ಕೋಟಿ ರೂಪಾಯಿವರೆಗೆ ಅನುದಾನವನ್ನು ನೀಡಿ ಕೈ ತೊಳೆದುಕೊಂಡಿತ್ತೇ ವಿನಃ ಇದರಿಂದ ಸಾರ್ವಜನಿಕರಿಗೆ ಯಾವುದೇ ಅನುಕೂಲವಾಗುವಂತಹ ಕೆಲಸ ಆಗಿರುವುದಿಲ್ಲ, ನಂತರ 2002ರಲ್ಲಿ ಎಸ್.ಎಮ್. ಕೃಷ್ಣರವರ ನೇತೃತ್ವದ ಸರಕಾರವು ನೇಮಿಸಿದ ಡಾ.ಡಿ.ಎಮ್. ನಂಜುಂಡಪ್ಪನವರ ಉನ್ನತಾಧಿಕಾರ ಸಮಿತಿಯು ರಾಜ್ಯದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಪ್ರಾದೇಶಿಕ ಅಸಮತೋಲನ ಕುರಿತು ಆಳವಾಗಿ ಅಧ್ಯಯನ ಮಾಡಿ ಸಲ್ಲಿಸಿರುವ ವರದಿಯಲ್ಲಿ ಹೈದ್ರಾಬಾದ -ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಮೈಸೂರು ಕರ್ನಾಟಕ ಮತ್ತು ಮುಂಬಯಿ ಕರ್ನಾಟಕಕ್ಕೆ ಹೋಲಿಸಿದಾಗ ನೂರು ವರ್ಷದಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಿತ್ತು.

ಡಾ.ಡಿ.ಎಂ.ನಂಜುಂಡಪ್ಪನವರ ಉನ್ನತಾಧಿಕಾರ ಸಮಿತಿ ಸಲ್ಲಿಸಿದ ವರದಿಯು ರಾಜಕೀಯ ಪಕ್ಷಗಳಿಗೆ ಚುನಾವಣೆ ಸಮಯದಲ್ಲಿ ಹೈದ್ರಾಬಾದ -ಕರ್ನಾಟಕ ಪ್ರದೇಶದ ಜನರಿಗೆ ವಂಚಿಸುವ ಒಂದು ಚುನಾವಣಾ ವಿಷಯವಾಯಿತೇ ವಿನಃ ಆ ವರದಿಯನ್ನು ಸಂಪೂರ್ಣವಾಗಿ ಜಾರಿ ತರುವ ಮನಸ್ಸು ಸುಮಾರು 2002 ರಿಂದ ಇಲ್ಲಿಯವರೆಗೆ ಬಂದ ಯಾವ ಸರಕಾರಗಳು ಮಾಡಲಿಲ್ಲ.

ಮುಲ್ಕಿ ಕಾನೂನು

ಹೈದ್ರಾಬಾದ ಸಂಸ್ಥಾನದಲ್ಲಿ ಸರಕಾರಿ ಹುದ್ದೆಗಳಿಗೆ ನೇಮಕವಾಗುತ್ತಿದ್ದವರು ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಭಾರತದ ಅಲಿಗಢ್ ವಿಶ್ವವಿದ್ಯಾಲಯದ ಅಭ್ಯರ್ಥಿಗಳಾಗಿದ್ದರು. ಇದನ್ನು ಮನಗಂಡು ಹೈದ್ರಾಬಾದ ಸಂಸ್ಥಾನದ ನಿಜಾಮನು 1919 ರಲ್ಲಿ ಈ ರಾಜ್ಯದ ಸರಕಾರಿ ಹುದ್ದೆಗಳು ಇದೇ ರಾಜ್ಯದ ಅಭ್ಯರ್ಥಿಗಳಿಗೆ ಸಿಗಬೇಕು ಎಂದು ಮುಲ್ಕಿ (ಮುಲ್ಕಿ ಎಂದರೆ ಉರ್ದುವಿನಲ್ಲಿ ಸ್ಥಳೀಯರು ಎಂದು ಅರ್ಥ) ಕಾನೂನು [illegible] ತಂದನು. ಈ ಕಾನೂನು ಹೈದ್ರಾಬಾದ ರಾಜ್ಯದಲ್ಲಿ [illegible] ರವರೆಗೆ ಜಾರಿಯಲ್ಲಿತ್ತು.

"ಮುಲ್ಕಿ ಕಾನೂನು ಎಂದರೆ ರಾಜ್ಯ ಸರಕಾರದ ಎಲ್ಲ ಹುದ್ದೆಗಳ ನೇಮಕಾತಿಯಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಹುದ್ದೆಗಳು/ಸ್ಥಾನಗಳನ್ನು ಸ್ಥಳೀಯರಿಗೇ ಮೀಸಲಿಡಬೇಕು ಎಂದು ಹೇಳುತ್ತದೆ".

ಸಂವಿಧಾನದ 371 ನೇ ಕಲಂ

ಸಂವಿಧಾನ ರಚನಾ ಸಂದರ್ಭದಲ್ಲಿ "[illegible]ದೇ



ಡಾ.ಡಿ.ಎಂ.ನಂಜುಂಡಪ್ಪನವರ ಉನ್ನತಾಧಿಕಾರ ಸಮಿತಿ ಸಲ್ಲಿಸಿದ ವರದಿಯು ರಾಜಕೀಯ ಪಕ್ಷಗಳಿಗೆ ಚುನಾವಣೆ ಸಮಯದಲ್ಲಿ ಹೈದ್ರಾಬಾದ-ಕರ್ನಾಟಕ ಪ್ರದೇಶದ ಜನರಿಗೆ ವಂಚಿಸುವ ಒಂದು ಚುನಾವಣಾ ವಿಷಯವಾಯಿತೇ ವಿನಃ ಆ ವರದಿಯನ್ನು ಸಂಪೂರ್ಣವಾಗಿ ಜಾರಿ ತರುವ ಮನಸ್ಸು ಸುಮಾರು 2002 ರಿಂದ ಇಲ್ಲಿಯವರೆಗೆ ಬಂದ ಯಾವ ಸರಕಾರಗಳು ಮಾಡಲಿಲ್ಲ.

ರಾಜ್ಯದಲ್ಲಿ ಒಂದು ಪ್ರದೇಶ ಸಮೃದ್ಧವಾಗಿದ್ದು ಮತ್ತೊಂದು ತೀರ ಹಿಂದುಳಿದು ಅಲ್ಲಿನ ಜನ ಹತ್ತು ಹಲವು ಸೌಲಭ್ಯಗಳಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಅತೀಯಾದ ಅಸಮಾನತೆ ನಿವಾರಣೆಗೆ ವಿಶೇಷ ಸವಲತ್ತು ನೀಡಲು ಸಂವಿಧಾನದ 371 ನೇ ಕಲಂನ ಅಡಿಯಲ್ಲಿ ಅವಕಾಶ ನೀಡಲಾಗಿದೆ.

ಈ ದೇಶದ ಯಾವುದೇ ಒಂದು ಪ್ರದೇಶವನ್ನು 371 ನೇ ಕಲಂನಡಿ ಸೇರಿಸಿದಾಗ ಆ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಲ್ಲಿ ಯಾವುದೇ ವಿಶೇಷ ಕಾನೂನು, ಸವಲತ್ತು, ಅನುದಾನ ನೀಡಿದರೆ, ಅದನ್ನು ಈ ದೇಶದ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಬರುವುದಿಲ್ಲ, ಭಾರತದಲ್ಲಿ ಈಗಾಗಲೇ 371ನೇ ಕಲಂನ್ನು ಗುಜರಾತಿನ ಸೌರಾಷ್ಟ್ರ, ಮಹಾರಾಷ್ಟ್ರ, 1957ರಲ್ಲಿ ತೆಲಂಗಾಣಕ್ಕೆ ಮತ್ತು 1973 ರಲ್ಲಿ ಇಡೀ ಆಂಧ್ರಪ್ರದೇಶಕ್ಕೆ, ಗೋವಾ, ಅಸ್ಸಾಂ, ಮಿಜೊರಾಂ, ಸಿಕ್ಕಿಂ, ಅರುಣಾಚಲ್ ಪ್ರದೇಶ, ಮಣಿಪುರ, ನಾಗಾಲ್ಯಾಂಡ್ ಇತ್ಯಾದಿ ರಾಜ್ಯಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ನೀಡಲಾಗಿದೆ. ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 371 ನೇ ಕಲಂ ತಿದ್ದುಪಡಿ ಮಾಡಬೇಕೆಂದು ಹೇಳಿದೆ.

ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೇಮಕಾತಿಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ 371ನೇ ಕಲಂ ಜಾರಿಯಾಗುವುದು ಅತೀ ಅವಶ್ಯಕವಾಗಿತ್ತು, ಈ ದಿಕ್ಕಿನಲ್ಲಿ ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಹೋರಾಟಗಾರರು, ರೈತರು, ಕೂಲಿಕಾರ್ಮಿಕರು ಸೇರಿದಂತೆ ಹಲವಾರು ಸಂಘಟನೆಗಳ ನೇತೃತ್ವದಲ್ಲಿ 371 ನೇ ಕಲಂ ತಿದ್ದುಪಡಿ ಮಾಡಲು ಕೇಂದ್ರ ಸರಕಾರದ ಮೇಲೆ ತೀವ್ರತರವಾದ ಒತ್ತಡ ತರಲಾಗಿತ್ತು.

ಕಳೆದ 2012, ಡಿಸೆಂಬರ್ 18 ಹೈದ್ರಾಬಾದ ಕರ್ನಾಟಕಕ್ಕೆ ಐತಿಹಾಸಿಕ ದಿನ, ಅಂದು ಲೋಕಸಭೆಯಲ್ಲಿ ಸಂವಿಧಾನದ 371ನೇ ಕಲಂ ಮಸೂದೆ ಸರ್ವಾನುಮತದ ನಿರ್ಣಯದೊಂದಿಗೆ ತಿದ್ದುಪಡಿಯಾಯಿತು. ಅದರ ಕಾನೂನು ರಚಿಸುವ ಜವಾಬ್ದಾರಿ ರಾಜ್ಯ ಸರಕಾರದ ಮೇಲಿತ್ತು, ಮೂಲಭೂತವಾಗಿ ಸಂವಿಧಾನದ 371ನೇ (ಜೆ) ಕಲಂನಲ್ಲಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡುವುದು ಸೇರಿದಂತೆ ಸಂವಿಧಾನಬದ್ಧ ಅಭಿವೃದ್ಧಿ ಮಂಡಳಿ ರಚಿಸಲು ಅವಕಾಶ ನೀಡಲಾಗಿದೆ.

ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ

ಹೈದ್ರಾಬಾದ ಕರ್ನಾಟಕದ ಬಹುದಿನಗಳ ಬೇಡಿಕೆ ಮತ್ತು ಒತ್ತಾಸೆಯ ಅಂಗವಾಗಿ ಸಂವಿಧಾನದ 371ನೇ ಕಲಂ ತಿದ್ದುಪಡಿಯಾಗಿ, ರಾಜ್ಯ ಸರಕಾರಕ್ಕೆ ಅದರ ಕಾನೂನುಗಳನ್ನು ರಚಿಸಲು ಅವಕಾಶ ನೀಡಲಾಗಿದೆ. ಹಿಂದಿನ ಬಿ.ಜೆ.ಪಿ ಸರಕಾರ ಕಾನೂನು ರಚಿಸುವಲ್ಲಿ ವಿಳಂಬ ಮಾಡಿದ್ದರಿಂದ ಅದು ನೆನೆಗುದಿಗೆ ಬೀಳುವ ಸಂಭವವಿತ್ತು, ಆದರೆ, ಈಗಿನ ಸಿದ್ದರಾಮಯ್ಯನವರ ಸರಕಾರ ಅಸ್ತಿತ್ವಕ್ಕೆ ಬಂದ ತಕ್ಷಣ ಉತ್ತರ ಕರ್ನಾಟಕದ ಹಿರಿಯ ರಾಜಕಾರಣಿ ಹಾಗೂ ಮುತ್ಸದ್ದಿಯೂ ಆದ ಎಚ್.ಕೆ.ಪಾಟೀಲರ ನೇತೃತ್ವದಲ್ಲಿ ಸಚಿವಸಂಪುಟ ಉಪ ಸಮಿತಿ ರಚಿಸಲಾಯಿತು. ಈ ಸಮಿತಿಯು ಒಂದು ತಿಂಗಳಲ್ಲಿ ಸಂವಿಧಾನದ 371 (ಜೆ) ಕಲಂ ಅನ್ವಯ ಸಮಗ್ರವಾದ ಕಾನೂನನ್ನು ರಚಿಸಿ ಸರಕಾರಕ್ಕೆ ಸಲ್ಲಿಸಿತು. ಅದನ್ನು ಸರಕಾರ ಯಾವುದೇ ಆಕ್ಷೇಪಣೆ ಇಲ್ಲದೇ ಸದನದಲ್ಲಿ ಒಪ್ಪಿಗೆ ನೀಡಿತು. ಅದರಂತೆ ರಾಜ್ಯ ಸರಕಾರ ಸೂಕ್ತ ಕಾನೂನು ರಚಿಸಿ ರಾಷ್ಟ್ರಪತಿಗಳ, ರಾಜ್ಯಪಾಲರ ಒಪ್ಪಿಗೆ ಪಡೆದು 06-11-2013ರಂದು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸಿದೆ. ಅಂದಿನಿಂದ ಸಂವಿಧಾನದ 371ನೇ ಕಲಂ ಜಾರಿಯಾಗಿದೆ. ಸದರಿ ಕಾನೂನಿನಲ್ಲಿ ಹಲವಾರು ಅವಕಾಶಗಳನ್ನು ಹೈದ್ರಾಬಾದ ಕರ್ನಾಟಕದ ಜನತೆಗೆ ನೀಡಿದ್ದು ಅದನ್ನು ಸದುಪಯೋಗಪಡಿಸಿಕೊಳ್ಳುವ ಕೆಲಸವಾಗಬೇಕಾಗಿದೆ. ಸಂವಿಧಾನದ 371 (ಜೆ) ಕಲಂ ಪ್ರಕಾರ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಹಾಗೂ ಹೈದ್ರಾಬಾದ ಕರ್ನಾಟಕಕ್ಕೆ ಹೊಸದಾಗಿ ಶಾಸನಬದ್ಧ ಅಭಿವೃದ್ಧಿ ಮಂಡಳಿ ಸ್ಥಾಪಿಸುವಂತಹ ಕಾನೂನು ರೂಪಿಸಲಾಗಿದೆ.

1. ಶಿಕ್ಷಣದಲ್ಲಿ ಮೀಸಲಾತಿ

ಅ) ಹೈದ್ರಾಬಾದ ಕರ್ನಾಟಕದಲ್ಲಿರುವ ಸರಕಾರಿ/ಖಾಸಗಿ/ಖಾಸಗಿ ಅನುದಾನಿತ. ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇನ್ನಿತರೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 70 ರಷ್ಟು ಸೀಟುಗಳನ್ನು ಹೈದ್ರಾಬಾದ ಕರ್ನಾಟಕದ ಸ್ಥಳೀಯರಿಗೆ ಮೀಸಲಿಡಲಾಗಿದೆ.

ಆ) ಹೈದ್ರಾಬಾದ ಕರ್ನಾಟಕ ಹೊರತುಪಡಿಸಿ ರಾಜ್ಯದ ಇತರೆ ಭಾಗದಲ್ಲಿರುವ ಸರಕಾರಿ/ಖಾಸಗಿ/ಖಾಸಗಿ ಅನುದಾನಿತ ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇನ್ನಿತರೆ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 8 ರಷ್ಟು ಸೀಟುಗಳನ್ನು ಹೈದ್ರಾಬಾದ ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದೆ.

2. ಉದ್ಯೋಗದಲ್ಲಿ ಮೀಸಲಾತಿ

ಅ) ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಗ್ರೂಪ್ 'ಎ' (ಜೂನಿಯರ್ ಸ್ಕೇಲ್) ಮತ್ತು ಗ್ರೂಪ್ 'ಬಿ' ಹುದ್ದೆಗಳಿಗೆ ಶೇ. 75 ರಷ್ಟು ಹುದ್ದೆಗಳ ನೇಮಕಾತಿ ಅಥವಾ ಬಡ್ತಿಯಲ್ಲಿ ಸ್ಥಳೀಯರಿಗೆ ಮೀಸಲಿಡಲಾಗಿದೆ. ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಗ್ರೂಪ್ 'ಸಿ' ಹುದ್ದೆಗಳಿಗೆ ಶೇ. 80 ರಷ್ಟು ಹುದ್ದೆಗಳ ನೇಮಕಾತಿ ಅಥವಾ ಬಡ್ತಿಯಲ್ಲಿ ಸ್ಥಳೀಯರಿಗೆ ಮೀಸಲಿಡಲಾಗಿದೆ. ಅದೇರೀತಿಯಾಗಿ ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಗ್ರೂಪ್ 'ಡಿ' ಹುದ್ದೆಗಳಿಗೆ ಶೇ. 85 ರಷ್ಟು ಹುದ್ದೆಗಳ ನೇಮಕಾತಿ ಅಥವಾ ಬಡ್ತಿಯಲ್ಲಿ ಸ್ಥಳೀಯರಿಗೆ ಮೀಸಲಿಡಲಾಗಿದೆ.

ಆ) ಹೈದ್ರಾಬಾದ ಕರ್ನಾಟಕ ಹೊರತುಪಡಿಸಿ ರಾಜ್ಯ ಮಟ್ಟದಲ್ಲಿ ನಡೆಯುವ ಯಾವುದೇ ಹುದ್ದೆಗಳ ನೇಮಕಾತಿ ಅಥವಾ ಬಡ್ತಿಯಲ್ಲಿ ಶೇ. 8 ರಷ್ಟು ಹುದ್ದೆಗಳನ್ನು ಹೈದ್ರಾಬಾದ ಕರ್ನಾಟಕದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.

3. ಹೈದ್ರಾಬಾದ ಕರ್ನಾಟಕದ ಸ್ಥಳಿಯರನ್ನು ಗುರುತಿಸುವ ವಿಧಾನ

ಹೈದ್ರಾಬಾದ ಕರ್ನಾಟಕದ ನಿವಾಸಿಗಳೆಂದು ಪರಿಗಣಿಸಬೇಕಾದರೆ ಈ ಕೆಳಗಿನ ಶರತ್ತುಗಳನ್ನು ಪೂರೈಸಿರಬೇಕು, ಅಂತಹವರನ್ನು ಸ್ಥಳೀಯರೆಂದು ಹೇಳಬಹುದು:

ಅ) ಅವನು/ಅವಳು 1-1-2013ಕ್ಕಿಂತ ಮೊದಲು ಇಲ್ಲಿ ಜನಿಸಿದ್ದರೆ ಅಥವಾ

ಆ) ಅವರ ತಂದೆತಾಯಿಗಳು ಇಲ್ಲಿ ಜನಿಸಿದ್ದಲ್ಲಿ ಅಥವಾ

ಇ) 1-1-2013 ಕ್ಕೆ ಮೊದಲು ಹತ್ತು ವರ್ಷ ಇಲ್ಲಿ ವಾಸವಾಗಿದ್ದು ಮತ್ತು ಅಂತಹವರು ಆ ಪ್ರದೇಶದಲ್ಲಿ ಪಡಿತರ ಚೀಟಿಯಲ್ಲಿ ಅಥವಾ ಚುನಾವಣಾ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿರಬೇಕು ಅಥವಾ ಕಾಯಂ ಆಗಿ ಇಲ್ಲಿ ಆಸ್ತಿ ಹೊಂದಿರಬೇಕು ಅಥವಾ

ಈ) ಅವನು/ಅವಳು ಹತ್ತು ವರ್ಷಗಳ ಅವಧಿಗೆ ಇಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು

ಇ) ಬೇರೆ ಭಾಗದ ಹೆಣ್ಣು ಮಗಳು ಈ ಮೇಲಿನ ಶರತ್ತು ಪೂರೈಸುವ ವ್ಯಕ್ತಿಯನ್ನು ಮದುವೆಯಾದರೆ, ಅವಳನ್ನು ಈ ಭಾಗದ ನಿವಾಸಿಯೆಂದು ಪರಿಗಣಿಸಲಾಗುತ್ತದೆ.

ಹೀಗೆ ಹೈದ್ರಾಬಾದ ಕರ್ನಾಟಕದ ನಿವಾಸಿಗಳೆಂದು ಪರಿಗಣಿಸಲು ಶರತ್ತುಗಳನ್ನು ವಿಧಿಸಿ ಗುರುತಿಸಲು ಪ್ರಯತ್ನಿಸಲಾಗಿದೆ.

ಹೈದ್ರಾಬಾದ ಕರ್ನಾಟಕದ ನಿವಾಸಿಯ ಪ್ರಮಾಣಪತ್ರ

ಹೈದ್ರಾಬಾದ ಕರ್ನಾಟಕದ ನಿವಾಸಿಗಳೆಂದು ಸಾಬಿತುಪಡಿಸಲು ಪ್ರಮಾಣ ಪತ್ರಗಳನ್ನು ಪಡೆಯಲು ಸರಕಾರ ವಿಶೇಷ ಅಧಿಸೂಚನೆ ಹೊರಡಿಸಿದೆ. ಒಬ್ಬ ವ್ಯಕ್ತಿಯು ತಾನು ಸ್ಥಳೀಯ ವ್ಯಕ್ತಿ ಎಂದು ಸಾಬಿತುಪಡಿಸಲು ಬೇಕಾದ ಅರ್ಹತಾ ಪ್ರಮಾಣಪತ್ರವನ್ನು ಪಡೆಯಲು ಕೆಲವೊಂದು ಪೂರಕ ಪ್ರಮಾಣಪತ್ರಗಳ ಅವಶ್ಯಕತೆಯಿದೆ. ಅವುಗಳಲ್ಲಿ (ಎ) ಜನನ ಪ್ರಮಾಣ ಪತ್ರ ಅಥವಾ (ಬಿ) ವಾಸಸ್ಥಳ ಪ್ರಮಾಣ ಪತ್ರ (ಅನುಬಂಧ-ಬಿ) ಅಥವಾ (ಸಿ) ವ್ಯಾಸಂಗ ಪ್ರಮಾಣ ಪತ್ರ (ಅನುಬಂಧ-ಸಿ) ಅಥವಾ (ಡಿ) ವಿವಾಹ ಪ್ರಮಾಣ ಪತ್ರ ಅಥವಾ (ಇ) ಸ್ವಗ್ರಾಮ (ಅಥವಾ ಸ್ಥಳ) ಪ್ರಮಾಣ ಪತ್ರ (ಅನುಬಂಧ-ಡಿ) ಅಥವಾ (ಎಫ್) ವಾರಸುದಾರ ಪ್ರಮಾಣಪತ್ರ.

ಇವುಗಳಲ್ಲಿ ವಾಸಸ್ಥಳ ಪ್ರಮಾಣ ಪತ್ರ ಮತ್ತು ವಾರಸು ಪ್ರಮಾಣಪತ್ರವನ್ನು ತಹಸೀಲದಾರರು ನೀಡುತ್ತಾರೆ. ವ್ಯಾಸಂಗ ಪ್ರಮಾಣ ಪತ್ರವನ್ನು ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಹತ್ತಿರ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಪಡೆಯಬೇಕು.

ಈ ಮೇಲಿನ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಪ್ರಮಾಣಪತ್ರಗಳನ್ನು ಪಡೆದು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಅವರು ಪರಿಶೀಲಿಸಿ ಅನುಬಂಧ-ಎ ಯಲ್ಲಿರುವ ನಮೂನೆಯಲ್ಲಿ ಅರ್ಹತಾ ಪ್ರಮಾಣಪತ್ರವನ್ನು ನೀಡುತ್ತಾರೆ. ಅದರ ನಂತರ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ

ಇಲಾಖೆ, ನಿಗಮ	ಹುದ್ದೆಗಳು	ಹುದ್ದೆಗಳ	ಅಧಿಸೂಚನೆ ದಿನಾಂಕ	ಷರಾ
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ	36	ಕಾಯಂ	19-03-2013	ನೇಮಕಾತಿ ಆದೇಶ ನೀಡಲಾಗಿದೆ
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ	48	ಕಾಯಂ	19-03-2013	ನೇಮಕಾತಿ ಆದೇಶ ನೀಡಲಾಗಿದೆ
ಕೆ.ಎಂ.ಎಫ್., ಬೆಂಗಳೂರು	207	ಕಾಯಂ	04-09-2013	ಆಯ್ಕೆ ಪಟ್ಟಿಯಾಗಿದೆ
ಕೆ.ಎಂ.ಎಫ್., ಬೆಂಗಳೂರು	04	ಕಾಯಂ	16-12-2013	ಪ್ರಗತಿಯಲ್ಲಿದೆ
ಆರೋಗ್ಯ ಇಲಾಖೆ (ಏಡ್ಸ್ ನಿಯಂತ್ರಣ ಸಂಸ್ಥೆ), ಬೆಂಗಳೂರು	184	ಗುತ್ತಿಗೆ ಆಧಾರಿತ	07-10-2013	ನೇಮಕಾತಿ ಆದೇಶ ನೀಡಲಾಗಿದೆ
ಸೊಸೈಟಿ ಫಾರ್ ಕರ್ನಾಟಕ-ಜರ್ಮನ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್, ಕಾರ್ಮಿಕ ಇಲಾಖೆ	35	ಕಾಯಂ	15-11-2013	ಪ್ರಗತಿಯಲ್ಲಿದೆ
ಆರೋಗ್ಯ ಇಲಾಖೆ, ಬೆಂಗಳೂರು	10	ಗುತ್ತಿಗೆ ಆಧಾರಿತ	07-12-2013	ಪ್ರಗತಿಯಲ್ಲಿದೆ
ಆರೋಗ್ಯ ಇಲಾಖೆ, ಬೀದರ	20	ಗುತ್ತಿಗೆ ಆಧಾರಿತ	13-12-2013	ಪ್ರಗತಿಯಲ್ಲಿದೆ
ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು	78	ಹೊರ ಗುತ್ತಿಗೆ	07-12-2013	ಪ್ರಗತಿಯಲ್ಲಿದೆ
ತೋಟಗಾರಿಕೆ ಇಲಾಖೆ, ಬಾಗಲಕೋಟ	76	ಕಾಯಂ	16—2013	ಆಯ್ಕೆಯಾಗಿದೆ

...ಕಾರಿಗಳು ನೀಡುವ ಸಿಂಧುತ್ವ ಪ್ರಮಾಣ ಪತ್ರ ...ಬಂಧ-೩) ಅಂತಿಮವಾಗಿರುತ್ತದೆ.

...ದೇರೀತಿ ಸರಕಾರಿ ಸೇವೆಯಲ್ಲಿರುವ ನೌಕರಸ್ಥರು, ...ಮ ಅಥವಾ ಸ್ಥಳದ ಪ್ರಮಾಣಪತ್ರವನ್ನು ನೀಡಿ ಅರ್ಹತಾ ...ಣ ಪತ್ರ ಮತ್ತು ಸಿಂಧುತ್ವ ಪ್ರಮಾಣಪತ್ರ ಪಡೆದು ...ಬೇಕು. ಈ ರೀತಿಯ ಪ್ರಮಾಣ ಪತ್ರ ನೀಡಿ ಸ್ಥಳೀಯ ...ೆಂದು ಕ್ಲೇಮು ಮಾಡದಿದ್ದಲ್ಲಿ ಅವರ ಸೇವಾ ...ಕದಲ್ಲಿರುವ ಸ್ವಗ್ರಾಮ ಅಥವಾ ಸ್ಥಳದ ಆಧಾರದ ...ೆ ನಿರ್ಧರಿಸಲಾಗುತ್ತದೆ. ಇದರ ಆಧಾರದ ಮೇಲೆ ...ಕು ವೃಂದಗಳನ್ನು ಮಾಡಲಾಗುತ್ತದೆ. ಒಂದು ಸ್ಥಳೀಯ ...ಕ ಮತ್ತು ಇನ್ನೊಂದು ರಾಜ್ಯ ಮಟ್ಟದ ವೃಂದ. ...ನ್ನು ಮುಂದೆ ಬಡ್ತಿಗಾಗಿ ಮತ್ತು ಖಾಲಿ ಹುದ್ದೆಗಳ ...ಂಶಗಳನ್ನು ಪಡೆಯಲು ಬಳಸಲಾಗುತ್ತದೆ.

...4. ಅಭಿವೃದ್ಧಿ ಮಂಡಳಿ ರಚಿಸುವುದು

...ಸಂವಿಧಾನಬದ್ಧ ಅಭಿವೃದ್ಧಿ ಮಂಡಳಿ ರಚಿಸುವಾಗ ...ಮುಖ್ಯವಾಗಿ ಚರ್ಚೆಗೆ ಬರುವ ವಿಷಯ ಈ ...ಡಳಿಯ ಅಧ್ಯಕ್ಷರು ರಾಜ್ಯಪಾಲರಾಗಿರುತ್ತಾರೆ ಎನ್ನುವದು, ...ನವಾಗಿ ರಾಜ್ಯಪಾಲರು ರಾಜ್ಯದ ಪ್ರಮುಖರಾಗಿರುತ್ತಾರೆ. ...ದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಅಧ್ಯಕ್ಷರು, ...ಸ್ಯರು, ವಿಷಯ ಪರಿಣಿತರು, ಅಧಿಕಾರಿಗಳು, ...ಪ್ರತಿನಿಧಿಗಳನ್ನು ರಾಜ್ಯ ಸರಕಾರದ ಶಿಫಾರಸ್ಸಿನಂತೆ ...ಪಾಲರು ನೇಮಿಸುತ್ತಾರೆ ವಿನಃ ಅವರೇ ಅದರ ...ಕ್ಷರಾಗುವದಿಲ್ಲ. ಈ ಮಂಡಳಿಯ ಮೂಲಕ ...ದ್ರಾಬಾದ ಕರ್ನಾಟಕದ ಪ್ರತಿಯೊಂದು ತಾಲ್ಲೂಕುಗಳ ...ಶ್ಯಕತೆಗನುಗುಣವಾಗಿ ಯೋಜನೆಯೊಂದು ರೂಪಿಸಿ ಅದನ್ನು ಹಂತಹಂತವಾಗಿ ಜಾರಿಗೊಳಿಸುವ ಜವಾಬ್ದಾರಿ ಮಂಡಳಿಯ ಕೆಲಸವಾಗಿದೆ. ಸದರಿ ಯೋಜನೆಯಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದ ಸಾಮಾನ್ಯ ಆಯವ್ಯಯದಲ್ಲಿ ಸೇರಿಸದೇ ಅದನ್ನು ಪ್ರತ್ಯೇಕವಾಗಿ ಮಂಡಿಸಬೇಕಾಗುತ್ತದೆ. ಇದರಿಂದ ರಾಜ್ಯ ಸರಕಾರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಅವಕಾಶವಿರುವದಿಲ್ಲ. ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಆಡಳಿತಾತ್ಮಕ ದೃಷ್ಟಿಯಿಂದ ಎರಡು ಸಮಿತಿಗಳನ್ನು ರಚಿಸಲಾಗಿದೆ. ಒಂದು ಮಂಡಳಿಯನ್ನು ಸಲಹಾ ಸಮಿತಿಯೆಂದು ಕರೆಯಲಾಗಿದ್ದು, ಇದು ವರ್ಷದಲ್ಲಿ ಒಮ್ಮೆ ಸಭೆ ಸೇರಿ ಕಾರ್ಯಕಾರಿ ಮಂಡಳಿಗೆ ಸಲಹೆಗಳನ್ನು ನೀಡಬಹುದು. ಈ ಸಮಿತಿಯಲ್ಲಿ ಈ ಭಾಗದ ಒಬ್ಬ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿದ್ದು, ಈ ಭಾಗದ ಎಲ್ಲ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಲೋಕಸಭಾ, ರಾಜ್ಯಸಭಾ ಸದಸ್ಯರು, ಎಲ್ಲ ಜಿಲ್ಲಾ ಪಂಚಾಯತ್, ನಗರಸಭೆ ಅಧ್ಯಕ್ಷರು ಸದಸ್ಯರಾಗಿರುತ್ತಾರೆ.

ಮುಖ್ಯವಾಗಿ ಒಂದು ಕಾರ್ಯಕಾರಿ ಮಂಡಳಿ ರಚಿಸಲಾಗಿದ್ದು, ಈ ಸಮಿತಿಗೆ ಹೈದ್ರಾಬಾದ ಕರ್ನಾಟಕದ ಜಿಲ್ಲಾ ಉಸ್ತುವಾರಿ ಸಚಿವರು ಒಬ್ಬರು ಅಧ್ಯಕ್ಷರಾಗಿರುತ್ತಾರೆ. ಎಂಟು ಜನ ಶಾಸಕರು, ಒಬ್ಬ ವಿಧಾನ ಪರಿಷತ್ ಸದಸ್ಯರು, ಒಬ್ಬ ಲೋಕಸಭಾ, ಒಬ್ಬ ರಾಜ್ಯಸಭಾ ಸದಸ್ಯರು, ಒಬ್ಬ ಜಿಲ್ಲಾ ಪಂಚಾಯತ, ಒಬ್ಬ ನಗರಸಭೆ ಅಧ್ಯಕ್ಷರು ಒಂದು ವರ್ಷದ ಅವಧಿಗೆ ಸದಸ್ಯರಾಗಿರುತ್ತಾರೆ. ಈ ಸಮಿತಿಯು ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಮಂಡಳಿಯ ಎಲ್ಲ ಕಾರ್ಯಗಳನ್ನು ನೋಡಿಕೊಳ್ಳುವುದರ ಜೊತೆಗೆ ಅನುಷ್ಠಾನದ ಜವಾಬ್ದಾರಿಯೂ ಅವರ ಮೇಲಿದೆ.

ಈ ಭಾಗದ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕರು ಜವಾಬ್ದಾರಿಯಿಂದ ನಡೆದುಕೊಂಡು, ಈ ಕಾನೂನು ಸಮಗ್ರವಾಗಿ ಅನುಷ್ಠಾನಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸ ಬೇಕಿದೆ. ಇಲ್ಲದೇ ಇದ್ದಲ್ಲಿ ಹತ್ತರ ಜೊತೆ ಹನ್ನೊಂದಾಗಿ ಉಪಯೋಗಕ್ಕೆ ಬಾರದಂತಾಗುತ್ತದೆ. ಪ್ರಮುಖವಾಗಿ ಅಧಿಕಾರಿಗಳು ನಾಗರಿಕರನ್ನು ಹೈದ್ರಾಬಾದ ಕರ್ನಾಟಕದ ನಿವಾಸಿಗಳೆಂದು ಗುರುತಿಸುವಾಗ ಆಗುವ ಲೋಪದೋಷ ಗಳನ್ನು ಸರಿಪಡಿಸುವದಾಗಬೇಕಿದೆ. ಇಲ್ಲದೇ ಇದ್ದಲ್ಲಿ ಪಕ್ಕದ ಜಿಲ್ಲೆಯ ಜನ ನಮ್ಮೊಳಗೆ ನುಸುಳಿ ಸ್ಥಳೀಯರೆಂದು ಪ್ರಮಾಣಪತ್ರ ಪಡೆಯುವ ಹುನ್ನಾರ ನಡೆಯುತ್ತದೆ.

ಅದೇರೀತಿಯಾಗಿ ಈಗಾಗಲೇ ಸರಕಾರ ಹೈದ್ರಾಬಾದ ಕರ್ನಾಟಕಕ್ಕೆ ಸಂವಿಧಾನದ 371 (ಜೆ) ಕಲಂ ಜಾರಿಯಾಗುವ ವರೆಗೂ ಯಾವುದೇ ಸರಕಾರಿ ಹುದ್ದೆಗಳ ನೇಮಕಾತಿಗಳನ್ನು ತಡೆಹಿಡಿಯಲಾಗಿದೆ ಎಂದು ಆದೇಶಿಸಿದೆ. ಆದರೂ ಹಲ ವಾರು ಇಲಾಖೆ ಸರಕಾರದ ಆದೇಶವನ್ನು ಧಿಕ್ಕರಿಸಿ ನೇಮಕಾತಿ ಪ್ರಕ್ರಿಯೆಗಳನ್ನು ಮುಂದುವರೆಸಿವೆ. ಅವುಗಳನ್ನು ಗುರುತಿಸಿ ಸರಕಾರದ ಗಮನಕ್ಕೆ ಮತ್ತು ನಮ್ಮ ಜನಪ್ರತಿನಿಧಿಗಳ ಮೇಲೆ ಒತ್ತಡ ತಂದು ನಿಲ್ಲಿಸುವ ಕೆಲಸವಾಗಬೇಕು.

ಯಾಕೆಂದರೆ, ಕಾನೂನು ರಚಿಸಿದ ಸರಕಾರದ ಅಧಿಕಾರಿಗಳೇ ಅದನ್ನು ಉಲ್ಲಂಘಿಸಿ ನೇಮಕಾತಿ ಮಾಡುತ್ತಿರುವುದು ನಮಗೆಲ್ಲ ದಿಗ್ಭ್ರಮೆ ಮೂಡಿಸಿದೆ. ಕರ್ನಾಟಕ ರಾಜ್ಯ ಸರಕಾರ 23-02-2013 ರಂದು ಆದೇಶ ಹೊರಡಿಸಿ ಹೈದ್ರಾಬಾದ ಕರ್ನಾಟಕದಲ್ಲಿ ನಡೆಯುತ್ತಿರುವ ಎಲ್ಲ ನೇಮಕಾತಿ/ಬಡ್ತಿ ಪ್ರಕ್ರಿಯೆಗಳನ್ನು ತಡೆಹಿಡಿದು 371 (ಜೆ) ಕಲಂ ಅನ್ವಯ ಕಾನೂನು ಜಾರಿಯಾಗುವವರೆಗೂ ಮುಂದುವರೆಸಬಾರದೆಂದು ಆದೇಶಿಸಿತ್ತು. ನವೆಂಬರ್ ತಿಂಗಳಲ್ಲಿ ಮತ್ತೊಂದು ಆದೇಶ ಮಾಡಿ 01-01-2013ರ ನಂತರ ಹೊರಡಿಸಲಾದ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ವಾಪಸ್ ಪಡೆದು ಹೈದ್ರಾಬಾದ ಕರ್ನಾಟಕಕ್ಕೆ ಮೀಸಲಾತಿ ನಿಗದಿಗೊಳಿಸ ಬೇಕೆಂದು ಆದೇಶಿಸಿದೆ. ಆದರೆ, ಸರಕಾರದ ಆದೇಶಗಳನ್ನು ಉಲ್ಲಂಘಿಸಿ ವಿವಿಧ ಇಲಾಖೆಗಳಲ್ಲಿ ಹಲವಾರು ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಹೈದ್ರಾಬಾದ ಕರ್ನಾಟಕದ ಅಭ್ಯರ್ಥಿಗಳ ಮೀಸಲಾತಿ ನಿಗದಿಪಡಿಸದೇ ನೀಡಲಾಗಿದ್ದು ಮತ್ತು ಕೆಲವೊಂದು ಇಲಾಖೆಗಳಲ್ಲಿ ತರಾತುರಿಯಲ್ಲಿ ನೇಮಕಾತಿ ಆದೇಶಗಳನ್ನು ನೀಡಲಾಗಿದೆ. (ಬಾಕ್ಸ್ ನೋಡಿ)

ಇಲಾಖೆ ಮುಖ್ಯಸ್ಥರನ್ನು ವಿಚಾರಿಸಲಾಗಿ, ಅವರು ಮುಖ್ಯಮಂತ್ರಿಗಳೇ ನೇಮಕಾತಿಗಾಗಿ ವಿಶೇಷ ಅನುಮತಿ ನೀಡಿದ್ದು ನಾವೇನು ಮಾಡಲು ಬರುವುದಿಲ್ಲ ಎಂದು ಅಸಹಾಯಕತೆ ತೋಡಿಕೊಂಡಿರುತ್ತಾರೆ. ಒಂದು ರಾಜ್ಯದ ಮುಖ್ಯಮಂತ್ರಿಗಳೇ ಈ ರೀತಿ ಸಂವಿಧಾನ ಉಲ್ಲಂಘಿಸು ತ್ತಿರುವುದು ಖಂಡನೀಯವಾಗಿರುತ್ತದೆ ಮತ್ತು ಕಣ್ಣೊರೆಸುವ ತಂತ್ರಗಾರಿಕೆಯನ್ನು ಬಿಡಬೇಕಾದದ್ದು ಅವಶ್ಯ.

ಇತ್ತೀಚಿಗೆ ರಾಜ್ಯ ವಿಧಾನಸಭೆಯ ಅಧಿವೇಶನದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಗಣೇಶ ಕಾರ್ಣಿಕ್ ಅವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳ ವಿರುದ್ಧ ಹೈದ್ರಾಬಾದ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಕ್ಕಾಗಿ ಹಕ್ಕುಚ್ಯುತಿ ಮಂಡನೆ ಮಾಡಿದ್ದಾರೆ. ಪರಿಷತ್‌ನಲ್ಲಿ ಹೈದ್ರಾಬಾದ ಕರ್ನಾಟಕದ ಆರು ಜನ ಸದಸ್ಯರಿದ್ದು ಅವರ್‍ಯಾರು ಮಾಡದ ಕೆಲಸವನ್ನು ಮಾಡಿ ಈ ಭಾಗದವರು ನಾಚಿಕೆಪಡುವಂತೆ ಮಾಡಿದ್ದಾರೆ. ವಿಧಾನ ಪರಿಷತ್ ಸದಸ್ಯ ಗಣೇಶ ಕಾರ್ಣಿಕ್ ಅವರಿಗೆ ಹೈದ್ರಾಬಾದ ಕರ್ನಾಟಕದ ಜನತೆ ಚಿರಋಣಿಯಾಗಿದ್ದಾರೆ.

ಸಂವಿಧಾನದ 371 (ಜೆ) ಕಲಂ ಹೋರಾಟ ಮುಕ್ತಾಯವಾಗಿಲ್ಲ ಈಗ ಪ್ರಾರಂಭವಾಗಬೇಕಿದೆ. ಅದಕ್ಕೆ ನಾವೆಲ್ಲರೂ ತಯಾರಾಗೋಣ. ಒಟ್ಟಾರೆಯಾಗಿ, ಹೈದ್ರಾಬಾದ ಕರ್ನಾಟಕ ಈಗಲಾದರೂ ಅಭಿವೃದ್ಧಿ ಕಾಣಲಿ ಎಂದು ಹಾರೈಸೋಣ.




ಡಾ. ರಝಾಕ ಉಸ್ತಾದ್
ರಾಜ್ಯ ಉಪಾಧ್ಯಕ್ಷರು,
ಹೈದ್ರಾಬಾದ ಕರ್ನಾಟಕ
ಹೋರಾಟ ಸಮಿತಿ,

ಗಜಲ್

...ಕಲ ಶೃಂಗಾರವಾಗಿದೆ ಇಂದು ರಾತ್ರಿ ಅವನ ಬರುವಿದೆ
...ದುಕು ದಯೆ ತೋರಿತು ವಾಗ್ದಾನದ ಇರುಳು ತಂಪಿನ ಬರುವಿದೆ

...ನ ಹಂಗು ಮರೆತು ಬೇಕಾಗಿದ್ದನ್ನು ಪಡೆದುಕೊಂಡೆ
...ದರೂ ಚಿಂತೆಯಿಲ್ಲ ಇಂದು ಸಿಹಿನೆನಪಿನ ಬರುವಿದೆ

...ತ್ರಿ ಚಂದ್ರ ಪಾತ್ರೆಯಲ್ಲಿ ಕೆಂಪು ಮದ್ಯ ತಂದು ಕೊಟ್ಟಿತು
...ನ್ನ ಮತ್ತೇರುವಂಥ ಅವನ ಮೈ ಕಂಪಿನ ಬರುವಿದೆ



...ದು ನಾಳಿನ ವ್ಯತ್ಯಾಸವೇ ಮರೆತು ಹೋದಂಥ ಹಿಗ್ಗು
...ದ ಕತ್ತಲೆಯನ್ನು ಮರೆಸುವ ಬೆಳದಿಂಗಳಿನ ಬರುವಿದೆ

...ಸ್ವನಿಯದ ಮದೋನ್ಮತ್ತ ಇರುಳು ಉದ್ವೇಗದ ಗಳಿಗೆಯು
...ಆಗುವುದೋ ಏನೋ ನಕ್ಷತ್ರ ಗೊಂಚಲಿನ ಬರುವಿದೆ

...ಕುವನೋ ಬಿಡುವನೋ ಇಂತ ತರ್ಕ ಸಹಜ ಲೋಕದಲ್ಲಿ
...ಕು ದಿನವೆಲ್ಲ ಶಂಕೆಗೊಳಗಾಗಿದ್ದ ಒಲವಿನ ಬರುವಿದೆ

...ಳಸಂಚೆಯಲ್ಲಿ ಮೂಡಿದವು ಸ್ಪಷ್ಟ ಹೆಜ್ಜೆ ಗುರುತುಗಳು
...ರಾಯಿತು ಹಿಮದಿಂದ ಮುಸುಕಿದ ವಸಂತನ ಬರುವಿದೆ

...ದುಕು ನೀರಸವಾಗಿತ್ತು ಮೇಲೆ ಏಕಾಂತವೂ ಇತ್ತು
...ಕ್ಕೆ ಇಂದಾದರೂ ದೂರದಿರು ಬಿಸಿ ಮುತ್ತಿನ ಬರುವಿದೆ

● ಎಚ್.ಎಸ್.ಮುಕ್ತಾಯಕ್ತ

ಗಜಲ್ 1

ಓತ್ತುವ ತಾಲೀಮು ಮಾಡಬೇಡ ಹೊಲದ ಬದುವಿಗೆ ಮಾತು ಬರಬಹುದು
ವಿಷವ ಹರಡಿಕೊಂಡು ಬಲವಂತದಿ ಪ್ರಸವಿಸುವ ಮಣ್ಣಿಗೆ ಮಾತು ಬರಬಹುದು

ಸೀಳು ಕಾಣಬಾರದೆಂದು ಮೆತ್ತನೆಯ ತುಟಿಗೆ ಸುಂದರ ಬಣ್ಣ ಹರಡಬೇಡ
ದರ್ಗಾ ಹೋಗಿ ದೇವಾಲಯವಾದ ಕಲ್ಲಿಗೆ ಕಾಲಕಾಲಕೆ ಮಾತು ಬರಬಹುದು

ತನ್ನೊಳಗಿನ ರಾಕ್ಷಸತ್ವ ಅಳಿಯದ ರಾಮನ ಬಿಲ್ಲು ಎತ್ತುವ ಸಾಹಸಬೇಡ
ಕಪಟ ಚಕಮಕಿಯಿಂದ ಹೊರಟ ಬಂದೂಕಿನ ಗುಂಡಿಗೆ ಮಾತು ಬರಬಹುದು

ಕಬಂಧ ಬಾಹುಗಳೊಳಗೆ ಮುಳುಗಿಸಿ ರಸ ಸವಿದ ಗಳಿಗೆ ಮತ್ತೆ ನೆನೆಯಬೇಡ
ಹಸಿವಿಗಾಗಿ ದೇಹವ ಮಾರಿಕೊಂಡ ಹಾಸಿದ ಬಿಸ್ತರಕ್ಕೆ ಮಾತು ಬರಬಹುದು

ಮಂಪರಿಗೆ ಜಾರಿದರೆ ಮಾತುಗಳು ಪರದಾ ಕಟ್ಟಿಬಿಡುತ್ತವೆ ನಂಬಬೇಡ ಗೆಳತಿ
ಯಾಕೆಂದರೆ, ಮತಾಂಧರು ಈ ದಾಸನ್ ಜೊತೆಬಿಟ್ಟ ಜಾತಿಗೆ ಮಾತು ಬರಬಹುದು.

ಗಜಲ್ 2

ಚೆಂಬುಕಲ್ಲಿನ ಮೇಲೆ ಕತ್ತಿಯ ವಿಚಾರ ಕೆತ್ತಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ
ಸ್ವಾತಂತ್ರ್ಯದ ಬಾಂಬಿಗೆ ಸಿಡಿವ ರಸಾಯನ ಆಗಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ

ನನಗೂ ಮಾನವ ಪ್ರೇಮದ ಪ್ರೀತಿ ಯಾರಿಗಿಂತಲೂ ಕಡಿಮೆಯೇನೂ ಇಲ್ಲ
ನಾನು ಸೇನಾಪತಿಗಳಂತೆ ಕೊಲೆ ಪಾತಕ ಆಗಬಾರದೆಂದಿದ್ದೆ ಆಸೆ ಕೈಗೂಡಲಿಲ್ಲ

ಗುಲಾಬಿಯಷ್ಟೇ ಪವಿತ್ರವಾದ ಇಂಕಿಲಾಬ್ ನನ್ನ ರಕುತದಂತೆ ಕೆಂಪಾಗಿತ್ತು
ಪಕಳೆಗಳ ಕೆಳಗಿದ್ದ ಮುಳ್ಳುಗಳ ಒಂದಾಗಿಸಿ ಮುತ್ತಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ

ಬೆವರ ವಾಸನೆ ಅರಿಯದ ಜನ ಗುಲಾಬಿಯ ವಾರಸುದಾರರ ನೋಯಿಸಿತ್ತು
ಎಚ್ಚರವಾಗಿ ಬೆಚ್ಚಗಿನ ಕೆಂಪನ್ನು ಕೈಹಿಡಿದು ಸಾಗಿಸಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ



ರಕ್ತ ಮೆತ್ತಿದ ಮಣ್ಣನ್ನೆತ್ತಿ ಹಣೆಗೆ ತಿಲಕವನ್ನಿಟ್ಟ
ಬಾಲ್ಯ ನನ್ನನ್ನು ಕೆಂಪಾಗಿಸಿತ್ತು
ಕುದಿವ ಗುಂಡಿಗೆಯು ರಕುತದಿ ಬೆದರಿಸುವ
ಸದ್ದಾಗಿಸಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ

ಕ್ರಾಂತಿಯ ಹಾದಿಯಲಿ ಹಾಕಿದ ಕಣ್ಣೀರು ಇಬ್ಬನಿಯಾಗಿ
ನಿನ ಮುಕುಟದ ಮೇಲಿದೆ
[illegible] ಹಿದುವುಕ್ಕಿಸಿ ಕೆಂಪಾಗಿಸಿ ಈ ದಾಸನ
ಬಲಿಯಾಗಿಸಬೇಕೆಂದಿದ್ದೆ ಆಸೆ ಕೈಗೂಡಲಿಲ್ಲ

● ರಮೇಶ ಗಬ್ಬೂರು

ಮರೆವು (ಗಜಲ್)

ಎಂಥ ಜಾಣಮರೆವು ಜಗಕೆ ತಾಯಕೂಗೇ ಕೇಳುತಿಲ್ಲ
ಕಣ್ಣು ತಲೆಗೆ ಏರಿ ಕೂತು ನಡೆವ ನೆಲವೂ ಕಾಣುತಿಲ್ಲ

ಎತ್ತುಗಳಿಗೆ ಮೇವು ಇಲ್ಲ ಬಿತ್ತಲಿಕ್ಕೆ ಬೀಜ ಇಲ್ಲ
ರೆಸಾರ್ಟಿನಲ್ಲಿ ದೊರೆಗೆ ತುರಿಸಿಕೊಳಲೂ ಸಮಯವಿಲ್ಲ



ಒಳೊಳಗೆ ಚಿವುಟ ಜನರು ಮೇಲೆ ತೊಟ್ಟಿಲ ತೂಗುವರಲ್ಲ
ಮೈಕು ಮುಂದೆ ಏನು ಮಾತು, ರೈತರಾಗಿಬಿಡುವರಲ್ಲ

ಅಂಗಿ ರೇಟು ಹತ್ತಿಗಿಲ್ಲ, ಎಣ್ಣೆ ರೇಟು ಕಾಳಿಗಿಲ್ಲ
ಕೊಳ್ಳುವವನು ಮಾರುವವನು ನಡುವಿನವನನೂ ಹಿಡಿವರಿಲ್ಲ

ಅತಿವೃಷ್ಟಿಗೂ ಅನಾವೃಷ್ಟಿಗೂ ಮುಳುಗುವುದು ತಪ್ಪಲಿಲ್ಲ
ಹುಳುಹುಪಟಿಯೂ ಮುಳುವಾಗಿ ಬೆಳೆಯು ಕೈಗೆ ಹತ್ತಲಿಲ್ಲ

ಮೂರು ಬಟ್ಟು ನಿಂತ ಅವರಿಗೆ ನೆಲ ನೀರು ಗಾಳಿ ಸಾಲಲಿಲ್ಲ
ಜಗಕೆ ಉಣಿಸಿ ಹೊರೆದವನಿಗೆ ಉಪವಾಸ ಜಾಗರಣೆ ತಪ್ಪಲಿಲ್ಲ


ಹಾಲೂಡಿದ ಅಮ್ಮ ನೆದೆಗೇ ಕಾಲ್‌ಜಾಡಿಸಿ ಓಡಿವನಲ
ವಿಷದ ಹಾವಿನ ಸಹವಾಸಿಗೆ ಕೇಡು ಎಂದಿಗೂ ತಪ್ಪದಲ



● ಚಿದಾನಂದ ಸಾಲಿ, ರಾಯಚೂರು

ಹೈದರಾಬಾದ್ ಕರ್ನಾಟಕ ಪ್ರದೇಶದ ಆರ್ಥಿಕತೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ 1947ರ ನಂತರ ಮತ್ತು ನಮ್ಮ ರಾಜ್ಯದ ಏಕೀಕರಣವಾದ 1956ರ ನಂತರ ಸಾಕಷ್ಟು ಬದಲಾವಣೆಗಳು ಮತ್ತು ಸುಧಾರಣೆಗಳು ಸಂಭವಿಸಿವೆ. ಆದರೆ ಅದು ಎಲ್ಲ ಜನರನ್ನೂ, ಎಲ್ಲ ಪ್ರದೇಶವನ್ನೂ, ಎಲ್ಲ ಲಿಂಗಗಳನ್ನೂ ಒಳಗೊಳ್ಳುವ ರೀತಿಯಲ್ಲಿಲ್ಲ. ಸಮಾಜದಲ್ಲಿ ಯಾರು ಪ್ರಬಲರಾಗಿರುತ್ತರೋ, ಯಾರಿಗೆ ಸಾಮಾಜಿಕವಾಗಿ ಉನ್ನತ ಸ್ಥಾನಮಾನವಿರುತ್ತದೊ, ಯಾರು ಆಸ್ತಿವಂತರಾಗಿರುತ್ತಾರೋ ಅವರಿಗೆ ಅಭಿವೃದ್ಧಿಯ ಫಲಗಳು ದೊರೆಯುತ್ತಿರುತ್ತವೆ. ಇದು ಪ್ರಾದೇಶಿಕವಾಗಿಯೂ ನಿಜ. ಈ ಕಾರಣದಿಂದಾಗಿ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯು ಅನಿವಾರ್ಯವಾಗಿ ಬಿಡುತ್ತದೆ.




ಪ್ರಸ್ತಾವನೆ

ಹೈದರಾಬಾದ್ ಕರ್ನಾಟಕ (ಹೈ.ಕ.) ಪ್ರದೇಶದ ಆರ್ಥಿಕತೆ ಎಂಬುದು ಸುಮಾರು 112 ಲಕ್ಷ ಜನರ ಬದುಕಿನ ಸಂಗತಿಯಾಗಿದೆ. ಆರ್ಥಿಕತೆ ಅನ್ನುವುದು ತುಂಬಾ ಸೀಮಿತವಾದ ಅರ್ಥವ್ಯಾಪ್ತಿಯ ಸೈದ್ಧಾಂತಿಕ ನುಡಿಯಾಗಿದೆ. ಆದ್ದರಿಂದ ಇಲ್ಲಿ ಚರ್ಚೆಯನ್ನು 'ರಾಜಕೀಯಾರ್ಥಿಕ' ನೆಲೆಯಲ್ಲಿ ನಡೆಸಲು ಪ್ರಯತ್ನಿಸಲಾಗಿದೆ. ರಾಜಕೀಯಾರ್ಥಿಕ ನೆಲೆ ಎಂಬುದು ಪ್ರದೇಶದಲ್ಲಿನ ವರ್ಗ ಸಂಬಂಧಗಳು, ಉತ್ಪಾದನಾ ಶಕ್ತಿಗಳ ಸ್ವರೂಪ, ಉತ್ಪನ್ನದ ವಿತರಣೆಯ ಆಯಾಮಗಳು, ದುಡಿಯುವ ವರ್ಗ, ಲಿಂಗ ಸಂಬಂಧಗಳು ಮುಂತಾದ ಸಂಗತಿಗಳ ಚೌಕಟ್ಟಿನಲ್ಲಿ ನಡೆಸುವ ಚರ್ಚೆಯಾಗಿದೆ. ರಾಜಕೀಯಾರ್ಥಿಕ ನೆಲೆಯಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಳಿಕೊಳ್ಳುವ ಪ್ರಶ್ನೆಗಳು ವಾಡಿಕೆಯಲ್ಲಿ ಕೇಳಿಕೊಳ್ಳುವ ಪ್ರಶ್ನೆಗಳಿಗಿಂತ ಭಿನ್ನವಾಗಿರುತ್ತವೆ. ವರಮಾನವು ಯಾವ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ, ಪ್ರತಿ ತಲಾ ಫವರ್ ಅನುಭೋಗ ಎಷ್ಟಿದೆ, ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣ ಕಡಿಮೆಯಾಗುತ್ತಿದೆಯೇ ಮುಂತಾದವು ಇಲ್ಲಿ ಸಾಮಾನ್ಯವಾಗಿ ಕೇಳಿಕೊಳ್ಳುವ ಪ್ರಶ್ನೆಗಳಾಗಿವೆ. ಆದರೆ ರಾಜಕೀಯಾರ್ಥಿಕ ಚೌಕಟ್ಟಿನಲ್ಲಿ ಕೇಳಿಕೊಳ್ಳುವ ಪ್ರಶ್ನೆಗಳೆಂದರೆ ಏರಿಕೆಯಾದ ವರಮಾನವು ಜನರ, ಅಂದರೆ ವಂಚಿತರ, ಅಂಚಿನಲ್ಲಿರುವವರ ಬದುಕಾಗಿ ಪರಿವರ್ತನೆಗೊಂಡಿದೆಯೇ? ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಎಷ್ಟಿದೆ, ಅದರಲ್ಲಿ ಮಹಿಳೆಯರ ಪ್ರಮಾಣ ಎಷ್ಟು, ಮಹಿಳೆಯರಲ್ಲಿ ಅನಿಮಿಯಾ ಯಾಕಿದೆ ಮತ್ತು ಎಷ್ಟಿದೆ ಮುಂತಾದವು. ಗುಲಬರ್ಗಾ ವಿಭಾಗವು ರಾಜ್ಯದ ಒಟ್ಟು ಪ್ರದೇಶದಲ್ಲಿ ಶೇ 18.47ರಷ್ಟು ಪಾಲನ್ನು, ರಾಜ್ಯದ ಜನಸಂಖ್ಯೆಯಲ್ಲಿ ಶೇ 18.38ರಷ್ಟು ಪಾಲನ್ನು ಮತ್ತು ರಾಜ್ಯದ ವರಮಾನದಲ್ಲಿ ಅದು ಶೇ 12.98ರಷ್ಟು (2012-2013) ಪಾಲನ್ನು ಪಡೆದಿದೆ. ಈ ಪ್ರದೇಶವನ್ನು 1956ರಿಂದಲೂ 'ಹಿಂದುಳಿದ ಪ್ರದೇಶ' ಎಂದು ಗುರುತಿಸಿಕೊಂಡು ಬರಲಾಗಿದೆ. ಈ ಹಿಂದುಳಿದಿರುವಿಕೆಯಿಂದ ಸದರಿ ಪ್ರದೇಶವನ್ನು ಮುಕ್ತಗೊಳಿಸುವುದಕ್ಕೆ 1956ರ ನಂತರ ಅನೇಕ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ, 371 (ಜೆ) ಮುಂತಾದವು. ಆದರೆ ಅದಕ್ಕೆ ಇನ್ನೂ ಬಿಡುಗಡೆ ದೊರೆತಿಲ್ಲ. ಈ ಪ್ರದೇಶವನ್ನು ಹಿಂದುಳಿದಿರುವಿಕೆ ಶಾಪದಿಂದ ಮುಕ್ತಗೊಳಿಸುವ ಉದ್ದೇಶದಿಂದ ಜಾರಿಗೊಂಡಿರುವ ಇತ್ತೀಚಿಗಿನ ಕ್ರಮವೆಂದರೆ ಭಾರತೀಯ ಸಂವಿಧಾನದ ವಿಧಿ 371 (ಜೆ). ಪ್ರಸ್ತುತ ಪ್ರಬಂಧದಲ್ಲಿ ಸ್ಥೂಲವಾಗಿ ಹೈ.ಕ.ಪ್ರ.ದ ರಾಜಕೀಯಾರ್ಥಿಕ ಸಂಗತಿಗಳನ್ನು ಚರ್ಚೆಯ ಮುಂಚೂಣಿಗೆ ತರಲು ಪ್ರಯತ್ನಿಸಲಾಗಿದೆ.

ಊಳಿಗಮಾನ್ಯ ವ್ಯವಸ್ಥೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ 1947ರ ನಂತರ ಮತ್ತು ನಮ್ಮ ರಾಜ್ಯದ ಏಕೀಕರಣವಾದ 1956ರ ನಂತರ ಸಾಕಷ್ಟು ಬದಲಾವಣೆಗಳು ಮತ್ತು ಸುಧಾರಣೆಗಳು ಸಂಭವಿಸಿವೆ. ಆದರೆ ಅದು ಎಲ್ಲ ಜನರನ್ನೂ, ಎಲ್ಲ ಪ್ರದೇಶವನ್ನೂ, ಎಲ್ಲ ಲಿಂಗಗಳನ್ನೂ ಒಳಗೊಳ್ಳುವ ರೀತಿಯಲ್ಲಿಲ್ಲ. ಅಮರ್ತ್ಯ ಸೆನ್ ಹೇಳಿರುವಂತೆ ಅರ್ಥಶಾಸ್ತ್ರ ಅನ್ನುವುದು ಸಮಾಜದಲ್ಲಿ ಉತ್ಪಾದನೆಯಾದ ಸಂಪತ್ತಿನ ಮೇಲೆ ಜನರು ತಮ್ಮ ಅಧಿಕಾರ-ಹಕ್ಕನ್ನು ಹೇಗೆ ಪ್ರತಿಷ್ಠಾಪಿಸುತ್ತಾರೆ ಎಂಬುದನ್ನು ಕುರಿತ ಚರ್ಚೆ-ವಿಶ್ಲೇಷಣೆಯಾಗಿದೆ. ಇದನ್ನೇ ಇಲ್ಲಿ ರಾಜಕೀಯಾರ್ಥಿಕತೆ ಎಂದು ಕರೆಯಲಾಗಿದೆ. ಸಮಾಜದಲ್ಲಿ ಯಾರು ಪ್ರಬಲರಾಗಿರುತ್ತರೋ, ಯಾರಿಗೆ ಸಾಮಾಜಿಕವಾಗಿ ಉನ್ನತ ಸ್ಥಾನಮಾನವಿರುತ್ತದೊ, ಯಾರು ಆಸ್ತಿವಂತರಾಗಿರುತ್ತಾರೋ ಅವರಿಗೆ ಅಭಿವೃದ್ಧಿಯ ಫಲಗಳು ದೊರೆಯುತ್ತಿರುತ್ತವೆ. ಇದು ಪ್ರಾದೇಶಿಕವಾಗಿಯೂ ನಿಜ. ಈ ಕಾರಣದಿಂದಾಗಿ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯು ಅನಿವಾರ್ಯವಾಗಿ ಬಿಡುತ್ತದೆ. ಈ ಬಗೆಯ ರಾಜಕೀಯಾರ್ಥಿಕತೆಯು ಹಿಂದುಳಿದ ಪ್ರದೇಶದೊಳಗೂ ನಡೆಯಬಹುದು. ಉದಾಹರಣೆಗೆ ಕರ್ನಾಟಕದಲ್ಲಿ ಗುಲಬರ್ಗಾ ವಿಭಾಗದ ಆರು ಹಿಂದುಳಿದ ಜಿಲ್ಲೆಗಳು ಮೊದಲನೆಯದಾಗಿ ಅಭಿವೃದ್ಧಿಯಿಂದ ವಂಚಿತವಾಗಿವೆ. ಅದೇ ರೀತಿಯಲ್ಲಿ ಗುಲಬರ್ಗಾ ವಿಭಾಗದೊಳಗೆ ಅಲ್ಲಿನ ಅಭಿವೃದ್ಧಿಯ ಫಲಗಳಿಂದ ವಂಚಿತವಾಗಿರುವ ವರ್ಗಗಳಿದ್ದಾವೆ. ಪ್ರಾದೇಶಿಕ ಅಸಮಾನತೆ ಅನ್ನುವುದು ಬಡವರನ್ನು, ವಂಚಿತರನ್ನು, ಅಂಚಿನಲ್ಲಿರುವವರನ್ನು, ಮಹಿಳೆಯರನ್ನು ಎರಡು ನೆಲೆಗಳಲ್ಲಿ ದಮನಕ್ಕೆ





ಒಳಪಡಿಸುತ್ತದೆ. ಮೊದಲನೆಯದಾಗಿ ರಾಜ್ಯದ ಅವಿಭಾಜ್ಯ ಅಂಗವಾದ ಗುಲಬರ್ಗಾ ವಿಭಾಗವು ರಾಜ್ಯಮಟ್ಟದಲ್ಲಿ ರಾಜಕೀಯಾರ್ಥಿಕ ಶೋಷಣೆಗೆ ಒಳಗಾಗುತ್ತಿದ್ದರೆ ವಿಭಾಗದೊಳಗೆ ವಂಚಿತರು, ಅಲ್ಪಸಂಖ್ಯಾತರು, ಮಹಿಳೆಯರು, ಪರಿಶಿಷ್ಟರು ಅನ್ಯಾಯಕ್ಕೆ ಒಳಗಾಗುತ್ತಾರೆ. ಇದನ್ನು ಇಲ್ಲಿ ಗುಲಬರ್ಗಾ ವಿಭಾಗದ ಭೂಮಾಲಿಕತ್ವ ಮತ್ತು ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣಗಳ ನಡುವಣ ಸಂಬಂಧವನ್ನು ಅಧ್ಯಯನ ಮಾಡುವುದರ ಮೂಲಕ ತೋರಿಸಲು ಪ್ರಯತ್ನಿಸಲಾಗಿದೆ.

ನಮ್ಮ ಜನಗಣತಿ ವರದಿಗಳಲ್ಲಿ ಇವೆರಡು ಸಂಗತಿಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಇಲ್ಲಿ ನಾನು 2011ರ ಜನಗಣತಿ ಮಾಹಿತಿಯನ್ನು ಆಧರಿಸಿ ಗುಲಬರ್ಗಾ ವಿಭಾಗವು 1956ರಿಂದ ಹೇಗೆ ರಾಜ್ಯಮಟ್ಟದಲ್ಲಿ ಮತ್ತು ವಿಭಾಗದೊಳಗೆ ಅಸಮಾನತೆಯನ್ನು, ಶೋಷಣೆಯನ್ನು, ಸಾಮಾಜಿಕ ಅನ್ಯಾಯವನ್ನು ಎದುರಿಸುತ್ತಿದೆ ಎಂಬುದನ್ನು ವಿವರವಾಗಿ ಪರಿಶೀಲನೆಗೆ ಒಳಪಡಿಸಿದ್ದೇನೆ. ಜನಗಣತಿ ವರದಿಯಲ್ಲಿ ಭೂಮಾಲೀಕರನ್ನು 'ಸಾಗುವಳಿಗಾರರು' ಎಂದು ಕರೆದರೆ ಭೂರಹಿತ ದಿನಗೂಲಿ ದುಡಿಮೆಗಾರರನ್ನು 'ಕೃಷಿ ಕಾರ್ಮಿಕರು' ಎಂದು ಕರೆಯಲಾಗಿದೆ. ಇವೆರಡು ವರ್ಗಗಳ ನಡುವಿನ ಅನುಪಾತವನ್ನು ನಾನು ಇಲ್ಲಿ 'ಊಳಿಗಮಾನ್ಯ ವ್ಯವಸ್ಥೆಯ ಸೂಚಿಯಾಗಿ ಗುರುತಿಸಿದ್ದೇನೆ. ಸಾಗುವಳಿದಾರರ ಪ್ರಮಾಣವು ಭೂರಹಿತ ದಿನಗೂಲಿಗಳಿಗಿಂತ ಅಧಿಕವಿದ್ದರೆ (ಇಲ್ಲಿ ಅಸಮಾನತೆಯ ತೀವ್ರತೆಯು ಕಡಿಮೆಯಿದೆ. ಏಕೆಂದರೆ ಇಲ್ಲಿ ಭೂಮಾಲಿಕರ ಸಂಖ್ಯೆಯು ಅಧಿಕವಾಗಿದ್ದು ಭೂರಹಿತರ ಸಂಖ್ಯೆಯು ಕಡಿಮೆಯಿದೆ) ಅಲ್ಲಿ ಊಳಿಗಮಾನ್ಯ ವ್ಯವಸ್ಥೆಯು ಸಡಿಲವಾಗುತ್ತಿದೆ ಎಂತಲೂ ಮತ್ತು ಸಾಗುವಳಿದಾರರ ಪ್ರಮಾಣವು ಭೂರಹಿತ ದಿನಗೂಲಿಗಳಿಗಿಂತ ಕಡಿಮೆಯಿದ್ದರೆ (ಇದು ಅಸಮಾನತೆಯ ಸೂಚಿ. ಏಕೆಂದರೆ ಇಲ್ಲಿ ಭೂಮಿಯು ಕೆಲವರ ವಶದಲ್ಲಿದ್ದು ಭೂರಹಿತರು ಅಧಿಕವಾಗಿರುತ್ತಾರೆ) ಅಲ್ಲಿ ಊಳಿಗಮಾನ್ಯ ವ್ಯವಸ್ಥೆಯು ಗಟ್ಟಿಯಾಗಿದೆ ಎಂತಲೂ ತಿಳಿಯಬಹುದು. ಊಳಿಗಮಾನ್ಯ ಎಂಬ ನುಡಿಯ ಬಗ್ಗೆ ಭಿನ್ನಾಭಿಪ್ರಾಯವಿದ್ದರೆ ನಾವು ಅದಕ್ಕೆ ಪ್ರತಿಯಾಗಿ 'ಜಮೀನುದಾರಿ ವ್ಯವಸ್ಥೆ' ಎಂಬ ಪದವನ್ನು ಬಳಸಬಹುದು. ಜನಗಣತಿ ವರದಿ ಪ್ರಕಾರ 2001ರಲ್ಲಿ ಗುಲಬರ್ಗಾ ವಿಭಾಗದಲ್ಲಿದ್ದ ಒಟ್ಟು ದುಡಿಮೆಗಾರರಲ್ಲಿ (41.16 ಲಕ್ಷ) ಕೃಷಿಯನ್ನು ಅವಲಂಬಿಸಿಕೊಂಡಿದ್ದವರ ಸಂಖ್ಯೆ 28.02 ಲಕ್ಷ. ಇವರಲ್ಲಿ ಸಾಗುವಳಿದಾರರು 11.30 ಲಕ್ಷದಷ್ಟಾದರೆ ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 16.72 ಲಕ್ಷ. ಆದರೆ ರಾಜ್ಯಮಟ್ಟದಲ್ಲಿ 2001ರಲ್ಲಿ ಒಟ್ಟು ಕೃಷಿಯನ್ನು ಅವಲಂಬಿಸಿಕೊಂಡಿದ್ದವರಲ್ಲಿ (131.12 ಲಕ್ಷ) ಸಾಗುವಳಿಗಾರರ ಸಂಖ್ಯೆ 68.84 ಲಕ್ಷ ಮತ್ತು ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 62.27 ಲಕ್ಷ. ಇಲ್ಲಿರುವ ಭಿನ್ನತೆಯನ್ನು ಗಮನಿಸಬೇಕು. ರಾಜ್ಯಮಟ್ಟದಲ್ಲಿ ಸಾಗುವಳಿಗಾರರ ಸಂಖ್ಯೆಯು ಭೂರಹಿತರಿಗಿಂತ ಅಧಿಕವಾಗಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ವ್ಯತಿರಿಕ್ತವಾಗಿದೆ. ಅಲ್ಲಿ ಭೂರಹಿತರ ಸಂಖ್ಯೆಯು ಭೂಮಾಲಿಕರ ಸಂಖ್ಯೆಗಿಂತ ಅಧಿಕವಾಗಿದೆ. ಈಗ 2011ರಲ್ಲಿ ಸದರಿ ವಿಭಾಗದಲ್ಲಿರುವ ಒಟ್ಟು ದುಡಿಮೆಗಾರರ ಸಂಖ್ಯೆ 50.13 ಲಕ್ಷ. ಇವರಲ್ಲಿ ಕೃಷಿಯನ್ನು ಜೀವನೋಪಾಯವನ್ನಾಗಿ ಮಾಡಿಕೊಂಡಿರುವವರ ಸಂಖ್ಯೆ 31.83 ಲಕ್ಷ. ಅವರಲ್ಲಿ ಸಾಗುವಳಿಗಾರರ ಸಂಖ್ಯೆ 11.88 ಲಕ್ಷ ಮತ್ತು ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 19.96 ಲಕ್ಷ. ಈ ಮಾಹಿತಿಯ ಪ್ರಕಾರ 2001ರಲ್ಲಿ ಗುಲಬರ್ಗಾ ವಿಭಾಗದಲ್ಲಿ ಸಾಗುವಳಿಗಾರರು ಮತ್ತು ಭೂರಹಿತ ದಿನಗೂಲಿ ದುಡಿಮೆಗಾರರ ನಡುವಿನ ಅನುಪಾತ 1.48ರಷ್ಟಾದರೆ ಅದು 2011ರಲ್ಲಿ 1.68ರಷ್ಟಾಗಿದೆ. ಆದರೆ ರಾಜ್ಯಮಟ್ಟದಲ್ಲಿ ಇದು 2001ರಲ್ಲಿ ಅನುಪಾತ 0.90ರಷ್ಟಿದ್ದರೆ 2011ರಲ್ಲಿ ಅದು 1.09ರಷ್ಟಾಗಿದೆ. ರಾಜ್ಯಮಟ್ಟದಲ್ಲಿ 2001ರಲ್ಲಿ ಭೂರಹಿತರ ಸಂಖ್ಯೆಯು ಸಾಗುವಳಿಗಾರರ ಸಂಖ್ಯೆಗಿಂತ ಕಡಿಮೆಯಿದ್ದರೆ 2011ರಲ್ಲಿ ಸಾಗುವಳಿಗಾರರಿಗಿಂತ ಭೂರಹಿತ ದುಡಿಮೆಗಾರರ ಸಂಖ್ಯೆಯು ಅಧಿಕವಾಗಿದೆ. ಆದರೆ ರಾಜ್ಯಮಟ್ಟದಲ್ಲಿ ಸಾಗುವಳಿಗಾರರು ಮತ್ತು ಭೂರಹಿತರ ನಡುವಿನ ಅನುಪಾತವು (1.09) ಗುಲಬರ್ಗಾ ವಿಭಾಗದಲ್ಲಿನ ಅನುಪಾತಕ್ಕಿಂತ (1.68) ಕಡಿಮೆಯಿದೆ. ಈ ಎಲ್ಲ ಅಂಕಿಅಂಶಗಳು ಮತ್ತು ಅನುಪಾತಗಳು ಏನನ್ನು ಸಿದ್ಧ ಮಾಡಿ ತೋರಿಸುತ್ತಿವೆ? ಜಮೀನುದಾರಿ ವ್ಯವಸ್ಥೆಯ ಹಿಡಿತವು ರಾಜ್ಯಮಟ್ಟದಲ್ಲಿ ಸಡಿಲವಾಗುತಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಇನ್ನೂ ಗಟ್ಟಿಯಾಗಿ ಮುಂದುವರಿದಿದೆ. ಈ ವಿಭಾಗದ ಹಿಂದುಳಿದಿರುವಿಕೆಯ ಮೂಲದಲ್ಲಿ ಕೆಲಸ ಮಾಡುತ್ತಿರುವ ಒಂದು ಮುಖ್ಯ ಸಂಗತಿ ಇದಾಗಿದೆ. ರಾಜ್ಯಮಟ್ಟದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ 2011ರಲ್ಲಿ ಶೇ. 49.28ರಷ್ಟಾದರೆ ಅದು ಗುಲಬರ್ಗಾ ವಿಭಾಗದಲ್ಲಿ ಶೇ 63.51ರಷ್ಟಿದೆ. ರಾಜ್ಯಮಟ್ಟದಲ್ಲಿ ರಾಜಕೀಯಾರ್ಥಿಕ ಬದಲಾವಣೆಗಳು ತೀವ್ರ ಗತಿಯಲ್ಲಿ ನಡೆಯುತ್ತಿವೆ. ಆದರೆ ಗುಲಬರ್ಗಾ ವಿಭಾಗದಲ್ಲಿ ಅವು ಮಂದ ಗತಿಯಲ್ಲಿ ಸಾಗುತ್ತಿವೆ. ಈ ಪ್ರದೇಶದ ಹಿಂದುಳಿದಿರುವಿಕೆಯ ಪ್ರಮುಖ ಸೂಚಿ ಇದಾಗಿದೆ.

ನಂಜುಂಡಪ್ಪ ವರದಿ ಮತ್ತು ಅಸಮಾನತೆ

ರಾಜ್ಯದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯನ್ನು ಅಧ್ಯಯನ ಮಾಡಿ ಅದರ ಪರಿಹಾರಕ್ಕೆ ಕ್ರಮಗಳನ್ನು ಸೂಚಿಸುವಂತೆ ಡಾ.ಡಿ.ಎಂ.ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಾಧಿಕಾರ ಸಮಿತಿಯನ್ನು ಸರ್ಕಾರ 2000ದಲ್ಲಿ ನೇಮಿಸಿತು. ಅದು ತನ್ನ ವರದಿಯನ್ನು 2002ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಅದು ತಾನು ರೂಪಿಸಿದ್ದ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕದ ಆಧಾರದಲ್ಲಿ ರಾಜ್ಯದಲ್ಲಿ ಒಟ್ಟು 114 ಹಿಂದುಳಿದ ತಾಲ್ಲೂಕುಗಳಿವೆ ಎಂದು ಗುರುತಿಸಿತು. ಅದರ ಪರಿಹಾರಕ್ಕೆ ಅದು ಸೂಚಿಸಿದ ಒಂದು ಕ್ರಮವೆಂದರೆ ರೂ. 31,000 ಕೋಟಿಯ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ. ಇದನ್ನು ಸರ್ಕಾರವು 2007-08ರಲ್ಲಿ ಜಾರಿಗೆ ತಂದಿತು. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಸದರಿ ವಿಶೇಷ ಯೋಜನೆಯ ಅನುಷ್ಠಾನವು ಸಮಿತಿಯು ರೂಪಿಸಿದ್ದ ಕ್ರಮದಲ್ಲಿ ನಡೆಯಲಿಲ್ಲ. ಇದರ ಪರಿಣಾಮವಾಗಿ 2007-08 ರಿಂದ 2012-13ರ ಅವಧಿಯಲ್ಲಿ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯು ಕಡಿಮೆಯಾಗುವುದಕ್ಕೆ ಪ್ರತಿಯಾಗಿ ಅಧಿಕಗೊಂಡಿದೆ. ರಾಜ್ಯದ ಒಟ್ಟು ವರಮಾನದಲ್ಲಿ ಗುಲಬರ್ಗಾ ವಿಭಾಗದ ಪಾಲು 2007-08ರಲ್ಲಿ ಶೇ 14.58ರಷ್ಟಿದ್ದುದು 2012-13ರಲ್ಲಿ ಅದು ಶೇ 12.83ಕ್ಕಿಳಿದಿದೆ. ಇದು ಎರಡು ದೃಷ್ಟಿಯಿಂದ ಹಿಂದುಳಿದಿರುವಿಕೆಯನ್ನು ತಿಳಿಸುವ ಸೂಚಿಯಾಗಿದೆ. ಮೊದಲನೆಯದಾಗಿ ಗುಲಬರ್ಗಾ ವಿಭಾಗವು ರಾಜ್ಯ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲನ್ನು ರಾಜ್ಯ ವರಮಾನದಲ್ಲಿ ಪಡೆದಿದೆ. ಇದು ಪ್ರಾದೇಶಿಕ ಅಸಮಾನತೆಯ ಸೂಚಿ. ಎರಡನೆಯದಾಗಿ ಅದರ ಪಾಲು 2007-08 ರಿಂದ 2012-13ರ ಅವಧಿಯಲ್ಲಿ ಕಡಿಮೆಯಾಗಿದೆ. ಇದು ಆತಂಕಕ್ಕೆ ಕಾರಣವಾಗಿದೆ. ಇದು ಏನನ್ನು ಸೂಚಿಸುತ್ತಿದೆ? ನಾವು ಹಿಂದುಳಿದಿರುವ ಪ್ರದೇಶಗಳ ಅಭಿವೃದ್ಧಿಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತಿದೆ.

ಹಿಂದುಳಿದಿರುವಿಕೆ ಅನ್ನುವುದು ಮಾನಸಿಕವೂ ಹೌದು!

ಈಗಾಗಲೆ ಹೇಳಿರುವಂತೆ ಗುಲಬರ್ಗಾ ವಿಭಾಗದಲ್ಲಿ ಜಮೀನುದಾರಿಕೆಯ ಹಿಡಿತವು ಇನ್ನೂ ಗಟ್ಟಿಯಾಗಿ ಉಳಿದುಕೊಂಡಿದೆ. ಅದೇ ರೀತಿಯಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಶೋಷಣಾತ್ಮಕ ಗುಣಗಳು ಜನರಲ್ಲಿ ಆಳವಾಗಿ ಅಂತರ್ಗತಗೊಂಡು ಬಿಟ್ಟಿವೆ ಮತ್ತು ಸಾಮಾಜಿಕ ಅಸಮಾನತೆಯ ಸಂಗತಿಗಳು ಇನ್ನೂ ಮುಂದುವರಿದಿವೆ. ಅದರಿಂದ ಜನರನ್ನು ಬಿಡುಗಡೆಗೊಳಿಸುವುದು ಸುಲಭದ ಕೆಲಸವಲ್ಲ. ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಂತೆ ಇಂದಿಗೂ ಜನರು ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳ ಕೊಠಡಿಯನ್ನು ಪ್ರವೇಶಿಸುವಾಗ ತಮ್ಮ ಚಪ್ಪಲಿಗಳನ್ನು ಬಾಗಿಲ ಹೊರಗೆ ಬಿಟ್ಟು ಒಳಗೆಹೋಗುವ ಕ್ರಮವನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಈ ಬಗೆಯ ಸಮಸ್ಯೆಗಳನ್ನು ನಾವು ವರಮಾನದ ಏರಿಕೆಯಿಂದ ಅಳಿಸಿಹಾಕುವುದು ಸಾಧ್ಯವಿಲ್ಲ. ಅಭಿವೃದ್ಧಿ ಅಂದರೆ 'ಘನತೆಯಿಂದ ಬದುಕುವುದು' ಎಂಬ ಅರ್ಥವೂ ಇದೆ: ಅನೇಕ ಬಗೆಯ ಶೋಷಣಾತ್ಮಕ ಮೌಲ್ಯಗಳನ್ನು ಜನರು ಅಂತರ್ಗತ ಮಾಡಿಕೊಂಡಿದ್ದಾರೆ. ಇಲ್ಲಿ ಶೋಷಣೆಯಲ್ಲಿ ನಿರತರಾಗಿರುವವರ ಅಧಿಕಾರವನ್ನು ಮೊಟಕುಗೊಳಿಸುವುದರ ಜೊತೆಯಲ್ಲಿ ಶೋಷಣೆಗೆ ಒಳಗಾಗಿರುವ ಜನರ ಮನೋಭಾವವನ್ನು ಬದಲಾಯಿಸಬೇಕಾಗಿದೆ. ಅಭಿವೃದ್ಧಿ ಅನ್ನುವುದು ನಮ್ಮ ಹಕ್ಕು, ಅದು ಹಂಗಿನ ಸಂಗತಿಯಲ್ಲ ಅನ್ನುವುದನ್ನು ನಾವು ಜನರಿಗೆ ಮನದಟ್ಟು ಮಾಡಿಕೊಡಬೇಕಾಗಿದೆ. ಅಭಿವೃದ್ಧಿ ಅನ್ನುವುದು ಕೇವಲ ಬಂಡವಾಳ ಹೂಡಿಕೆಯಿಂದ ನಡೆಯುವ ಕಾರ್ಯವಲ್ಲ.

ಶಿಕ್ಷಣವೊಂದೇ ಪರಿಹಾರ

ಅಭಿವೃದ್ಧಿಯೆಂದರೆ ವರಮಾನದಲ್ಲಿ ಏರಿಕೆ, ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವುದು, ಮೂಲಭೂತ ಸೌಕರ್ಯಗಳನ್ನು ಬೆಳೆಸುವುದು - ಎಂದೆಲ್ಲ ತಿಳಿದುಕೊಳ್ಳಲಾಗಿದೆ. ಅಭಿವೃದ್ಧಿಯಲ್ಲಿ ಅವುಗಳು ಕೇವಲ

▶▶ 18

'ಪತ್ರಿಕೆ' ಮತ್ತು ಕನ್ನಡ ಪಬ್ಲಿಕ್ ಸ್ಫಿಯರ್

ಸಮಾಜವಾದ ಹಿನ್ನೆಲೆಯ ಲಂಕೇಶರು, ಒಂದು ಜನಪ್ರಿಯ ಪ್ರಕಟಣೆಗಿರುವ ಅಗಾಧ ಶಕ್ತಿಯನ್ನು ತುಂಬಾ ಯಶಸ್ವಿಯಾಗಿ ಬಳಸಿಕೊಂಡರು. ಈ ನಾಡಿನ ಕುರಿತಾದ ಅವರಿಗಿದ್ದ ಭೌಗೋಳಿಕ ತಿಳಿವಳಿಕೆ ಬರೀ ಓದಿನಿಂದ ಬಂದಿದ್ದಲ್ಲ. ಪ್ರಗತಿರಂಗದ ಮೂಲಕ ಹೊಸ ರಾಜಕೀಯ ಅಲೆಯೊಂದು ಸೃಷ್ಟಿಸಲು ಪ್ರಯತ್ನಿಸಿದ ದಿನಗಳಲ್ಲಿ ತಾವು ಕೇಳಿ-ಅರಿಯದ ಊರುಗಳಿಗೆ, ನೋಡಿ-ಮಾತನಾಡದ ಜನರೊಂದಿಗೆ ಒಡನಾಡಿ ಪಡೆದುಕೊಂಡದ್ದು. ಹೀಗಾಗಿ 'ಪತ್ರಿಕೆ'ಗೂ ಕನ್ನಡನಾಡಿನ ರಾಜಕೀಯ, ಸಾಂಸ್ಕೃತಿಕ ಆಯಾಮ ಮತ್ತು ಲಂಕೇಶರ ವ್ಯಕ್ತಿತ್ವ ದೊರೆಯಿತು.

"ನಾನು ತುರ್ತಾಗಿ ಹೋಗಬೇಕಾಗಿರುವ ವಿದೇಶ ಈ ನಾಡಿನ ಹಳ್ಳಿಗಳು" ಅನ್ನುತ್ತಾರೆ ಪಿ.ಲಂಕೇಶ್. ತನ್ನ ಸಮಕಾಲೀನ ಪ್ರಮುಖರು ಚಿಕಾಗೊ, ಆಕ್ಸ್‌ಫರ್ಡ್‌ನಂಬ ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಓದಿ, ಕೆಲವರು ಅಲ್ಲಿಯೇ ವಾಸ ಪಡೆದೋ ಇಲ್ಲ 'ಫಾರೆನ್-ರಿಟರ್ನ್ಡ್' ರೈಟರ್ಸ್-ಕಂ-ಗ್ರ್ಯಾಜುಟ್ಸ್ ಆಗಿ ತಮ್ಮದೇ ಮಾಧ್ಯಮಗಳ ಮೂಲಕ ಈ ನಾಡಿನ ಭಾಷೆ, ಜನ, ಆಚರಣೆ ಮತ್ತು ಇಲ್ಲಿಯ ವೈಶಿಷ್ಟ್ಯ-ವೈರುಧ್ಯಗಳನ್ನು ಹೊರಜಗತ್ತಿಗೆ ಪರಿಚಯಿಸುವ ಪ್ರಯತ್ನದಲ್ಲಿದ್ದರು. ಆದರೆ, ಲಂಕೇಶ್ ತಾನು ಹೋಗಬೇಕಿರುವ ವಿದೇಶ ಈ ನಾಡಿನ ಹಳ್ಳಿ ಎಂದು ಹೇಳುತ್ತ, ತನ್ನ ವಿವಿಧ ಮಾಧ್ಯಮಗಳಲ್ಲಿ ಇಡೀ ನಾಡನ್ನೇ ಕನ್ನಡ 'ಜಾಣ-ಜಾಣೆ'ಯರಿಗೆ ಪರಿಚಯಿಸುವ ಕೆಲಸಕ್ಕೆ ಅಣಿಯಾಗಿದ್ದರು. ಲಂಕೇಶರು ಈ ನಾಡಿನ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಆಗು-ಹೋಗುಗಳಿಗೆ ನಿರಂತರವಾಗಿ ಪ್ರತಿಕ್ರಿಯಿಸಿದ್ದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬೇರೆ-ಬೇರೆ ಆಯಾಮಗಳು ಇವೆ. ಇಲ್ಲಿ ಲಂಕೇಶರು 'ಪತ್ರಿಕೆ' ಮೂಲಕ ಕನ್ನಡ ಜನಸಮೂಹವನ್ನು (ಪಬ್ಲಿಕ್ ಸ್ಫಿಯರ್) ತಲುಪಿದ ಅಥವಾ ಅವರಿಗೆ ತಮ್ಮ ಪತ್ರಿಕೆ ಬರೆಹಗಳ ಮೂಲಕ ಸ್ಪಂದಿಸಿದ ರೀತಿಯನ್ನು ಮಾತ್ರ ಪರಿಚಯಿಸಬಹುದು.

'ಪಬ್ಲಿಕ್ ಸ್ಫಿಯರ್' ಅನ್ನೋ ಪರಿಕಲ್ಪನೆಯನ್ನು ಜರ್ಮನಿಯ ಸಮಾಜಶಾಸ್ತ್ರಜ್ಞ ಯರ್ಗನ್ ಹಬರ್‌ಮಸ್ 1962ರಲ್ಲಿ ಪ್ರಕಟಿಸಿದ ತನ್ನ **'The Structural Transformation of the Public Sphere: An Inquiry into a Category of Bourgeois Society'** ಪುಸ್ತಕದಲ್ಲಿ, ಯೂರೋಪ್ ದೇಶಗಳಲ್ಲಿ 'ಜನಸಮೂಹ' ಅಥವಾ 'ಸಿವಿಲ್ ಸೊಸೈಟಿ' ಎಂಬುದು ಹೇಗೆ ಹುಟ್ಟಿಕೊಂಡಿತು ಮತ್ತದು ಆಧುನಿಕ ಯೂರೋಪ್‌ನಲ್ಲಿ 'ಕಾಫಿ ಹೌಸ್', ಸೆಲೂನ್, ಅಲ್ಲದೆ ನಗರ ಕೇಂದ್ರಿತ ಸಾಂಸ್ಕೃತಿಕ ವೇದಿಕೆಗಳ ಮೂಲಕ ಹೇಗೆ ಒಂದು 'ಬೂರ್ಜ್ವ ಪಬ್ಲಿಕ್ ಸ್ಫಿಯರ್' ಅನ್ನು ಹುಟ್ಟು ಹಾಕಿತು ಎಂಬುದರ ಕುರಿತು ಚರ್ಚಿಸಿದ್ದಾನೆ. 'ಪಬ್ಲಿಕ್ ಸ್ಫಿಯರ್' ಎಂದರೆ ವಿಭಿನ್ನ ಸಮುದಾಯದ ಸಮಾಜವೊಂದರ ವ್ಯಕ್ತಿಗಳು ಒಂದೆಡೆ ಸೇರಿ, ಸಾಮಾನ್ಯವಾಗಿ ಪರಸ್ಪರ ಸಂಬಂಧಪಟ್ಟ ಸಮಸ್ಯೆ ವಿಷಯವೊಂದನ್ನು ಚರ್ಚೆಯ ಮೂಲಕ ಸಲಹೆ ಕಂಡುಕೊಳ್ಳುವ ಸ್ಥಳ/ಜಾಗ. ಅದು ನಾಟಕ, ಪತ್ರಿಕೆ, ಗುಂಪು/ವೇದಿಕೆ/ಪಕ್ಷ ಯಾವುದೇ ರೂಪದ್ದಾಗಿರಬಹುದು. ಈತನ ಈ ಪರಿಕಲ್ಪನೆಯನ್ನೇ ನಾವು ಕನ್ನಡದ ಸಂದರ್ಭಕ್ಕೆ ಅನ್ವಯಿಸಿ ನೋಡಬೇಕಿದೆ. ಸಮಾಜದಲ್ಲಿ ಪತ್ರಿಕೆಯೆಂಬುದು ಪಬ್ಲಿಕ್ ಸ್ಫಿಯರ್‌ನ ಒಂದು ಮುಖ್ಯ ಅಂಗ. ಹೀಗೆ ಎಂಭತ್ತರ ದಶಕದ ಕರ್ನಾಟಕದ ಪಬ್ಲಿಕ್ ಸ್ಫಿಯರ್‌ನ ಪ್ರಮುಖ ಅಂಗವಾಗಿದ್ದ 'ಲಂಕೇಶ ಪತ್ರಿಕೆ'ಯ ಯಶಸ್ಸಿನ ಹಿಂದೆ ಹಲವು ಕಾರಣಗಳಿವೆ. ಬಹುಶಃ ಆ ಎಲ್ಲಾ ಕಾರಣಗಳನ್ನು ಚರ್ಚಿಸುವಲ್ಲಿಯೇ 'ಪತ್ರಿಕೆ' ಹೇಗೆ ಒಂದು ನಿರ್ವಾತವನ್ನು ತುಂಬಿತು ಎಂಬುದು ತಿಳಿಯಬಹುದು.

ಅದು ಚಳವಳಿಗಳ ಏರು ಕಾಲ. ದಲಿತ, ಬಂಡಾಯ, ರೈತ, ಮಹಿಳಾ ಚಳವಳಿ ಮತ್ತು ಗೋಕಾಕ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಏರಾರು ಯುವಜನತೆ ವ್ಯವಸ್ಥೆಯೆಡೆಗಿನ ಸಿಟ್ಟನ್ನು ತಮಗೊಲಿದ ಪ್ರಕಾರಗಳಲ್ಲಿ ವ್ಯಕ್ತಪಡಿಸಿದ್ದರು. ಒಂದೆಡೆ ಆದಾಗಲೇ ದಲಿತ-ಅಲ್ಪಸಂಖ್ಯಾತ ಮತ್ತು ಮುಸ್ಲಿಂ ಸಮುದಾಯಗಳಿಂದ ಓದಿಕೊಂಡ ನವ-ಅಕ್ಷರಸ್ಥ ಯುವ ಸಮೂಹವೊಂದು ಕನ್ನಡನಾಡಿನ ಪ್ರತಿ ಜಿಲ್ಲೆಯಲ್ಲೂ ದೊಡ್ಡ ಸಂಖ್ಯೆಯಲ್ಲಿ 'ಅಕ್ಷರಲೋಕ'ಕ್ಕೆ ಬಂದುಕೊಂಡಿತ್ತು, ಗ್ರಾಮಮಟ್ಟದಲ್ಲಿಯೂ 'ಅಂಬೇಡ್ಕರ ಸಂಘ'ಗಳು ಜನ್ಮ ತಳೆ ತಮ್ಮ ಹಳ್ಳಿಯಲ್ಲಿ ಜೀವಂತವಿದ್ದ ಜಾತಿಪದ್ಧತಿ, ತಾರತಮ್ಯ ಮತ್ತು ಮೇಲ್ಜಾತಿಗಳ ದೌರ್ಜನ್ಯವನ್ನು ಪ್ರಶ್ನಿಸಲು ಮುಂದಾಗಿದ್ದವು. ನಿರ್ಲಕ್ಷಿತ ಸಮುದಾಯಗಳಿಂದ ಬಂದ ಈ ಅಪ್ರತಿಷ್ಠಿತ ವರ್ಗ, ನವ್ಯ ಸಾಹಿತ್ಯದ ಬೇರಿರುವುದು ಪಾಶ್ಚಾತ್ಯದ ಕಾಫಿ ಹೌಸಿನಲ್ಲಿ ಕುಳಿತ ಇಂಗ್ಲಿಷ್ ಪ್ರೊಫೆಸರ್‌ಗಳ ಜೇಬಿನಲ್ಲಿ ಎಂಬುದು ತಿಳಿದು ಸಾಹಿತ್ಯಿಕವಾಗಿಯೇ ಅದನ್ನು ಧಿಕ್ಕರಿಸುವ ಮತ್ತು ಪರ್ಯಾಯವೊಂದರ ಹುಡುಕಾಟದಲ್ಲಿದ್ದರು. ಇದಕ್ಕೆ ನೆಪವಾಗಿ ಸಿಕ್ಕಿದ್ದೆ 'ಬೂಸಾ ಪ್ರಕರಣ'. 1973ರಲ್ಲಿ ಬಸವಲಿಂಗಪ್ಪನವರು ಮೈಸೂರು ವಿಶ್ವವಿದ್ಯಾಲಯದ ಡಾ.ಅಂಬೇಡ್ಕರ್ ವಿಚಾರ ವೇದಿಕೆ ಮತ್ತು ಹಿಂದುಳಿದವರ್ಗಗಳ ವಿದ್ಯಾರ್ಥಿ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡದಲ್ಲಿ ಅವರಿಗೂ ಮೊದಲಿನ ಸಾಹಿತ್ಯ ಎಲ್ಲವೂ 'ಬೂಸ' ಎಂದು ಹೇಳಿದ್ದೇ ತಡ; ಅವಕಾಶಕ್ಕಾಗಿ ಕಾಯುತ್ತಿದ್ದಂತೆ ಎಲ್ಲಾ ಪ್ರತಿಷ್ಠಿತ ಜಾತಿಯ ನಾಯಕರುಗಳು ಮತ್ತು ಮೇಲ್ಜಾತಿಗಳ ಗುಲಾಮರಂತಿದ್ದ ಪತ್ರಿಕೆಗಳು ಅದನ್ನು 'ಕನ್ನಡ ಸಾಹಿತ್ಯಕ್ಕೆ ಎಸಗಿದ ದ್ರೋಹ' ಎಂದು 'ಮೊರಲ್ ಪ್ಯಾನಿಕ್' ಸೃಷ್ಟಿಸಿ ಹಿಂಸಾತ್ಮಕ ಪ್ರತಿಭಟನೆ ರೂಪದಲ್ಲಿ ಬೀದಿಗಿಳಿದು ದೇವರಾಜ ಅರಸರ ಸಂಪುಟದಲ್ಲಿದ್ದ ಬಸವಲಿಂಗಪ್ಪನವರನ್ನು ಸಚಿವ ಸ್ಥಾನದಿಂದ ಇಳಿಸಬೇಕೆಂದು ಪಟ್ಟುಹಿಡಿದವು. ಆದರೆ, ಬಸವಲಿಂಗಪ್ಪನವರ ಹೇಳಿಕೆಯನ್ನು ಸಮರ್ಥಿಸುವ ಒಂದು 'ಕ್ರಿಯಾಶೀಲರ ಗುಂಪು', ವಿರೋಧಿ ಗುಂಪನ್ನು ಮುಖಾಮುಖಿಯಾಗುವ ಸಾಧ್ಯತೆಯಿಲ್ಲವಾಗಿದ್ದರೂ ಆ ಹೇಳಿಕೆಯನ್ನು ಬೆಂಬಲಿಸುವ ಎದೆಗಾರಿಕೆ ತೋರಿತ್ತು ಮತ್ತು ಇದರಲ್ಲಿ ಲಂಕೇಶರು ಕೂಡ ಒಬ್ಬರಾಗಿದ್ದು ಇದೇ ಕಾರಣಕ್ಕೆ ಹಲ್ಲೆಗೊಳಗಾದರು. ಇದು ಒಂದು ರೀತಿಯಲ್ಲಿ 'ಬೂರ್ಜ್ವ ಪಬ್ಲಿಕ್ ಸ್ಫಿಯರ್' ಮತ್ತು 'ರ್‍ಯಾಷನಲ್ ಪಬ್ಲಿಕ್ ಸ್ಫಿಯರ್' ನಡುವಿನ ತಿಕ್ಕಾಟವಾಗಿತ್ತು. ಈ ತಿಕ್ಕಾಟವು ಕರ್ನಾಟಕದಲ್ಲಿ ಸ್ಥಾಪಿತ ಮೌಲ್ಯಗಳನ್ನು ಪ್ರಶ್ನಿಸುವ ಹೊಸದೊಂದು ಸಾಧ್ಯತೆಯನ್ನು ತೋರಿಸಿತು.


ಇದಕ್ಕೆ ಪೂರಕ ಎಂಬಂತೆ 1974ರಲ್ಲಿ ಮೇಲ್ಜಾತಿಗಳಲ್ಲಿ ಪ್ರಗತಿಪರರೆನಿಸಿಕೊಂಡ ಮತ್ತು ದಲಿತ ಯುವಕರು ಸೇರಿ ರೂಪಿಸಿದ್ದ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಮತ್ತು ಒಕ್ಕೂಟದ ಉದ್ಘಾಟನೆಯಲ್ಲಿ ಕುವೆಂಪುರವರ ಮಾತು ಪರೋಕ್ಷವಾಗಿ ತಮಗೊಂದು ಪತ್ರಿಕೆಯ ಅಗತ್ಯತೆ ಮತ್ತು ಪ್ರತಿರೋಧವನ್ನು ಕ್ರಿಯಾಶೀಲವಾಗಿ ಸೃಜನಶೀಲ ಮಾಧ್ಯಮಗಳ ಮೂಲಕ ವ್ಯಕ್ತ ಪಡಿಸುವ ಅನಿವಾರ್ಯತೆ ಇದೆ ಎಂಬುದನ್ನು ಸಾರಿ ಹೇಳಿತ್ತು. ಅಷ್ಟೊತ್ತಿಗಾಗಲೆ ತುರ್ತು ಪರಿಸ್ಥಿತಿ ಘೋಷಿಸುವ ಮೂಲಕ ಸರ್ಕಾರಗಳೆಡೆಗಿನ ಆಕ್ರೋಶ ಹೆಚ್ಚುತ್ತಲೇ ಹೋಯಿತು.

ಲಂಕೇಶರ ವೈಯಕ್ತಿಕ ಕಾರಣಗಳು, ಅಂದರೆ ಪ್ರಜಾವಾಣಿಯಲ್ಲಿ ಅವರು ಬರೆಯುತ್ತಿದ್ದ ಅಂಕಣ ನಿಂತಿದ್ದು, ವಿಶ್ವವಿದ್ಯಾಲಯ ಕೆಲಸ ಬಿಟ್ಟಿದ್ದು, ಸಿನಿಮಾಗಳಿಂದ ಅಷ್ಟೇನು ಲಾಭ ಗಳಿಸದೇ ಇದ್ದದ್ದು ಇವೆಲ್ಲವುಗಳಿಗಿಂತ ಮುಖ್ಯವಾಗಿ ಅಂದಿನ ಸಮಾಜೋ-ರಾಜಕೀಯ ಮತ್ತು ಸಾಹಿತ್ಯಿಕ ವಿಘಟನೆಗಳು ಪ್ರತಿರೋಧ ಒಡ್ಡಬಹುದಾದ ಪ್ರಕಟಣೆಯೊಂದಕ್ಕೆ ಕಾದಿದ್ದವು. ತನ್ನ ಕಾಲದ



ರಾಜಕಾರಣವನ್ನು ಲೇವಡಿ ಮಾಡಿ, ವಿಡಂಬನಾತ್ಮಕವಾಗಿ ಬರೆದ ಲಂಕೇಶರ ರೀತಿಯೇ ವಿವಿಧ ಸಾಮಾಜಿಕ-ಸಾಹಿತ್ಯಿಕ ಸಂಘಟನೆಗಳಿಂದ ಸಿಕ್ಕ ಓದುಗ ವಲಯ 'ಪತ್ರಿಕೆ'ಯ ಪ್ರಸರಣದ ರೂವಾರಿ ಆಯಿತು. ಒಬ್ಬ ಹಳ್ಳಿ ವಿದ್ಯಾವಂತ, ಮೇಷ್ಟ್ರು, ಡಾಕ್ಟರ್, ಹೋಟೆಲ್ ಮಾಣಿ, ವ್ಯಾಪಾರಿ, ಗೃಹಿಣಿ, ಸಾಹಿತ್ಯದ ವಿದ್ಯಾರ್ಥಿ, ಕ್ರೀಡಾಪಟು, ಸಿನಿಮಾಪ್ರಿಯ ಹೀಗೆ ವಿವಿಧ ಓದುಗ ವರ್ಗಕ್ಕೆ ಸಂಬಂಧಪಟ್ಟ ಒಂದಲ್ಲ ಒಂದು ಅಂಕಣ, ವರದಿ ಮತ್ತು ವಿಶೇಷ ಲೇಖನದಿಂದ ಕೂಡಿದ್ದ 'ಪತ್ರಿಕೆ'ಗೆ ಜಾಹೀರಾತಿನ ಹಂಗು ಇಲ್ಲದೆಯೂ ಪ್ರಕಟಿಸುವುದಕ್ಕೆ ಇವೇ ಕಾರಣವಾದವು.

ಮೊದಲನೆಯ ಸಂಚಿಕೆಯ ಮುಖಪುಟ ವರದಿಯನ್ನೆ ನೋಡಿ. 'ಬೆಂಡೆಕಾಯಿ ಗೊಜ್ಜು ಗ್ರಿ ಚಿಕನ್ ಪಲಾವ್'. ಈ ತರಹದ ಭಾಷೆ ಬಳಸಿಯೂ ಪತ್ರಿಕೆ ವರದಿ ಬರೆಯಬಹುದು ಎಂಬ ಸಾಧ್ಯತೆಯನ್ನು ತೋರಿತು. ಅಲ್ಲದೇ, ದೇವರಾಜ ಅರಸು ಆಳ್ವಿಕೆಯ ನಂತರ ಕರ್ನಾಟಕದಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಮತ್ತು ದಲಿತ ವರ್ಗಗಳ ಒಗ್ಗಟ್ಟು ಬಲಿಷ್ಠ ಪ್ರತಿಷ್ಠಿತ ಆಳುವ ವರ್ಗಗಳ ವಿರುದ್ಧ ಒಂದಾಗುವ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತು. ಶೂದ್ರ ವರ್ಗಗಳ ಈ ಪ್ರವೇಶವನ್ನು ನಾಡಿನ ಮುಖ್ಯವಾಹಿನಿಯ ಬಹುತೇಕ ಪತ್ರಿಕೆಗಳು ವರದಿ ಮಾಡುತ್ತಿದ್ದಿಲ್ಲ. ಇದೇ ಸಂಚಿಕೆಯಲ್ಲಿಯೇ ಗುಂಡೂರಾವರು ವಿಧಾನಸೌಧಕ್ಕೆ ನಿರ್ಬಂಧ ಹಾಕಿದಾಗ ಪ್ರಕಟವಾದ 'ಯಾರಪ್ಪನ ವಿಧಾನ ಸೌಧ?' ವರದಿ ಕೂಡ; ಜನಸಮೂಹವೊಂದು ತನ್ನೊಳಗೆ ಕೇಳಿಕೊಳ್ಳಬಹುದಾದ



ಒಳ-ಪ್ರಶ್ನೆಯಂತಿದೆ. ಕನ್ನಡ ಪಬ್ಲಿಕ್ ಸ್ಫಿಯರ್‌ನ ಬಹುಮುಖ್ಯ ಅಂಗಗಳಾದ ಜಾತಿಗಳನ್ನು ಕುರಿತು ಬರೆಯುವಾಗಲೂ ಲಂಕೇಶರು ಇತಿಹಾಸವನ್ನು ಆಧರಿಸುವುದಿಲ್ಲ. ಬದಲಾಗಿ ಒಬ್ಬ ದಲಿತನ ಅನುಭವ, ಕಮ್ಮಾರನ, ಮೇದಾರನ, ಕುಂಬಾರನ, ಕ್ಷೌರಿಕನ, ಅಗಸನ ಸದ್ಯದ ಸುಪ್ತ ಮತ್ತು ಪ್ರಜ್ಞಾ ಜಗತ್ತಿನಲ್ಲಿಯೇ ಮಾತನಾಡುತ್ತಾರೆ. ಇದೆಲ್ಲವನ್ನು ಬರೆಯುವ ಅವರ ಭಾಷೆಗೆ 'ಶೂದ್ರತ್ವ' ನಂಟಿದೆ. 'ಇನ್ಸ್‌ಪೆಕ್ಟರ್‌ಗೆ ಇಕ್ಕಿದರು', ಪ್ರಿನ್ಸಿಪಾಲನಿಗೆ ಗೂಸ, 'ಲಾಯರ್‌ಗೆ ಲಾತ', ಗುಂಡೂರಾವ್‌ಗೆ 'ಗುಂ', ಬಂಗಾರಪ್ಪನವರಿಗೆ 'ಬಂ', ತಮ್ಮನ್ನು ತಾವೇ ಹೋರಾಟಗಾರರೆಂದುಕೊಂಡ ಸ್ವಯಂ-ಘೋಷಿತ ನಾಯಕರನ್ನು 'ಉಟ್ಟು ಓರಾಟಗಾರ' ಎಂದು ಬರೆಯುವ ಅವರ ಕ್ರಮ ಮುರಿದು-ಕಟ್ಟುವ, ಮೂರ್ತಿ-ಭಂಜಕತೆ ಕನ್ನಡ ಪತ್ರಿಕಾರಂಗಕ್ಕೇನೆ ಹೊಸದು. ಒಂದು ಭಾಷೆಯ ಮೇಲಿನ ಬರವಣಿಗೆ ಸ್ವಾಮ್ಯ ಎಂದರೆ ಆ ಭಾಷೆಯಲ್ಲಿಯೇ ಸಾಮಾಜಿಕ ಮತ್ತು ರಾಜಕೀಯ ಚರ್ಚೆ ಸಾಧ್ಯವಾಗಿಸುವುದಲ್ಲದೆ, ಅದೇ ಭಾಷೆಯನ್ನು ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸಂವಹನಕ್ಕೂ ಬಳಸುವುದಾಗಿದೆ. 'ಪತ್ರಿಕೆ'ಗಿಂತ ಮುಂಚೆ ಕನ್ನಡದಲ್ಲಿ ಹಲವು ಸಣ್ಣ ಮತ್ತು ಸಾಹಿತ್ಯಿಕ ಪತ್ರಿಕೆಗಳಿದ್ದವು. ಆದರೆ ಅವೆಲ್ಲಾ ಹೆಚ್ಚಾಗಿ ಸಾಹಿತ್ಯಕ್ಕೆ ಮೀಸಲಾದ ನಿಯತಕಾಲಿಕೆಗಳಾಗಿದ್ದು ರಾಜಕೀಯ, ಸಾಮಾಜಿಕ ವರದಿಗಳು ಪ್ರಕಟಿಸುತ್ತಿದ್ದಿಲ್ಲ. ಅಲ್ಲದೆ 'ಪತ್ರಿಕೆ' ಸಿದ್ಧ ಮಾದರಿ ವರದಿಗಾರಿಕೆಯ ಮೂಲ ತತ್ವಗಳನ್ನೇ ಬುಡಮೇಲು ಮಾಡಿತು.

ಸಮಾಜವಾದ ಹಿನ್ನೆಲೆಯ ಲಂಕೇಶರು, ಒಂದು ಜನಪ್ರಿಯ ಪ್ರಕಟಣೆಗಿರುವ ಅಗಾಧ ಶಕ್ತಿಯನ್ನು ತುಂಬಾ ಯಶಸ್ವಿಯಾಗಿ ಬಳಸಿಕೊಂಡರು. ಈ ನಾಡಿನ ಕುರಿತಾದ ಅವರಿಗಿದ್ದ ಭೌಗೋಳಿಕ ತಿಳಿವಳಿಕೆ ಬರೀ ಓದಿನಿಂದ ಬಂದಿದ್ದಲ್ಲ, ಪ್ರಗತಿರಂಗದ ಮೂಲಕ ಹೊಸ ರಾಜಕೀಯ ಅಲೆಯೊಂದು ಸೃಷ್ಟಿಸಲು ಪ್ರಯತ್ನಿಸಿದ ದಿನಗಳಲ್ಲಿ ತಾವು ಕೇಳಿ-ಅರಿಯದ ಊರುಗಳಿಗೆ, ನೋಡಿ-ಮಾತನಾಡದ ಜನರೊಂದಿಗೆ ಒಡನಾಡಿ ಪಡೆದುಕೊಂಡದ್ದು. ಹೀಗಾಗಿ 'ಪತ್ರಿಕೆ'ಗೂ ಕನ್ನಡನಾಡಿನ ರಾಜಕೀಯ, ಸಾಂಸ್ಕೃತಿಕ ಆಯಾಮ ಮತ್ತು ಲಂಕೇಶರ ವ್ಯಕ್ತಿತ್ವ ದೊರೆಯಿತು. ತನ್ನ ವಾರಗೆಯವರು ಈ ನಾಡನ್ನು 'ಚಿನ್ನದ ಬೀಡು', 'ಗಂಧದ ನಾಡು' ಅಂತೆಲ್ಲಾ ಬರೆದರೆ ಲಂಕೇಶರು ಅದಕ್ಕೆ ಎಷ್ಟು ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದರು ಎಂಬುದಕ್ಕೆ ಅವರು ಬರೆದ 'ದೇಶಭಕ್ತ ಸೂಳೆ ಮಗನ ಗದ್ಯ ಗೀತೆ' ಶೀರ್ಷಿಕೆಯೇ ಸಾಕು. ಈ ನಾಡಿನ ನೈಸರ್ಗಿಕ ಸಂಪತ್ತು-ನೆಲ, ಜಲ ಇಲ್ಲಿ ಬದುಕುತ್ತಿರುವ ಮನುಷ್ಯರಿಗೆ ದಕ್ಕಬೇಕೆಂದು ಸಾಮಾಜಿಕ ಪರಿಸರಕ್ಕೆ ಕಳಕಳಿಯಿಂದ ಪ್ರತಿಕ್ರಿಯಿಸುತ್ತಿದ್ದರು. ಅವರಿಗಿದ್ದ ಅಭಿವೃದ್ಧಿ ಮಾದರಿ ಗಾಂಧೀಜಿಯ ಆಶಯದಿಂದ ಪ್ರೇರಿತವಾದುದು. ಇನ್ನು ನಾಡಿನ ಬಹುತ್ವವನ್ನು ತಿರಸ್ಕರಿಸುವ ಕೋಮುವಾದಿಗಳಿಗಂತು "ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ" ಎಂದು ತಿಳಿಸುವ ಮೂಲಕ 'ಪತ್ರಿಕೆ' ಒಂದು 'ಆ್ಯಂಟಿ ವೈರಸ್'ನಂತೆ ಕೆಲಸ ಮಾಡಿತ್ತು.

"ಬೇಸರಪಡಬೇಡಿ. ಮೃದು ಸ್ವಭಾವದ, ಎಂದೂ ಯಾರಿಗೂ ಕೆಡುಕನ್ನು ಬಯಸದ, ಸದಾ ಸಹಿಷ್ಣುವಾದ ಸ್ನೇಹಜೀವಿ ಕನ್ನಡಿಗನಿಗೆ ನಾನು ಕಟುವಾಗಿ ಮಾತಾಡಲು ಬೇಸರಪಡುತ್ತೇನೆ. ಆದರೆ ಕೊಂಚವಾದರೂ ಕಟುತ್ವ, ಬಂಡಾಯ, ಅಹಂಕಾರ, ಸ್ವಾಭಿಮಾನ ಇಲ್ಲದಿದ್ದರೆ ಈ ನಮ್ಮ ಹೆಮ್ಮೆಯ ಮುದ್ದಾದ ಇಂಪು ಕನ್ನಡನುಡಿ... ನಾಶವಾಗುತ್ತದೆ" ಎಂಬ ಅವರ ಮಾತಿನ ಹಿಂದೆ ಭಾಷೆ ಪ್ರೇಮವನ್ನು ಗಮನಿಸಬೇಕು. ಇಂಟರ್‌ನೆಟ್ ಸೌಲಭ್ಯ ಇಲ್ಲದ ಆ ದಿನಗಳಲ್ಲಿಯೆ ಲಂಕೇಶ್ 'ನ್ಯೂಸ್ ವೀಕ್', 'ಟೈಮ್', 'ಸ್ಪೆಕ್ಟೇಟರ್' ಮ್ಯಾಗಜಿನ್‌ಗಳ ವರದಿ ಮತ್ತು ಚರ್ಚೆಯ ವಿಷಯಗಳನ್ನು ತನ್ನ 'ಜಾಣ-ಜಾಣೆ' ಓದುಗರೊಂದಿಗೆ ಹಂಚಿಕೊಳ್ಳುವ ಮೂಲಕ-ಅವರ ಅರಿವನ್ನು ವಿಸ್ತರಿಸಿದ್ದರು. ತನ್ನ ಸಾಮಾನ್ಯ ಓದುಗನಿಗೆ, ಬಾಬ್ ಮಾರ್ಷಲ್, ಮಿತ್ತೆರಾಂದ್, ಪೀಟರ್ ಬ್ರೂಕ್, ಯೇಟ್ಸ್, ರಾಜ್ ಕಪೂರ್, ಸೂಕಿ, ಮಾವ್ರೋ, ಹೆಮಿಂಗ್ವೆ, ಯಾರೂ ಅರಿಯದ ಕಲ್ಲಣ್ಣವರ್, ಚಿಮ್ಮಿನ್, ದೇವರು, ಕೋಗಿಲೆ, ಮಾಮರ, ಗುಬ್ಬಚ್ಚಿಯ ಗೂಡು ಮತ್ತು ತುಂಬಾ ಕ್ಷುಲ್ಲಕವೆನಿಸಬಹುದಾದ ಬೈಸಿಕಲ್ ಕಲಿಕೆಯ ಬಗ್ಗೆ ಬರೆದು ಓದಿಸಿದ ಪರಿಯೇ ಕನ್ನಡ 'ಪಬ್ಲಿಕ್ ಸ್ಫಿಯರ್' ಅನ್ನು ಪುನರ್ ವ್ಯಾಖ್ಯಾನಿಸಿದಂತಿದೆ.


ಇಂದಿಗೂ ಬ್ರಿಟನ್, ಅಮೆರಿಕ, ಆಸ್ಟ್ರೇಲಿಯಾ ಮತ್ತು ಕೆಲ ಆಫ್ರಿಕನ್ ದೇಶಗಳಲ್ಲಿ ಟ್ಯಾಬ್ಲಾಯಿಡ್ ಪತ್ರಿಕೆಗಳೇ ಮುಖ್ಯವಾಹಿನಿ ಪ್ರಕಟಣೆಗಳಾಗಿವೆ. ಆದರೆ ಭಾರತದಲ್ಲಿ (ಪ್ರಕಟಣೆ ನಿಲ್ಲಿಸಿರುವ) 'ದಿ ಇಲಸ್ಟ್ರೇಟೆಡ್ ವೀಕ್ಲೀ ಆಫ್ ಇಂಡಿಯಾ', 'ಬ್ಲಿಡ್ಜ್', 'ಶಂಕರ್ಸ್ ವೀಕ್ಲೀ' ಬಿಟ್ಟರೆ ಒಂದೇ ಒಂದು ಸೀರಿಯಸ್ ಟ್ಯಾಬ್ಲಾಯಿಡ್ ಪತ್ರಿಕೆಯೇ ಇಲ್ಲ. ಯಾಕೆಂದರೆ, ಟ್ಯಾಬ್ಲಾಯಿಡ್ ಎಂಬುದು ಬರೀ ಪತ್ರಿಕೆಯ ಅಳತೆಗೆ ಸಂಬಂಧಿಸಿದ್ದಲ್ಲ, ಬದಲಾಗಿ ಅದೊಂದು ಪರಿಕಲ್ಪನೆಯಾಗಿದೆ. ಕನ್ನಡದಲ್ಲಿರುವಷ್ಟು ಟ್ಯಾಬ್ಲಾಯಿಡ್ ಪತ್ರಿಕೆಗಳು ದೇಶದ ಯಾವುದೇ ಭಾಷೆಯಲ್ಲಿಲ್ಲ. 'ಲಂಕೇಶ್ ಪತ್ರಿಕೆ' ಯಶಸ್ಸಿನಿಂದ ಪ್ರೇರಿತಗೊಂಡು ಡಜನ್‌ಗಟ್ಟಲೆ ಟ್ಯಾಬ್ಲಾಯಿಡ್ ಪತ್ರಿಕೆಗಳು ಶುರುವಾದವು. ಬೆರಳೆಣಿಕೆ ಪತ್ರಿಕೆಗಳು ಬಿಟ್ಟರೆ ಉಳಿದಂತೆ ಬ್ಲ್ಯಾಕ್‌ಮೇಲ್‌ಗಾಗಿ ಮತ್ತೆ ಕೆಲವು ಬುಲೆಟಿನ್‌ಗಳಾಗಿ, ವ್ಯಕ್ತಿ ನಿಂದನೆಗಾಗಿ ಮತ್ತು ಹಲವು ಪೋರ್ನೊಗ್ರಫಿ ಪ್ರಕಟಣೆಗಳಾಗಿ ಮಾರ್ಪಟ್ಟಿವೆ. ಆದರೆ, ಇಡೀ ಪತ್ರಿಕೆಯಲ್ಲಿ ಸಂಪಾದಕರ ಜೊತೆ ತೀವ್ರ ಭಿನ್ನಾಭಿಪ್ರಾಯವುಳ್ಳ ವಿಷಯ ಕುರಿತಾದ ಒಂದು ವಾಗ್ವಾದ, ಸೆಣಸಾಟ ಬೌದ್ಧಿಕ ನೆಲೆಯಲ್ಲಿ ನಡೆದೇ ಇಲ್ಲ ಅಥವಾ ಅಂತಹ ಪ್ರತಿಕ್ರಿಯೆಗಳಿಗೆ ಪುಟಗಳು ಮೀಸಲಿದ್ದಿಲ್ಲ ಎಂಬ ಆರೋಪದ ನಡುವೆಯೂ 'ಪತ್ರಿಕೆ' ಅಂದಿನ ಜರೂರುಗಳಿಗೆ ಸ್ಪಂದಿಸಿದ ರೀತಿಯನ್ನು ಮರೆಯುವಂತಿಲ್ಲ.



■ ರಮೇಶ ಆರೋಲಿ, ನವದೆಹಲಿ

ನಿಯಮಗಳನ್ನು ಉಲ್ಲಂಘಿಸುತ್ತಿರುವ ಭೂಪ

ಹೋದಲ್ಲಿ ಬಂದಲ್ಲಿ 'ಅಭಿವೃದ್ಧಿ' ಮಂತ್ರ ಪಠಿಸುತ್ತಿರುವ ನರೇಂದ್ರ ಮೋದಿಯ ನಿಘಂಟಿನಲ್ಲಿ 'ಅಭಿವೃದ್ಧಿ' ಶಬ್ದಕ್ಕಿರುವ ಅರ್ಥ ಒಂದೇ: ಉದ್ಯಮಪತಿಗಳ ಜೇಬನ್ನು ದಪ್ಪಗಾಗಿಸುವುದು. ಇವತ್ತಿನ ದಿನಗಳಲ್ಲಿ ಈ ಸತ್ಯವನ್ನು ಅರಿಯದವರು ತೀರಾ ವಿರಳ ಎನ್ನಬಹುದು - ಕುರುಡು ಬೆಂಬಲಿಗರನ್ನು ಹೊರತುಪಡಿಸಿ. ಗುಜರಾತಿನಲ್ಲಿ ರೈತರನ್ನು, ತಳವರ್ಗಗಳನ್ನು, ಅಲ್ಪಸಂಖ್ಯಾತರನ್ನು ಯಾವ ರೀತಿ ಶೋಷಣೆ ಮಾಡಿ ರಾಜ್ಯವನ್ನು ಕೊಳ್ಳೆಹೊಡೆಯಲಾಗುತ್ತಿದೆ ಎಂಬುದಕ್ಕೆ ಹಲವಾರು ಉದಾಹರಣೆಗಳನ್ನು ನಾವು ಈಗಾಗಲೆ ನೋಡಿದ್ದೇವೆ. ರಾಜ್ಯದ ಸಾವಿರಾರು ಎಕರೆಗಳಷ್ಟು ಫಲವತ್ತಾದ ಭೂಮಿಯನ್ನು ಬಂಡವಾಳಶಾಹಿಗೆ ಧಾರೆಯೆರೆದು ಕೊಡಲಾಗುತ್ತಿದೆ. ಹೀಗೆ ಪುಡಿಗಾಸಿಗೆ ಜಮೀನುಗಳನ್ನು ಪಡೆಯುತ್ತಿರುವವರ ಪಟ್ಟಿಯಲ್ಲಿ ಕೇವಲ ಕಾರ್ಪೋರೇಟ್ ಕುಳಗಳಷ್ಟೆ ಅಲ್ಲ, ಕೆಲವು ರಾಜಕಾರಣಿ ಕಂ ಉದ್ದಿಮೆದಾರರೂ ಇದ್ದಾರೆ.



ಅಲುಮಿನಾ ರಿಫೈನರಿ ಪ್ರಕರಣ

ಇಂಡಿಗೋಲ್ಡ್ ರಿಫೈನರಿ ಎಂಬ ಹೆಸರಿನ ಪೆಟ್ರೋಲಿಯಂ ಸಂಸ್ಕರಣಾ ಉದ್ದಿಮೆಯೊಂದು ಕೆಲವು ವರ್ಷಗಳ ಹಿಂದೆ ಭುಜ್ ಪ್ರದೇಶದಲ್ಲಿ 36 ಎಕರೆ ಜಮೀನನ್ನು ಪಡೆದುಕೊಂಡಿತ್ತು. ಒಪ್ಪಂದದ ನಿಯಮಾವಳಿಯಂತೆ ಇಂಡಿಗೋಲ್ಡ್ ತನ್ನ ಕಾರ್ಖಾನೆಯನ್ನು ಮೂರು ವರ್ಷಗಳೊಳಗಾಗಿ ಸ್ಥಾಪಿಸಬೇಕಾಗಿತ್ತು. ಆದರೆ ನಿಗದಿತ ಸಮಯ ಕಳೆದರೂ ಕಾರ್ಖಾನೆ ಪ್ರಾರಂಭಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಇಂಡಿಗೋಲ್ಡ್ ಆ ಭೂಮಿಯನ್ನು ಅಲುಮಿನಾ ರಿಫೈನರಿ ಎಂಬ ಬೇರೊಂದು ಸಂಸ್ಥೆಗೆ 1,20,00,000 ರೂಪಾಯಿ ಬೆಲೆಗೆ ಮಾರಾಟ ಮಾಡಿತು. ಇದಕ್ಕೆ ಕಂದಾಯ ಸಚಿವೆ ಆನಂದಿಬೆನ್ ಪಟೇಲ್ ಒಪ್ಪಿಗೆ ಇತ್ತು. ಗುಜರಾತ್ ಸರ್ಕಾರದಲ್ಲಿ ಈಕೆಯದು ನಂಬರ್ ಟೂ ಸ್ಥಾನವೆನ್ನಲಾಗುತ್ತಿದೆ. ನರೇಂದ್ರ ಮೋದಿ ಎಲ್ಲಾದರೂ ದಿಲ್ಲಿ ಗದ್ದುಗೆ ಏರಲು ಶಕ್ತನಾದರೆ ರಾಜ್ಯದ ಮುಖ್ಯಮಂತ್ರಿಯ ಸ್ಥಾನ ಈಕೆಗೆ ಗ್ಯಾರಂಟಿ ಎಂದು ಹೇಳಲಾಗುತ್ತಿದೆ.


ಇಂಡಿಗೋಲ್ಡ್‌ಗೆ ಭೂಮಿಯನ್ನು ಮಾರಾಟ ಮಾಡುವ ಹಕ್ಕಿಲ್ಲ; ಅದು ಈ ರೀತಿ ಬೇರೊಂದು ಕಂಪೆನಿಗೆ ಮಾರಾಟ ಮಾಡಿರುವುದು ತಪ್ಪು ಎಂದು ರಾಜ್ಯದ ಮುಖ್ಯಕಾರ್ಯದರ್ಶಿ ಕೂಡ ಹೇಳಿದ್ದಾರೆ. ಕೊನೆಗೆ ಕಾಂಗ್ರೆಸ್ ನಾಯಕ ದೀಪಕ್ ಬಾಬರಿಯಾ ಎಂಬಾತ ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಲೇರಿದ. ಪ್ರಕರಣ ಅಂತಿಮವಾಗಿ ಸುಪ್ರೀಂಕೋರ್ಟಿನ ಅಂಗಳಕ್ಕೆ ತಲುಪಿತು. ಇತ್ತೀಚೆಗಷ್ಟೆ ತನ್ನ ತೀರ್ಪು ನೀಡಿದ ಸುಪ್ರೀಂಕೋರ್ಟು, ಅಲುಮಿನಾ ರಿಫೈನರಿಗೆ ಭೂಮಾರಾಟ ಮಾಡಿರುವುದನ್ನು ರದ್ದುಗೊಳಿಸಿದೆ. ಸರ್ಕಾರ ಈ ರೀತಿಯಾಗಿ ಭೂಮಿಯನ್ನು ಖಾಸಗಿ ರಿಫೈನರಿಗೆ ಮಾರಾಟ ಮಾಡಿರುವುದು "ಸ್ವೇಚ್ಛಾಚಾರಿ ವರ್ತನೆ. ಅದು ಕಾನೂನು ಪ್ರಕಾರ ತಪ್ಪು" ಎಂದು ಹೇಳಿರುವ ಕೋರ್ಟು, ಸಂಸ್ಥೆ ಸರ್ಕಾರಕ್ಕೆ 3,16,00,000 ರೂಪಾಯಿ ಪಾವತಿಸಿದ ಬಳಿಕವಷ್ಟೆ ಕಾರ್ಯಾರಂಭ ಮಾಡಬಹುದು ಎಂದು ತಿಳಿಸಿದೆ!

ಆರ್ಕಿಯನ್ ಕೆಮಿಕಲ್ಸ್ ಪ್ರಕರಣ

2005ರಲ್ಲಿ ಮೋದಿಯ ಸರ್ಕಾರ ಆರ್ಕಿಯನ್ ಕೆಮಿಕಲ್ಸ್ ಎಂಬ ಕಂಪೆನಿಗೆ ಕಚ್ ಪ್ರದೇಶದ 60 ಕೋಟಿ ಚದರ ಮೀಟರ್‌ಗಳಷ್ಟು ಭೂಮಿಯನ್ನು ವರ್ಷಕ್ಕೆ ಬರೀ 15 ಪೈಸೆಯ ದರದಲ್ಲಿ 99 ವರ್ಷಗಳ ಲೀಸಿಗೆ ನೀಡಿತ್ತು. ಒಪ್ಪಂದದ ಷರತ್ತಿನಂತೆ ಎರಡು ವರ್ಷಗಳೊಳಗಾಗಿ ಉತ್ಪಾದನೆ ಪ್ರಾರಂಭಿಸದಿದ್ದಲ್ಲಿ ಸರ್ಕಾರ ಲೀಸ್‌ಅನ್ನು ರದ್ದುಗೊಳಿಸಿ ಭೂಮಿಯನ್ನು ಮರಳಿ ಪಡೆದುಕೊಳ್ಳಬಹುದಾಗಿತ್ತು. ಆದರೆ ಎರಡು ವರ್ಷಗಳೇಕೆ 2014ರ ತನಕವೂ ಕಂಪೆನಿ ಉತ್ಪಾದನೆ ಪ್ರಾರಂಭಿಸಲು ವಿಫಲವಾಯಿತು. ಸರ್ಕಾರ ಮಾತ್ರ ಭೂಮಿಯನ್ನು ವಾಪಸ್ ಪಡೆಯಲೂ ಇಲ್ಲ; ದಂಡ ವಿಧಿಸಲೂ ಇಲ್ಲ! ವಿಪರ್ಯಾಸವೇನೆಂದರೆ ಇದೇ ಆರ್ಕಿಯನ್ ಕೆಮಿಕಲ್ಸ್ ಕಂಪೆನಿ ಗುಜರಾತ್ ನೌಕಾ ಮಂಡಳಿಗೆ ಬೇರೊಂದು ಹೊಸಾ ಅರ್ಜಿಯನ್ನು ಗುಜರಾಯಿಸುತ್ತದೆ ಮತ್ತು 'ಕೋರಿ ಖಾರಿ' ಎಂಬಲ್ಲಿ 150 ಮೀಟರ್ ಉದ್ದದ ಧಕ್ಕೆಯೊಂದನ್ನು ನಿರ್ಮಿಸಲು ತಾತ್ವಿಕ ಅನುಮತಿಯನ್ನೂ ಪಡೆದುಕೊಳ್ಳುತ್ತದೆ! ಭಾರತ, ಪಾಕಿಸ್ತಾನಗಳ ಗಡಿ ಭಾಗದಲ್ಲಿರುವ ಈ 'ಕೋರಿ ಖಾರಿ' ಒಂದು ವಿವಾದಿತ ಪ್ರದೇಶವಾಗಿದ್ದು ಅದು ಯಾರಿಗ ಸೇರಿದ್ದು ಎಂಬುದರ ಬಗ್ಗೆ ಉಭಯ ದೇಶಗಳಿನ್ ಕಚ್ಚಾಡುತ್ತಿವೆ. ಮೇಲುನೋಟಕ್ಕೆ ಇದೆಲ್ಲ ವಿಚಿತ್ರವೆನಿಸಿದರೂ ಆಳಕ್ಕಿಳಿದು ನೋಡಿದಾಗ ಇಲ್ಲಿ ಭಾರಿ ದೊಡ್ಡ ರಾಜಕೀಯ ಲೆಕ್ಕಾಚಾರದ ಕಥೆಯೊಂದು ಗೋಚರಿಸುತ್ತದೆ. ಯಾಕೆಂದರ ಈ ಆರ್ಕಿಯನ್ ಕೆಮಿಕಲ್ಸ್‌ನ ಮಾಲಿಕರು ವೆಂಕಯ ನಾಯ್ಡುವಿನ ಸಂಬಂಧಿಕರು. ಈ ವೆಂಕಯ್ಯ ನಾಯ್ಡು ಸುಷ್ಮಾ ಸ್ವರಾಜ್, ಅನಂತ ಕುಮಾರ್‌ರಂಥವರು ಅಡ್ವಾನಿಯೆ ಪ್ರಧಾನಿ ಆಗಬೇಕೆನ್ನುವ ಗುಂಪಿಗೆ ಸೇರಿದವರು. ಈ ಗುಂಪು ಪ್ರಧಾನಿ ಕುರ್ಚಿಗಾಗಿ ಹಂಬಲಿಸುತ್ತಿರುವ ಮೋದಿಯನ್ನು 2009ರಿಂದಲೂ ವಿರೋಧಿಸುತ್ತಾ ಬಂದಿದೆ. ಹೇಗಿದ ಮೋದಿಯ ದೂ(ದು)ರಾಲೋಚನೆ!

ಬೂಸಿ ಬಸ್ಯ... ಮೋದಿ!

17



ಹೈದರಾಬಾದ್ ಕರ್ನಾಟಕ...

16 ◀◀

ಸಾಧನ-ಸಂಪನ್ಮೂಲಗಳಾಗಿ ಕೆಲಸ ಮಾಡಬಲ್ಲವು. ಅಭಿವೃದ್ಧಿಗೆ ಅವು ಬೇಕು. ಆದರೆ ಅವುಗಳನ್ನು ಅಭಿವೃದ್ಧಿಯೆಂದು ತಿಳಿಯುವುದು ತಪ್ಪು. ಅಭಿವೃದ್ಧಿ ಅನ್ನುವುದು ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು ಅಗತ್ಯವಾದ ಜನರ ಸಾಮರ್ಥ್ಯದ ವರ್ಧನೆಯಾಗಿದೆ. ಏರಿಕೆಯಾದ ವರಮಾನದ ಮೇಲೆ ಜನರು ಪ್ರತಿಷ್ಠಾಪಿಸುವ ಅಧಿಕಾರವನ್ನು ಅಭಿವೃದ್ಧಿ ಎಂದು ಕರೆಯಬಹುದು. ಈ ಸಾಮರ್ಥ್ಯ-ಶಕ್ತಿ ಹೇಗೆ ಜನರಿಗೆ ಪ್ರಾಪ್ತವಾಗುತ್ತದೆ? ಅದನ್ನು ಸಾಕ್ಷರತೆಯಿಂದ, ಶಿಕ್ಷಣದಿಂದ, ಸಮಾನತೆಯಿಂದ, ಸಾಮಾಜಿಕ ನ್ಯಾಯದಿಂದ ಸಾಧಿಸಿಕೊಳ್ಳಬಹುದು. ಈ ವಿಭಾಗವು ಸಾಕ್ಷರತೆಯಲ್ಲಿ ಮತ್ತು ಶಿಕ್ಷಣದಲ್ಲಿ ಬಹಳ ಹಿಂದುಳಿದಿದೆ. ಉದಾಹರಣೆಗೆ 2011ರಲ್ಲಿ ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಗುಲಬರ್ಗಾ ವಿಭಾಗದ ಪಾಲು ಶೇ 15.22 ರಷ್ಟಿದೆ. ರಾಜ್ಯದಲ್ಲಿ ಮಹಿಳಾ ಸಾಕ್ಷರತೆಯು ಅತ್ಯಂತ ಕಡಿಮೆ ಶೇ 55 ರಷ್ಟಿರುವ ತಾಲ್ಲೂಕುಗಳ ಸಂಖ್ಯೆ 23. ಅವುಗಳಲ್ಲಿ 15 ಗುಲಬರ್ಗಾ ವಿಭಾಗಕ್ಕೆ ಸೇರಿದ್ದರೆ ನಾಲ್ಕು ಬೆಳಗಾವಿ ವಿಭಾಗಕ್ಕೆ ಸೇರಿವೆ. ದಕ್ಷಿಣ ಕರ್ನಾಟಕದ ಪಾಲು ಕೇವಲ ನಾಲ್ಕು. ರಾಜ್ಯ ಮಟ್ಟದಲ್ಲಿ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ 31.87ರಷ್ಟಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಶೇ 34.85ರಷ್ಟಿದೆ. ಇದು ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶೇ 38ಕ್ಕಿಂತ ಅಧಿಕವಾಗಿದೆ. ಅಂದರೆ ದುಡಿಮೆಯ ಭಾರ ಇಲ್ಲಿ ಮಹಿಳೆಯರ ಮೇಲೆ ಅಧಿಕವಾಗಿದೆ. ಇಲ್ಲಿ ದುಡಿಮೆಯು ಕೃಷಿ ಪ್ರಧಾನವಾದುದಾಗಿದೆ ಮತ್ತು ಹಂಗಾಮಿಯಾದುದಾಗಿದೆ. ಇದನ್ನು ದುಸ್ಥಿತಿಯ ಸೂಚಿಯನ್ನಾಗಿ ಬಳಸಬಹುದಾಗಿದೆ.

ಪ್ರಾದೇಶಿಕ ಸಾಮಾಜಿಕ ನ್ಯಾಯ

ಹಿಂದುಳಿದ ಪ್ರದೇಶಗಳನ್ನು ವಿಶೇಷ ಕ್ರಮಗಳಿಂದ ಅಭಿವೃದ್ಧಿಪಡಿಸುವುದು ಸಾಮಾಜಿಕ ನ್ಯಾಯದ ಸಂಗತಿಯಾಗಿದೆ. ಅಭಿವೃದ್ಧಿಯ ಫಲಗಳು ಸಮಾಜದಲ್ಲಿ ವಂಚಿತರಿಗೆ, ಅಂಚಿನಲ್ಲಿರುವವರಿಗೆ ಮತ್ತು ಮಹಿಳೆಯರಿಗೆ ಹೆಚ್ಚು ಹೆಚ್ಚು ದೊರೆಯುವಂತೆ ಮಾಡುವುದೇ ಸಾಮಾಜಿಕ ನ್ಯಾಯ. ನಮ್ಮ ರಾಜ್ಯದಲ್ಲಿ ಅತ್ಯಂತ ತೀವ್ರಗತಿಯ ದುಸ್ಥಿತಿಯನ್ನು ಹಿಂದುಳಿದ ಪ್ರದೇಶದ ಜನರು ಅನುಭವಿಸುತ್ತಿದ್ದಾರೆ. ಹಿಂದುಳಿದ ಪ್ರದೇಶಗಳಲ್ಲಿನ ಹಿಂದುಳಿದ ಜನರು ಅನುಭವಿಸುವ ದುಸ್ಥಿತಿಯ ತೀವ್ರತೆಯು ಮುಂದುವರಿದ ಪ್ರದೇಶದಲ್ಲಿನ ಹಿಂದುಳಿದ ಜನರು ಅನುಭವಿಸುವ ದುಸ್ಥಿತಿಗಿಂತ ಅಧಿಕವಾಗಿರುತ್ತದೆ. ಆದ್ದರಿಂದ ನಾವೆಲ್ಲರೂ ಮನುಷ್ಯರಾಗಿರುವುದರಿಂದ, ನಾವು ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಸಂವಿಧಾನಾತ್ಮಕ ಮೌಲ್ಯಗಳನ್ನಾಗಿ ಒಪ್ಪಿಕೊಂಡಿರುವುದರಿಂದ ಪ್ರಾದೇಶಿಕ



ಸಾಮಾಜಿಕ ನ್ಯಾಯವನ್ನು ಸಾಧಿಸುವ ಕಡೆಗೆ ಹೆಚ್ಚಿನ ಗಮನ ನೀಡುವ ಅಗತ್ಯವಿದೆ. ಪ್ರಾದೇಶಿಕ ಅಸಮಾನತೆಯ ನಿವಾರಣೆಯು ಸಾಮಾಜಿಕ ನ್ಯಾಯದ ಸಂಗತಿಯಾಗಿದೆ.

ಸಂವಿಧಾನಾತ್ಮಕ ವಿಧಿ 371 (ಜೆ)

ಅಭಿವೃದ್ಧಿಯ ಜೀವದ್ರವ್ಯ 'ಜನರು' ಎಂಬುದನ್ನು ಮನ್ನಿಸದೆ ಕಾಮಗಾರಿಗಳು ಮತ್ತು ಕಾಂಟ್ರಾಕ್ಟುಗಳೇ ಅಭಿವೃದ್ಧಿ ಎಂದು ಎಲ್ಲಿಯವರೆಗೆ ನಂಬಿಕೊಂಡಿರುತ್ತೇವೆಯೋ ಅಲ್ಲಿಯವರೆಗೆ ಗುಲಬರ್ಗಾ ವಿಭಾಗದ ಅಭಿವೃದ್ಧಿ ಸಾಧ್ಯವಿಲ್ಲ. ಥಳಥಳನೆ ಹೊಳೆಯುವ ರಸ್ತೆಗಳು, ಗಗನಚುಂಬಿ ಕಟ್ಟಡಗಳು, ಜಗಮಗಿಸುವ ಮಾಲ್‌ಗಳು-ಮಾರ್ಟ್‌ಗಳು, ವಿಮಾನ ನಿಲ್ದಾಣಗಳು, ಅಮೃತಶಿಲೆಯಲ್ಲಿ ಕಟ್ಟಿದ ಸರ್ಕಾರಿ ಕಚೇರಿಗಳು ಮುಂತಾದವುಗಳನ್ನು ಅಭಿವೃದ್ಧಿ ಎಂದು ನಂಬಿಕೊಂಡು ಬಂದಿರುವುದರ ಕಾರಣವಾಗಿ ಪ್ರಾದೇಶಿಕ ಅಸಮಾನತೆಯು ನಮ್ಮಲ್ಲಿ ಮುಂದುವರಿದುಕೊಂಡು ಬಂದಿದೆ.

ಅಭಿವೃದ್ಧಿಯನ್ನು ಕುರಿತಂತೆ ನಮ್ಮಲ್ಲಿ ಸೈದ್ಧಾಂತಿಕ ಪಲ್ಲಟ ನಡೆಯಬೇಕಿದೆ. ಜನರು, ಜನರ ಬದುಕು, ಜನರ ಆರೋಗ್ಯ, ಅವರ ಆಹಾರ, ಅವರ ಅಕ್ಷರ, ಶಿಕ್ಷಣ, ಲಿಂಗ ಸಮಾನತೆ, ಪರಿಶಿಷ್ಟರ ಬವಣೆಗಳು ಅಭಿವೃದ್ಧಿಯಲ್ಲಿ ಮುಖ್ಯವಾಗಬೇಕು. ಇದು 1990ರಲ್ಲಿ ಆರಂಭಿಸಲಾದ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ನಡೆಯಲಿಲ್ಲ. ಮತ್ತೆ 2007-08ರಲ್ಲಿ ಆರಂಭಗೊಂಡ ರೂ. 31,000 ಕೋಟಿಯ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಿಂದ ನಡೆಯಲಿಲ್ಲ. ಮುಂದೆ 371 (ಜೆ)ನಿಂದಲೂ ನಡೆಯುವುದು ಅನುಮಾನ. ಏಕೆಂದರೆ ಅಲ್ಲಿಯೂ ಕಾಮಗಾರಿ-ಕಾಂಟ್ರಾಕ್ಟ್‌ಗಳೆ ಅಭಿವೃದ್ಧಿ ಎಂಬ ಭ್ರಾಂತಿಯು ಮುಂದುವರಿಯುವ ಸಾಧ್ಯತೆಯಿದೆ.

ಈ ವಿಭಾಗದಲ್ಲಿನ ಒಟ್ಟು ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಶೇ 40ರಷ್ಟಿದೆ. ರಾಜ್ಯಮಟ್ಟದಲ್ಲಿ ಇದು ಶೇ 25.67ರಷ್ಟಿದೆ. ಬೆಂಗಳೂರು ವಿಭಾಗದ ಹತ್ತು ಜಿಲ್ಲೆಗಳಲ್ಲಿ ಇದು ಶೇ 18.15ರಷ್ಟಿದೆ. ಗುಲಬರ್ಗಾ ವಿಭಾಗದಲ್ಲಿರುವ ಒಟ್ಟು ದುಡಿಮೆಗಾರರಲ್ಲಿನ ಶೇ 40ರಷ್ಟು ಭೂರಹಿತ ದಿನಗೂಲಿಗಳಿಗೆ 371 (ಜೆ) ಅಡಿಯಲ್ಲಿ ನೀಡುವ ಶಿಕ್ಷಣ-ಉದ್ಯೋಗಗಳಲ್ಲಿನ ಮೀಸಲಾತಿಯಿಂದ ಲಾಭವಿಲ್ಲ. ಇವರಿಗೆ ಇಂದು ವಲಸೆಯೇ ಜೀವನಾಧಾರವಾಗಿದೆ. ಇದರ ಬಗ್ಗೆ ನಾವು ಮಾತನಾಡುತ್ತಿಲ್ಲ. ಈ ವರ್ಗಕ್ಕೆ ಸಮೃದ್ಧ ಬದುಕು ಸಾಧ್ಯವಾಗಬೇಕಾದರೆ ಗುಲಬರ್ಗಾ ವಿಭಾಗದಲ್ಲಿ ಕೃಷಿಯೇತರ ಉದ್ಯೋಗಗಳ ಪ್ರಮಾಣವನ್ನು ಅಧಿಕಗೊಳಿಸಬೇಕು. ಒಟ್ಟು ದುಡಿಮೆಗಾರರಲ್ಲಿ ಕೃಷಿಯೇತರ ವಲಯವನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಶೇ 36.49. ಆದರೆ ದಕ್ಷಿಣ ಕರ್ನಾಟಕದಲ್ಲಿ ಇದು ಶೇ 61.85ರಷ್ಟಿದೆ. ಅಂದರೆ ದಕ್ಷಿಣ ಕರ್ನಾಟಕದಲ್ಲಿ ಕೃಷಿಯೇತರ ಉದ್ಯೋಗಗಳು ಅತಿವೇಗದಲ್ಲಿ ಬೆಳೆಯುತ್ತಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ಮಂದ ಗತಿಯಲ್ಲಿ ಬೆಳೆಯುತ್ತಿದೆ. ಪ್ರಾದೇಶಿಕ ಅಸಮಾನತೆಯ ಮತ್ತು ಗುಲಬರ್ಗಾ ವಿಭಾಗದ ಹಿಂದುಳಿದಿರುವಿಕೆಯ ಮೂಲ ಇಲ್ಲಿದೆ.


ಈ ವಿಭಾಗದಲ್ಲಿನ ಮಹಿಳೆಯರ ಅನಿಮೀಯದ ಬಗ್ಗೆ ಮತ್ತು ಮಕ್ಕಳಲ್ಲಿನ ಅಪೌಷ್ಟಿಕತೆಯ ಬಗ್ಗೆ ಸರ್ಕಾರ, ಜನಪ್ರತಿನಿಧಿಗಳು, ಜಿಲ್ಲಾ ಪಂಚಾಯತಿಗಳು ಮಾತನಾಡುತ್ತಿಲ್ಲ. ಎಲ್ಲಿಯವರೆಗೆ ಇಲ್ಲಿನ ಸಮಾಜದ ಮೇಲಿರುವ ಜಮೀನುದಾರಿಕೆಯ ಹಿಡಿತವನ್ನು ಸಡಿಲಗೊಳಿಸುವುದಿಲ್ಲವೋ ಅಲ್ಲಿಯವರೆಗೆ ಇಲ್ಲಿನ ಜನರ ಬವಣೆಯು ಕಡಿಮೆಯಾಗುವ ಸಾಧ್ಯತೆಯಿಲ್ಲ. ಈ ದಿಶೆಯಲ್ಲಿ ನಾವು ಸಾಂಪ್ರದಾಯಿಕವಾಗಿ ಮಾಡಿಕೊಂಡು ಬಂದಿರುವ ಯೋಜನೆಗಳಿಂದ ಇಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ. ಅದನ್ನು ಆಂದೋಳನ ರೂಪದಲ್ಲಿ ಸಂಘಟಿಸುವ ಅಗತ್ಯವಿದೆ. ಈ ವಿಭಾಗದ ಒಟ್ಟು ಜನಸಂಖ್ಯೆ 112.2 ಲಕ್ಷದಲ್ಲಿ ಪರಿಶಿಷ್ಟರ (ಪ.ಜಾ.-ಪ.ಪಂ) ಜನಸಂಖ್ಯೆ 39.26. ಲಕ್ಷದಷ್ಟಿದೆ. ಅವರ ಪ್ರಮಾಣ ಶೇ 35.01ರಷ್ಟಾಗುತ್ತದೆ. ಈ ಸಂಗತಿಯನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಸಂವಿಧಾನದ 371 (ಜೆ)ನಲ್ಲಿ ಮೂರು ಸಂಗತಿಗಳಿವ ಮೊದಲನೆಯದು ಶಿಕ್ಷಣದಲ್ಲಿ ವಿಭಾಗದ ಮಕ್ಕಳಿಗ ಮೀಸಲಾತಿ (ರಾಜ್ಯಮಟ್ಟದಲ್ಲಿ ಶೇ 08), ಎರಡನೆಯದಾಗಿ ಉದ್ಯೋಗದಲ್ಲಿ ಮೀಸಲಾತಿ (ರಾಜ್ಯಮಟ್ಟದಲ್ಲಿ ಶೇ 08 ಮತ್ತು ಮೂರನೆಯದಾಗಿ ಶಾಸನಾತ್ಮಕ ಅಭಿವೃದ ಮಂಡಳಿಯ ಮೂಲಕ ರಾಜ್ಯ ಸರ್ಕಾರವು ವಾರ್ಷಿ ಬಜೆಟ್ಟಿನಲ್ಲಿ ನೀಡುವ ಅನುದಾನದಿಂದ ಅಭಿವೃದ ಕಾರ್ಯಗಳನ್ನು ಕೈಗೊಳ್ಳುವುದು. ಈ ಮೂರು ಕ್ರಮಗ ಪೈಕಿ ಮೊದಲ ಎರಡು ಕ್ರಮಗಳಿಂದ ವಿಭಾಗದಲ್ಲಿರು ಉಳ್ಳವರಿಗೆ ಅನುಕೂಲವಾಗಬಹುದು. ಆದರ ವಿಭಾಗದಲ್ಲಿರುವ ಭೂರಹಿತ ದಿನಗೂಲಿ ದುಡಿಮೆಗಾರರು ಅನಕ್ಷರಸ್ಥರು, ಪರಿಶಿಷ್ಟರು ಮತ್ತು ಮಹಿಳೆಯರಿಗ ಮೊದಲೆರಡು ಕ್ರಮಗಳಿಂದ ಹೆಚ್ಚಿನ ಉಪಯೋಗವೇನಿಲ ಮೂರನೆಯ ಕ್ರಮವಾದ ಮಂಡಳಿಯ ಮೂಲಕ ಸರ್ಕಾ ಹೆಚ್ಚು ಹೆಚ್ಚು ಅನುದಾನ ನೀಡಿ ದಿನಗೂ ದುಡಿಮೆಗಾರರಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗ ಪರಿಶಿಷ್ಟರಿಗೆ ಉಪಯುಕ್ತವಾದ ಕ್ರಮಗಳನ ತೆಗೆದುಕೊಳ್ಳುವುದರ ಮೂಲಕ ವಿಭಾಗದ 'ಉಳಿದವರ ಹಿತಾಸಕ್ತಿಗಳನ್ನು ಕಾಯಬಹುದು. ಆದರೆ ಇದು ಸರ್ಕಾರವ ಪ್ರತಿ ವರ್ಷ ತನ್ನ ಬಜೆಟ್ಟಿನಲ್ಲಿ ಮಂಡಳಿಗೆ ಎಷ್ಟು ಅನುದಾ ನೀಡುತ್ತದೆ ಮತ್ತು ಅಲ್ಲಿ ಯಾವ ಬಗೆಯ ಕಾರ್ಯಗಳನ ಕೈಗೆತ್ತಿಕೊಳ್ಳಲಾಗುತ್ತದೆ ಎಂಬುದರ ಮೇಲೆ ಉಳಿದವ ಬದುಕು ನಿಂತಿರುತ್ತದೆ. (ಈ ಮಂಡಳಿಗ 2-14-2015ನೆಯ ಸಾಲಿನಲ್ಲಿ ನೀಡಿರುವ ಅನುದಾ ರೂ. 1,637 ಕೋಟಿ). ಹೀಗೆ ನೀಡುವ ಅನುದಾನವ ರೂಢಿಯಲ್ಲಿನ ಬಜೆಟ್ಟಿನ ಭಾಗವಾಗಿದ್ದರೆ ಅದರಿಂದ ಹೆಚ್ಚಿ ಉಪಯೋಗವಿಲ್ಲ. ಅದನ್ನು ಸರ್ಕಾರವು 'ಹೆಚ್ಚುವರಿ'ಯಾಗಿ ನೀಡಿದರೆ ಮಾತ್ರ ಸ್ವಲ್ಪಮಟ್ಟಿಗೆ ಉಪಯೋಗವಾಗುತ್ತದ ನಮ್ಮ ಸರ್ಕಾರವು ಮಂಡಳಿಗೆ ಬಜೆಟ್ಟಿನ ಭಾಗವಾ ಅನುದಾನ ನೀಡುವುದಕ್ಕೆ ಪ್ರತಿಯಾಗಿ ಹೆಚ್ಚುವರಿಯಾ ನೀಡಿದರೆ ಅದರಿಂದ ಉಪಯೋಗ ಅಧಿಕ. ಈ ಬ ವಿಭಾಗದ ಜನರು ಸರ್ಕಾರದ ಮೇಲೆ ಒತ್ತಡ ತರದಿದ್ದ ಪ್ರಾದೇಶಿಕ ಅಸಮಾನತೆ ಅನ್ನುವುದು ಪರಿಹಾರವಾಗುವುದಿಲ ಯಾವುದನ್ನು ಇಲ್ಲಿ 'ಪ್ರಾದೇಶಿ ಸಾಮಾಜಿಕ ನ್ಯಾಯ' ಎಂದ ಕರೆದಿದ್ದೇವೆಯೋ ಅದನ್ನು ಸಾಧಿಸಿಕೊಳ್ಳಲು ಸರ್ಕಾರವ ಹೆಚ್ಚುವರಿಯಾಗಿ ಹಣವನ್ನು ವಿಭಾಗದ ಉಳಿದವ ಹಿತಕ್ಕಾಗಿ ವಿನಿಯೋಗಿಸುವಂತೆ ಒತ್ತಡ ತರುವ ಅಗತ್ಯವಿದ ಈ ಕಾರ್ಯವನ್ನು ವಿಭಾಗದ ಜನಪ್ರತಿನಿಧಿಗಳು, ಸಿವಿಲ ಸೊಸೈಟಿ, ಅಭಿವೃದ್ಧಿ ತಜ್ಞರು, ಸಾಮಾಜಿಕ ಕಾರ್ಯಕರ್ತರ ಸಂಘಟಿತವಾಗಿ ಕೈಗೊಳ್ಳುವ ಅಗತ್ಯವಿದೆ.




ಟಿ.ಆರ್.ಚಂದ್ರಶೇಖರ,
ವಿಶ್ರಾಂತ ಪ್ರಾಧ್ಯಾಪಕ,
ಹೊಸಪೇಟೆ.

ಈ ಪಾಪಿ ದುನಿಯಾ...



"ನಾನು ಯಾರ್ಗೂ ಏನೂ ತೊಂದ್ರೆ ಕೊಡ್ತಿಲ್ಲ. ಆದ್ರೂ ಜನ ಯಾಕೋ ನನ್ನ ಬಗ್ಗೆ ಅಪಪ್ರಚಾರ ಮಾಡ್ತಾವ್ರೆ. ನನ್ನ ಹೆಸರಿಗೆ, ಕೆರಿಯರ್‌ಗೆ ಮಸಿ ಬಳಿಯೋ ಕೆಲಸ ಮಾಡ್ತಾವ್ರೆ. ನಾನು ಫಿಸಿಕಲಿ ಫಿಟ್ ಅಲ್ಲ, ನಾನೂ ಯಾವ್ದೋ ಡಿಪ್ರೆಶನ್ ಮೂಡ್‌ನಲ್ಲಿದೀನಿ ಅಂತೆಲ್ಲ ಯಾರ್‍ಯಾರೋ ನನ್ನ ಬಗ್ಗೆ ಮಾತಾಡ್ತಾವ್ರೆ. ಯಾಕೆ ಹಿಂಗೆಲ್ಲ ಮಾಡ್ತಾವ್ರೆ ಅಂತ ಗೊತ್ತಿಲ್ಲ. ಇದ್ನೇ ಚಾಲೆಂಜಾಗ್ ತಗಂಡು 'ಶಿವಾಜಿನಗರ' ಸಿನಿಮಾದಲ್ಲಿ ಸಕತ್ ಸ್ಟಂಟ್ ಮಾಡಿದೀನಿ. ತುಂಬಾ ಹಾರ್ಡ್ ವರ್ಕ್ ಮಾಡಿದೀನಿ. ಜನ ಹಿಂಗೆಲ್ಲ ನನ್ನ ಬಗ್ಗೆ ಸುಂಸುಮ್ನೆ ಅಪಪ್ರಚಾರ ಮಾಡ್ತಿದ್ರೂನು ರಾಮು ಅವರು ನನಗೆ ಒಂದು ಒಳ್ಳೇ ಸಿನಿಮಾ ಕೊಟ್ಟವ್ರೆ. ಅವ್ರಿಗೆ ಥಾಂಕ್ಸ್ ಹೇಳ್ತೀನಿ" ಅನ್ನೋ ಮಾತುಗಳನ್ನ ದುನಿಯಾ ವಿಜಿ ಮೊನ್ನೆ 'ಶಿವಾಜಿನಗರ' ಸಿನಿಮಾ ಕುರಿತ ಪ್ರೆಸ್‌ಮೀಟ್‌ನಲ್ಲಿ ತುಂಬಾ ಬೇಜಾರು ಮಾಡ್ಕೊಂಡು ಹೇಳವ್ರೆ. ಇಷ್ಟಕ್ಕೂ ಯಾರು ಈ ಥರ ವಿಜಿ ಬಗ್ಗೆ ಮಾತಾಡ್ತಾವ್ರೆ, ಯಾಕೆ ಮಾತಾಡ್ತಾವ್ರೆ ಅನ್ನೋದು ಇನ್ನೂ ಪ್ರಶ್ನೆ. ಅಂದಹಾಗೆ, ಬರೋ ಶಿವರಾತ್ರಿಗೆ 'ಶಿವಾಜಿನಗರ' ಸಿನಿಮಾ ಬಿಡುಗಡೆ ಆಗ್ತಿದೆ. ವಿಜಿ ಇಂಥ ಅಪಪ್ರಚಾರದಂಥ ಕ್ಷುಲ್ಲಕ ವಿಷಯಗಳನ್ನ ತಲೆಗೆ ಹಾಕಿಕೊಳ್ಳದೆ ತಮ್ಮ ಮುಂಬರುವ ಸಿನಿಮಾಗಳ ಕಡೆ ಗಮನ ಕೊಡಲಿ ಎಂದು ಹಾರೈಸೋಣ ಅಲ್ಲವೇ?

ಮುರಳಿ ಮರಳಿದಾಗ



ಎಸ್.ನಾರಾಯಣ್ ನಿರ್ದೇಶನದ 'ಚೆಲುವಿನ ಚಿತ್ತಾರ'ದ ಮೂಲಕ 'ಕುಹೂ ಕುಹೂ ಕೋಗಿಲೆ' ಎಂದು ಹಾಡುತ್ತ ರಾತ್ರೋರಾತ್ರಿ ಸ್ಟಾರ್‌ಗಳ ಪಟ್ಟಿಯಲ್ಲಿ ಜಾಗ ಗಿಟ್ಟಿಸಿಕೊಂಡಿದ್ದ ಚಿನ್ನೇಗೌಡ್ರು ಮಗ ಮುರಳಿ ಅದ್ಯಾಕೋ ಆನಂತರದ ದಿನಗಳಲ್ಲಿ 'ಕಂಠಿ', 'ಯಶವಂತ್' ಸೇರಿದಂತೆ ಕೆಲವೊಂದಿಷ್ಟು ಸಿನಿಮಾಗಳನ್ನು ಹೊರತುಪಡಿಸಿದರೆ ಅಷ್ಟಾಗಿ ಸಕ್ಸಸ್ ಕಂಡಿರಲಿಲ್ಲ. ಒಂದಷ್ಟು ಸಿನಿಮಾಗಳು ಅಲ್ಲಲ್ಲಿ ಸಣ್ಣ ಪುಟ್ಟ ಭರವಸೆಗಳನ್ನು ಮೂಡಿಸಿದ್ದರೂ ಅದ್ಭುತವೆನಿಸುವಂಥ ಸಕ್ಸಸ್ ತಂದುಕೊಡುವಲ್ಲಿ ಸೋತಿದ್ದವು. ಮರಳಿ ಯತ್ನವ ಮಾಡು ಎನ್ನುವಂತೆ ಮುರಳಿ ಒಂದು ಸಕ್ಸಸ್‌ಗಾಗಿ ಕಾಯುತ್ತಾ ಹೋದರು. ಅಂಥದೊಂದು ನಿಟ್ಟುಸಿರು ಬಿಡಬಹುದಾದ ಸಕ್ಸಸ್ ಅನ್ನು ಅವರ ಇತ್ತೀಚಿನ ಸಿನಿಮಾ 'ಉಗ್ರಂ' ಅವರಿಗೆ ತಂದು ಕೊಟ್ಟಿದೆ ಅಂತ ಹೇಳಬಹುದು. ಈ ಬಗ್ಗೆ ಮುರಳಿ ಅವರಿಗೆ ಖುಷಿ ಇದೆ. ಅವರೇ ಹೇಳುವಂತೆ "ಏಳೆಂಟು ವರ್ಷಗಳಿಂದ ಇಂಥದೊಂದು ಒಪನಿಂಗ್ ನನ್ನ ಸಿನಿಮಾಗಳಿಗೆ ಸಿಕ್ಕಿರಲಿಲ್ಲ. ನಿಜವಾಗಲೂ 'ಉಗ್ರಂ' ನನ್ನ ಪಾಲಿಗೆ ಖುಷಿ ತಂದು ಕೊಟ್ಟಿರುವ ಸಿನಿಮಾ. ಒಳ್ಳೆ ಒಪನಿಂಗ್ ಜೊತೆಗೆ ಸಿನಿಮಾ ಕೂಡ ಜನರಿಗೆ ಇಷ್ಟ ಆಗ್ತಿರೋದು ನಂಗೆ ಖುಷಿ ನೀಡಿದೆ. ಈ ಸಕ್ಸಸ್‌ನ ನಾನು ಎಂಜಾಯ್ ಮಾಡ್ತಿದೀನಿ" ಎಂಬ ಮಾತುಗಳಿವೆ. ಮುರಳಿ ಇನ್ನಷ್ಟು ಒಳ್ಳೊಳ್ಳೆಯ ಸಿನಿಮಾಗಳನ್ನು ಮಾಡುವಂತಾಗಲಿ ಎಂಬುದು ನಮ್ಮ ಆಶಯ.



ಹಳೇ ಬೊಂಬೆಗೆ ಹೊಸ ಬಣ್ಣ

ಎ.ಆರ್.ಬಾಬು ಗೊತ್ತಲ್ರೀ ನಿಮ್ಗೆ... ಅದೇ ಕಾಮಿಡಿ ಸಿನಿಮಾಗಳನ್ನ ತುಂಬಾ ಸೀರಿಯಸ್ಸಾಗಿ ಮಾಡ್ತಿದ್ರಲ್ಲ ಅದೇ ಎ.ಆರ್.ಬಾಬು. ಈ ಬಾಬು ಕನ್ನಡ ಸಿನಿಮಾ ಇಂಡಸ್ಟ್ರಿಗೆ ಒಳ್ಳೊಳ್ಳೆ ಸಿನಿಮಾಗಳನ್ನ ಕೊಟ್ಟಿರೋದ್ರ ಜೊತೆಗೆ, ಒಂದಿಷ್ಟು ಜನ ಪವರ್‌ಫುಲ್ ಶಿಷ್ಯಂದ್ರನ್ನೂ ಕೊಟ್ಟವ್ರೆ. ಆ ಪವರ್ ಫುಲ್ ಶಿಷ್ಯಂದ್ರ ಪೈಕಿ ಒಬ್ಬ ಶಿಷ್ಯನಂತೂ ಗಿಮಿಕ್ ಮೇಲೆ ಗಿಮಿಕ್ ಮಾಡಿ ಹಂಗೋ ಹಿಂಗೋ ಒಂದು ರೇಂಜಿಗೆ ನೇಮು, ಫೇಮು, ದುಡ್ಡುಕಾಸು ಮಾಡಿಕೊಂಡಿದ್ರ ಜೊತೆಗೆ, ಅವತ್ತಿನ ಕಾಲಕ್ಕೆ ಇಂಡಸ್ಟ್ರಿಯ ಮೋಸ್ಟ್ ಕ್ರೇಜಿ ಕ್ವೀನ್ ಅನ್ನಿಸಿಕೊಂಡಿದ್ದ ಹೀರೋಯಿನ್ ಒಬ್ಬರ ಕುತ್ತಿಗೆಗೆ ತಾಳಿ ಕಟ್ಟಿ, ಆ ತಾಳಿ ಕಟ್ಟೋ ಕಾರ್ಯಕ್ರಮ ಟೀವೀಲಿ ಲೈವ್ ಬರೋ ಥರ ವ್ಯವಸ್ಥೆ ಮಾಡಿ ಒಂದು ರೇಂಜಿಗೆ ಪ್ರಚಾರ ಪಡಕಂಡಿದ್ರು. ಇಷ್ಟೆಲ್ಲಾ ಹೇಳಿದ್ ಮೇಲೆ ಆ ಪ್ರತಿಭೆ ಹೆಸರು ಜೋಗಿ ಪ್ರೇಮ್ ಎಂಬೋ ಸತ್ಯವು ನಿಮಗೆ ಹೊಳೆದಿರ್ಬೇಕು ಬಿಡಿ.

ಇಂಥ ಪ್ರೇಮ್‌ಗೇ ಗುರು ಆಗಿರುವ ಎ.ಆರ್.ಬಾಬು ತಮ್ಮ ಮಗನ್ನ ಹೆಂಗಾರ ಮಾಡಿ ಹೀರೋ ಮಾಡ್ಬೇಕಲ್ಲ ಅಂತ ಸ್ಕೆಚ್ ಹಾಕ್ತಾನೆ ಇದ್ರು. ಆ ಸ್ಕೆಚ್‌ಗೆ ಪ್ರೇಮ್ ಕೂಡ 'ಮಾಡಿ ಬಾಸ್ ಫುಲ್ ಸಪೋರ್ಟ್ ಮಾಡುವಾ' ಅಂತ ಗುರುಗಳ ಕಿವಿಯಲ್ಲಿ ಹೇಳಿದ್ದೂ ಉಂಟು. ಅದೇ ಜೋಶ್‌ನಲ್ಲಿ ಬಾಬು ಅವರಿವರನ್ನ ಹಿಡಿದು ಮಗನಿಗೊಂದು ಸಿನಿಮಾ ಶುರು ಮಾಡಿಸಿದ್ರು. ಆ ಸಿನಿಮಾಗೆ ತಮ್ಮ ಮಗ ಬೊಂಬೆ ಅಲಿಯಾಸ್ ಶಾನ್ ಹೀರೋ ಕಂ ಡೈರೆಕ್ಟರ್ ಅಂತಲೂ ಡಿಸೈಡ್ ಮಾಡಿದ್ರು. ಬಾಬಿ ಅನ್ನೋ ಹೆಣ್ ಮಗಳ ಕೈಲಿ ಸಾಂಗ್ಸ್ ಕೂಡ ಮಾಡ್ಸಿದ್ರು. ಆದ್ರೆ, ಅದ್ಯಾಕೋ ಬೊಂಬೆ ಸಿನಿಮಾ ಅರ್ಧಕ್ಕೆ ನಿಂತುಹೋಗಿತ್ತು. 'ಅರೆ ಇಸ್ಕಿ' ಅಂತ ಬಾಬು ತಲೆ ಕೆಡಿಸ್ಕೊಂಡು, ಪಾನ್ ಪರಾಗ್ ಹಾಕೊಂಡು ಓಡಾಡ್ತಾ ಇದ್ರು. ಈಗ ಕಾಲ ಬದಲಾಗೈತೆ. ಬೊಂಬೆಗೆ ಜೀವ ತುಂಬೋಕೆ ಯಾರೋ ಪುಣ್ಯಾತ್ಮರು ಬಂದವ್ರೆ. ಅವತ್ತು ಮೂಲೆ ಸೇರಿದ್ದ ಸಿನಿಮಾ ಇವತ್ತು ಕಣ್ಣುಜ್ಜಿಕೊಂಡು ಕತ್ತಲಿನಿಂದ ಈಚೆ ಬರ್ತಿದೆ. "ಬಾಸು ಅದೇ ಹಳೇ ಕಥೆ" ಅಂತ ಟೈಟಲ್ ಇಟ್ಕೊಂಡು ಪೂರ್ತಿ ಶೂಟಿಂಗ್ ಮುಗಿಸ್ಕೊಂಡಿದೆ. ಸದ್ಯಕ್ಕೆ ಡಿಟಿಎಸ್ ಕೆಲಸ ನಡೀತಿದೆ. ಎ.ಆರ್.ಬಾಬು ಅವರ ಮಗಂಗೆ ಆಲ್ ದಿ ಬೆಸ್ಟ್ ಹೇಳಿಬಿಡೋಣ ಅಲ್ವೇ?



ಹೆಸರಲ್ಲಿ ಏನಿದೆ?

ಯಾರಾದ್ರು, ಯಾರ ಮುಂದೇನಾದ್ರು, ಏನಾದ್ರು ಚಾಲೆಂಜ್ ಹಾಕಬೇಕಾಗಿ ಬಂದಾಗ 'ನಾನು ಮೀಸೆ ಬೋಳಿಸ್ಕೊಳ್ತೀನಿ, ನನ್ನ ಹೆಸರು ಬದಲಾಯಿಸ್ಕೊಳ್ತೀನಿ' ಅನ್ನೋ ಡೈಲಾಗ್ ಹೊಡೆಯೋದನ್ನ ನೀವು ಕೇಳಿರ್ತೀರಿ. ಇಂಥ ಡೈಲಾಗ್‌ಗಳನ್ನು ಸಿನಿಮಾದವರಲ್ಲದೆ ಬೇರೆ ಯಾರೂ ಕೂಡ ಸಂಶೋಧಿಸಲು ಸಾಧ್ಯವಿಲ್ಲ ಅಲ್ವಾ? ಇಷ್ಟಕ್ಕೂ ವಿಶೇಷವಾಗಿ ಈ 'ಹೆಸರು ಬದಲಾಯಿಸಿಕೊಳ್ತೀನಿ' ಅನ್ನೋ ಡೈಲಾಗ್ ಹಿಂದೆ ಒಂದು ಥರದ ಕಾನ್ಫಿಡೆನ್ಸ್ ಇರುತ್ತೆ. ತಾವು ಆ ಚಾಲೆಂಜ್‌ನಲ್ಲಿ ಸೋಲುವುದಿಲ್ಲ ಅನ್ನೋ ಭರವಸೆ ಇರುತ್ತೆ. ಆದ್ರೆ, ಇದೇ ಸಿನಿಮಾ ಮಂದಿ ಆಗಾಗ ಹೆಸರು ಚೇಂಜ್ ಮಾಡಿಕೊಳ್ತಾರಲ್ಲ, ಅದರ ಹಿಂದೆ ಯಾವ ಸೋಲಿರುತ್ತದೆ? ಯಾವ ಅಪಮಾನವಿರುತ್ತದೆ? ಅನ್ನೋದು ಇನ್ನೂ ಯಕ್ಷಪ್ರಶ್ನೆ. ಇಷ್ಟಕ್ಕೂ ಹಿರಿಯ ಘಟಾನುಘಟಿಗಳಿಂದ ಹಿಡಿದು, ನಿನ್ನೆಮೊನ್ನೆಯ ಪಿಳ್ಳೆಪಿಸುಕ್ಕಗಳವರೆಗೂ ಬಹುತೇಕ ಸಿನಿಮಾ ಮಂದಿಯ ಆದರಲ್ಲೂ ನಟ/ನಟಿಯರ ಹೆಸರುಗಳು ಒರಿಜಿನಲ್ ಅಲ್ಲ. ಅವರ ಶಾಲಾಕಾಲೇಜುಗಳ, ಬ್ಯಾಂಕ್ ಅಕೌಂಟು ಇತ್ಯಾದಿ ದಾಖಲೆಗಳಲ್ಲಿರುವ ಹೆಸರಿಗೂ ಪರದೆಯ ಮೇಲೆ ಕಲರ್‌ಫುಲ್ಲಾಗಿ ಮೂಡಿ ಬರುವ ಹೆಸರುಗಳಿಗೂ ಸಂಬಂಧವೇ ಇರುವುದಿಲ್ಲ. ಇಷ್ಟಕ್ಕೂ ಹೀಗೆ ಹೆಸರು ಬದಲಾಯಿಸ್ಕೊಳ್ಳುವುದರ ಹಿಂದೆ ಅಡಗಿರಬಹುದಾದ ಗುಟ್ಟಾದರೂ ಏನಿರಬಹುದು? ಆ ಗುಟ್ಟೇ ನ್ಯೂಮರಾಲಜಿ ಅನ್ನೋ ಐದಕ್ಷರದ ಮಾಯಕ ಪದ. ಕೆಲವು ಸಂಖ್ಯಾಶಾಸ್ತ್ರಿಗಳು ರಾಶಿಗೀಶಿ, ಕುಲಗೋತ್ರ, ಜಾತಕಗೀತಕ ಅಂತ ಏನೇನೋ ಅಸಂಬದ್ಧಗಳನ್ನೆಲ್ಲ ಹೇಳಿ ಆ ನಟನಟಿಯರ ಅಪ್ಪ ಅಮ್ಮ ಪ್ರೀತಿಯಿಂದ ಇಟ್ಟಿರುವ ಹೆಸರುಗಳನ್ನು ಡಮಾರ್ ಅಂತ ಬದಲಾಯಿಸಿಬಿಡುತ್ತಾರೆ. ಆ ಘನಕಾರ್ಯಕ್ಕೆ ಒಂದಿಷ್ಟು ಕಾಸುಗೀಸು ವಸೂಲಿ ಮಾಡಿ ಹೊಟ್ಟೆ ಹೊರೆಯುತ್ತಾರೆ. ಈ ಸಿನಿಮಾ ಮಂದಿ ಸಂಖ್ಯಾಶಾಸ್ತ್ರಿಗಳ ಮಾತು ನಂಬಿ ಯಾವಾಗ ತಮ್ಮ ಹೆಸರು ಬದಲಾಯಿಸಿಕೊಳ್ಳುತ್ತಾರೋ ಅಲ್ಲಿಂದಾಚೆಗೆ ತಮ್ಮ ಹಣೆಬರಹವೂ ಬದಲಾಯ್ತು, ಅದೃಷ್ಟವೂ ಖುಲಾಯಿಸಿತು ಅಂತ ತಲೆ ಎತ್ತಿ ಓಡಾಡಲು ಶುರು ಮಾಡ್ತಾರೆ. ಹೀಗೆ 'ನನ್ನ ಹೆಸರು ಬದಲಾಯಿ ಕೊಳ್ತೀನಿ' ಅನ್ನೋವ್ರ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಿರೋ ಹೆಸರೇ ಪಾವನ. 'ಬೊಂಬೆಗಳ ಲವ್' ಸಿನಿಮಾದಲ್ಲಿ ನಟಿಸಿ ಹೆಸರು ಮಾಡಿದ ಈಕೆ ಆ ಹೆಸರೇ ಬೇಡ ಅಂತ ಪಟ್ಟು ಹಿಡಿದು ಕೂತು ಕೊನೆಗೆ 'ವೃಂದಾ' ಆಗಿದ್ದಾರೆ. ಸೃಜನ್ ಜೊತೆಗಿನ ಅವರ ಮುಂದಿನ 'ಟಿಪಿಕಲ್ ಕೈಲಾಸ' ಸಿನಿಮಾದಲ್ಲಿ ಈ ಪಾವನ, ವೃಂದಾ ಆಗಲಿದ್ದಾರೆ. ಇಷ್ಟಕ್ಕೂ ಈ ಹುಡುಗಿ ತನ್ನ ಹೆಸರು ಬದಲಾಯಿಸ್ಕೊಳ್ಳುತ್ತಿರುವುದರ ಹಿಂದೆ ಯಾವುದೇ ನ್ಯೂಮರಾಲಜಿಯ ಕಾರಣವೂ ಇರದೇ, ಎಲ್ಲರೂ ತನ್ನ ಹೆಸರನ್ನು 'ಪಾವನ, ಪಾವನಾ, ಪವನಾ' ಅಂತೆಲ್ಲ ತಮ್ಮ ತಮ್ಮ ಮನಸಿಗೆ ತೋಚಿದಂತೆ ಕರೆಯುವುದರ ಹಿನ್ನೆಲೆಯಿಂದ, ಆ ಕುರಿತ ಗೊಂದಲದಿಂದ ಹೀಗೆ 'ನನ್ನ ಹೆಸರು ಬದಲಾಯಿಸಿ ಕೊಳ್ತೀನಿ' ಅನ್ನೋ ನಿರ್ಧಾರಕ್ಕೆ ಬಂದಿರುವುದಾಗಿ ಹೇಳಿಕೊಂಡಿದ್ದಾರೆ. ಆದಷ್ಟು ಬೇಗ ಜನ ಪಾವನಿಯನ್ನು ಮರೆತು, ವೃಂದಾಳನ್ನು ಆರಾಧಿಸುವಂತಾಗಲಿ.




Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/-

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್
ಲಂಕೇಶ್ ಬಳಗ
ಲೋಹಿಯಾ ಪ್ರತಿಷ್ಠಾನ
ದಲಿತ ಸಾಹಿತ್ಯ ಪರಿಷತ್ (ರಾಯಚೂರು)
ಮನುಜ ಮತ ಬಳಗ (ಸಿಂಧನೂರು)
ಇವರ ಸಂಯುಕ್ತಾಶ್ರಯದಲ್ಲಿ

ಪಿ. ಲಂಕೇಶ್ ಅವರ 79ನೇ ಜನ್ಮೋತ್ಸವ ಕಾರ್ಯಕ್ರಮ

ವಿಚಾರಗೋಷ್ಠಿಗಳು – ಪುಸ್ತಕಗಳ ಬಿಡುಗಡೆ – ಸಾಂಸ್ಕೃತಿಕ ಕಾರ್ಯಕ್ರಮಗಳು

ದಿನಾಂಕ: 09–03–2014ರ ಭಾನುವಾರ ಬೆಳಗ್ಗೆ 10:00ಕ್ಕೆ,
ಸ್ಥಳ: ಜಂಬಲದಿನ್ನಿ ರಂಗಮಂದಿರ, ರಾಯಚೂರು



ಉದ್ಘಾಟನಾ ಸಮಾರಂಭ ಬೆಳಗ್ಗೆ : 10 ಗಂಟೆ

ಸ್ವಾಗತ
ಮಹಾಂತೇಶ ಮಸ್ಕಿ
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು
ಕಾರ್ಯಕ್ರಮದ ಕುರಿತು
ಕುಮಾರ್ ಸಮತಳೆ
ಕರ್ನಾಟಕ ಜನಶಕ್ತಿ, ಹೈದ್ರಾಬಾದ್ ಕರ್ನಾಟಕ ವಿಭಾಗ
ಅಧ್ಯಕ್ಷತೆ
ಗೌರಿ ಲಂಕೇಶ್
ಸಂಪಾದಕರು, 'ಲಂಕೇಶ್' ವಾರಪತ್ರಿಕೆ, ಬೆಂಗಳೂರು
ಕಾರ್ಯಕ್ರಮದ ಉದ್ಘಾಟನೆ
ಕುಂ.ವೀರಭದ್ರಪ್ಪ
ಸಾಹಿತಿಗಳು, ಕೊಟ್ಟೂರು
ಪುಸ್ತಕಗಳ ಬಿಡುಗಡೆ
ಸಿ.ದಾನಪ್ಪ ನಿಲೋಗಲ್
ಕವಿಗಳು, ರಾಯಚೂರು
ಪಿ.ಲಂಕೇಶ್ –ಒಂದು ನೆನಪು
ಡಾ.ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಒಡಲ ನುಡಿ
ಸಿ.ಬಿ.ಪಾಟೀಲ್ ಓಕಳಿ, ಗುಲಬರ್ಗಾ
ಡಾ. ಕೆ.ಶಿವರಾಜ್, ಸಿಂಧನೂರು
ಡಾ. ಕಾವೇರಿ ಶ್ಯಾವಿ, ಕಾರಟಗಿ
ಎಂ.ನಾಗರಾಜ್, ರಾಯಚೂರು
ಅಮರೇಶ ಕುಂಬಾರ, ಲಿಂಗಸೂಗೂರು,
ರಾಜಾ ಮದನ್‌ಗೋಪಾಲ ನಾಯಕ, ಸುರಪುರ
ಎಂ.ಮೂಲಿಮನಿ ಪಾಷಾ, ರಾಯಚೂರು
ವಿಶ್ವಾರಾಧ್ಯ ಸತ್ಯಂಪೇಟೆ, ಚನ್ನಬಸವಣ್ಣ, ಪತ್ರಕರ್ತರು, ರಾಯಚೂರು
ಕೆ. ಸತ್ಯನಾರಾಯಣ, ಪತ್ರಕರ್ತರು, ರಾಯಚೂರು

ಅತಿಥಿಗಳು
ಭೀಮನಗೌಡ ಇಟಗಿ, ಲೋಹಿಯಾ ಪ್ರತಿಷ್ಠಾನ
ಈ ಆಂಜಿನೇಯ, ಉದ್ಯಮಿಗಳು, ರಾಯಚೂರು
ರಾಜು ಭೀಮಳ್ಳಿ, ಸದಸ್ಯರು ಹೈ.ಕ.ಶಿ.ಸಂಸ್ಥೆ, ಗುಲ್ಬರ್ಗಾ
ಪದ್ಮವರ್ಧನ್, ವಕೀಲರು, ರಾಯಚೂರು
ತಾಯರಾಜ್ ಮರ್ಚೆಟ್ಹಾಳ್, ದಲಿತ ಸಾಹಿತ್ಯ ಪರಿಷತ್, ರಾಯಚೂರು
ಕಲಿಗಣನಾಥ ಗುಡದೂರು, ಕಥೆಗಾರರು, ಸಿಂಧನೂರು
ವೈ.ನರೇಂದ್ರನಾಥ, ಸಿಂಧನೂರು
ಡಾ.ಲಿಂಗಣ್ಣ ಗಾಣಧಾಳ, ತಾಲೂಕ್ ಕನ್ನಡ ಸಾಹಿತ್ಯ ಪರಿಷತ್, ರಾಯಚೂರು
ತಿಮ್ಮಾರೆಡ್ಡಿ ಕೆ.ಪಿ.ಟಿ.ಸಿ.ಎಲ್, ಎಸ್.ಸಿ./ಎಸ್.ಟಿ. ಯೂನಿಯನ್, ಶಕ್ತಿನಗರ
ಬಸವರಾಜ ಬಾದರ್ಲಿ, ಪ್ರಗತಿಪರ ಹೋರಾಟಗಾರರು, ಸಿಂಧನೂರು

ಕಾರ್ಯಕ್ರಮ ನಡೆಸಿಕೊಡುವವರು
ಕೆ.ಗಿರಿಜಾ ಮತ್ತು ಶರಣಬಸವ ಪಾಟೀಲ್

ವಿಚಾರ ಗೋಷ್ಠಿ–1 (ಮಧ್ಯಾಹ್ನ 12 ಗಂಟೆ)

ವಿಷಯ: ಪ್ರಸ್ತುತ ರಾಜಕೀಯದ ಮಗ್ಗಲುಗಳು
ಮಾತನಾಡುವವರು
ಎ.ಕೆ.ಸುಬ್ಬಯ್ಯ,
ಹಿರಿಯ ಚಿಂತಕರು, ಬೆಂಗಳೂರು
ಡಾ.ಶಿವಗಂಗಾ ರುಮ್ಮಾ,
ಕೇಂದ್ರೀಯ ವಿಶ್ವವಿದ್ಯಾಲಯ, ಗುಲಬರ್ಗಾ
ಚಾಮರಸ ಮಾಲಿಪಾಟೀಲ್,
ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತಸಂಘ, ರಾಯಚೂರು
ಕೆ.ಎಲ್. ಅಶೋಕ,
ಕಾರ್ಯದರ್ಶಿಗಳು, ಕರ್ನಾಟಕ ಕೋಮುಸೌಹಾರ್ದ ವೇದಿಕೆ

ಅಧ್ಯಕ್ಷತೆ
ವಿಠ್ಠಪ್ಪ ಗೋರಂಟ್ಲಿ, ಪ್ರಗತಿಪರ ಚಿಂತಕರು, ಕೊಪ್ಪಳ

ಕಾರ್ಯಕ್ರಮ ನಡೆಸಿಕೊಡುವವರು
ಎಸ್.ದೇವೇಂದ್ರಗೌಡ, ಸಿಂಧನೂರು

ವಿಚಾರ ಗೋಷ್ಠಿ–2 (ಮಧ್ಯಾಹ್ನ: 3 ಗಂಟೆ)

ವಿಷಯ: ಹೈದ್ರಾಬಾದ್ ಕರ್ನಾಟಕ : ವರ್ತಮಾನ–ಭವಿಷ್ಯ
ಮಾತನಾಡುವವರು
ಚಂದ್ರಶೇಖರ ತುರವೀಹಾಳ
ಸ್ಥಾನಿಕ ಸಂಪಾದಕರು, ವಿಜಯ ಕರ್ನಾಟಕ, ಗಂಗಾವತಿ ಆವೃತ್ತಿ
ಸಿರಿಗೆರೆ ಪೊನ್ನರಾಜ್, ಪ್ರಗತಿಪರ ಹೋರಾಟಗಾರರು, ಬಳ್ಳಾರಿ
ಡಿ.ಹೆಚ್.ಕಂಬಳಿ, ಪತ್ರಕರ್ತರು, ಸಿಂಧನೂರು
ರಜಾಕ್ ಉಸ್ತಾದ್
ಹೈದ್ರಬಾದ್ ಕರ್ನಾಟಕ ಜನಾಂದೋಲನ ಸಮಿತಿ, ರಾಯಚೂರು.

ಅಧ್ಯಕ್ಷತೆ
ವೀರ ಹನುಮಾನ್, ಪ್ರಗತಿಪರ ಚಿಂತಕರು, ರಾಯಚೂರು

ಪ್ರತಿಕ್ರಿಯೆ
ಕೆ. ಸರೋಜಾ ಬಳ್ಳಾರಿ
ಬಿ.ಪೀರಬಾಷಾ
ಅಂಬಣ್ಣ ಅರೋಲಿಕರ್
ಕೆ.ರಾಮಕೃಷ್ಣ
ದಸ್ತಗೀರ ಸಾಬ್ ದಿನ್ನಿ
ಜೆ.ಎಲ್ ಈರಣ್ಣ
ಅಯ್ಯಪ್ಪ ಹೂಗಾರ
ಕೈದಾಳ್ ಕೃಷ್ಣಮೂರ್ತಿ

ಕಾರ್ಯಕ್ರಮ ನಡೆಸಿಕೊಡುವವರು
ಕೊರೇನಲ್ ಮತ್ತು ಬಸವರಾಜ ಹಳ್ಳಿ

ಸಮಾರೋಪ ಸಮಾರಂಭ (ಸಂಜೆ: 6–30 ಗಂಟೆ)

ಮಾತನಾಡುವವರು
ರಂಜಾನ್ ದರ್ಗಾ
ರಾಘವೇಂದ್ರ ಕುಷ್ಟಗಿ
ಆರ್. ಮಾನಸಯ್ಯ

ಉಪಸ್ಥಿತಿ
ಗೌರಿ ಲಂಕೇಶ್
ಶ್ರೀಕಾಂತ, ವಕೀಲರು
ಜಯಣ್ಣ, ಅಧ್ಯಕ್ಷರು, ಎಸ್‌ಡಿಎಂಸಿ
ಜಗದೀಶ್ ಗುಪ್ತ
ಎಸ್.ಶರಣೇಗೌಡ, ಸಿಂಧನೂರು

ಸಾಂಸ್ಕೃತಿಕ ಕಾರ್ಯಕ್ರಮಗಳು
ಡಿಂಗ್ರಿ ನರಸಪ್ಪ
ಎನ್.ಬಿ. ಲಕ್ಷ್ಮೀರೆಡ್ಡಿ
ಹಾಗೂ ಬಸವರಾಜ ಎಕ್ಕಿ ಮತ್ತು ಅಬ್ರಹಾಂ

ಅಂದು ನಮ್ಮ ಪ್ರಕಾಶನದ ಪುಸ್ತಕಗಳು ರಿಯಾಯತಿ ದರದಲ್ಲಿ ಲಭ್ಯವಿರುತ್ತದೆ

ಸಂಪರ್ಕ
ಕುಮಾರ ಸಮತಳ (ಮೊ 9880292674)
ಮಹಾಂತೇಶ ಮಸ್ಕಿ (ಮೊ 9448270359)
ಬಸವರಾಜ ಬಾದರ್ಲಿ (9980446160)
ತಾಯರಾಜ್ ಮರ್ಚಟ್ಹಾಳ್ (9742926390)

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com